
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್

30 ಮಾರ್ಚ್ 2016 ಪುಟ 20 ರೂ. 15/-



ಮಡಿಲು ಬರಿದಾಯಿತು
ಚಸರಾ ಇನ್ನಿಲ್ಲ




ದುರಂತ ಸಾರಥಿ

ಮಂಡ್ಯ
ಅಧ್ಯಕ್ಷಗಾದಿಗೆ ಅರ್ಧಕೋಟಿ ರೂ.ವೆಚ್ಚ


ಭಟ್ಕಳ
ಬೆಂಕಿ ಇಕ್ಕಲು ಸಂಘ ಸಂಚು

ಮಂಡ್ಯ
ಭಜ್ರಂಗಿ ರಾಜು ಹತ್ಯೆಯ ಸುತ್ತ...



ಬಿಳಿಮಲೆ ಭಾಷಣದ ಪೂರ್ಣಾಹಾರ

ವೋಟಿನ ಮಾರಾಟ ತಡೆಗಟ್ಟುವ ಕಾರ್ಯಸೂಚಿ ಬೇಕಿಲ್ಲವೇ




ಈ ಸದ್ಯ ನಮ್ಮ ದೇಶದಲ್ಲಿ ಪ್ರತೀ ಚುನಾವಣೆಯೂ ಹಿಂದಿನ ಚುನಾವಣೆಗಿಂತ ಹೆಚ್ಚು ಕೆಡುತ್ತಿದೆ. ವ್ಯಕ್ತಿಗತ ನಿಂದನೆ, ಜಾತಿ-ಧರ್ಮಗಳ ಬಳಕೆ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಹಣದ ಬಳಕೆಯ ದೃಷ್ಟಿಯಿಂದ ಈ ಕೆಡುವಿಕೆ ಹೆಚ್ಚಾಗುತ್ತಿದೆ. ಇದರ ಆಚೆಗೆ ಆ ಸಂದರ್ಭದ ನಿರ್ದಿಷ್ಟ ಸಮಸ್ಯೆಗಳೂ ಚರ್ಚೆಗೆ ಒಳಗಾಗುತ್ತವೆ; ಹಿಂದಿನ ಅವಧಿಯಲ್ಲಿ ಆಳ್ವಿಕೆ ನಡೆಸಿದ ಪಕ್ಷದ ಸಾಧನೆ ಮತ್ತು ವೈಫಲ್ಯಗಳೂ ಫಲಿತಾಂಶವನ್ನು ನಿರ್ಧರಿಸುವಲ್ಲಿ ಒಂದಷ್ಟು ಪಾತ್ರವನ್ನು ವಹಿಸುತ್ತವೆ. ಪ್ರತೀ ವೋಟಿಗೆ ಹಣ ನೀಡಿ ಕೊಳ್ಳುವುದು ಕಳೆದ ಒಂದೊವರೆ ದಶಕದ ವಿದ್ಯಮಾನವಾಗಿದೆ. ಅದಕ್ಕೂ ಹಿಂದೆ ಮತದಾರರಿಗೆ ಚುನಾವಣೆಗಳಲ್ಲಿ ಹೆಂಡ ಕುಡಿಸುವುದು ಇತ್ತು, ಅದರೊಂದಿಗೆ ಈಡೇರಿಸದ ಭರವಸೆಗಳನ್ನೂ ಕುಡಿಸಲಾಗುತ್ತಿತ್ತು. ಈಗಲೂ ಮದ್ಯದ ವಹಿವಾಟೇನೂ ಕಡಿಮೆಯಾಗಿಲ್ಲ, ವೋಟಿಗೆ ಹಣ ನೀಡುವುದು ಮಾತ್ರ ಹೆಚ್ಚಾಗುತ್ತಿದೆ.

ಇದು ದೇಶದ ಎಲ್ಲಾ ರಾಜ್ಯಗಳಲ್ಲೂ ಒಂದೇ ತೆರನಾಗಿಲ್ಲ, ಕರ್ನಾಟಕವೂ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಹೆಚ್ಚಾಗಿದೆ. ಅಕ್ರಮ ಉದ್ದಿಮೆಗಳನ್ನು ನಡೆಸುವವರು ರಾಜಕಾರಣದಲ್ಲಿ ನೇರಪ್ರವೇಶ ಮಾಡಿದ್ದು ಮತ್ತು ರಾಜಕಾರಣದಲ್ಲಿ ಇರುವವರೂ ಅಕ್ರಮ ಉದ್ದಿಮೆಗಳನ್ನು ನಡೆಸುವುದು ಹೆಚ್ಚಾದಂತೆ ಮತವನ್ನು ಕೊಳ್ಳುವ ವಿದ್ಯಮಾನ ತೀವ್ರ ರೂಪದಲ್ಲಿ ವ್ಯಾಪಿಸಿದೆ; ವ್ಯಾಪಿಸುತ್ತಿದೆ. ಆತಂಕಕಾರಿ ಸಂಗತಿಯೇನೆಂದರೆ, ಇದಕ್ಕೆ ಸಾರ್ವಜನಿಕ ವಲಯದಲ್ಲಿ ಮಾನ್ಯತೆ ಪ್ರಾಪ್ತವಾಗುತ್ತಿದೆ. ಕೆಲವು ಕಾಲ ಮುಖ್ಯಮಂತ್ರಿ ಸ್ಥಾನದಲ್ಲಿ ಕುಳಿತಿದ್ದ ಕುಮಾರಸ್ವಾಮಿಯಂತಹ ರಾಜಕಾರಣಿ ಗಳೂ ಸೇರಿದಂತೆ, ಹಲವರು ಇದನ್ನು ಬಹಿರಂಗವಾಗಿ ಹೇಳುವಾಗ ಯಾವ ಮುಜುಗರವನ್ನೂ ಅನುಭವಿಸುವುದಿಲ್ಲ, ಈ ರೀತಿ ಮಾತನಾಡುವವರನ್ನು 'ಇದ್ದುದನ್ನು ನೇರವಾಗಿ ಹೇಳುವ ಧೈರ್ಯ ತೋರಿಸಿದವರು' ಎಂದು ಜನರು ಭಾವಿಸುವಂತಾಗಿದೆ.

ಸಾರ್ವಜನಿಕವಾಗಿ ಮತ್ತು ಖಾಸಗಿಯಾಗಿ ಎಲ್ಲರೂ ಇದರ ಬಗ್ಗೆ ಖೇದ ವ್ಯಕ್ತಪಡಿಸುತ್ತಾರೆ; ಆಕ್ಷೇಪಣೆಯನ್ನು ದಾಖಲಿಸುತ್ತಾರೆ; ಆದರೆ ಇದರ ಸುತ್ತಲೇ ಯಾರೂ ಕಾರ್ಯಕ್ರಮ ರೂಪಿಸುತ್ತಿಲ್ಲ, ಇದರ ಅಗತ್ಯವಿದೆಯೇ ಇಲ್ಲವೇ ಎಂಬುದನ್ನು ಚರ್ಚಿಸುವ ಉದ್ದೇಶವನ್ನು ಲೇಖನವು ಹೊಂದಿದೆ.

ಇದುವರೆಗೆ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಹಣದ ಚಲಾವಣೆ ದೊಡ್ಡ ಪ್ರಮಾಣಕ್ಕೆ ಇರಲಿಲ್ಲ, ಕಳೆದ ವರ್ಷ ನಡೆದ ಗ್ರಾ.ಪಂ ಚುನಾವಣೆಯಲ್ಲಿ ಅದು ಎಗ್ಗಿಲ್ಲದೇ ನಡೆಯಿತು. ಅಂದರೆ, ಪಂಚಾಯ್ತಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ತಮ್ಮ ಎದುರು ಮನೆಯವರ ಹತ್ತಿರ, ತಮ್ಮದೇ ಬಂಧುಗಳ ಹತ್ತಿರವೂ ಹಣ ತೆಗೆದುಕೊಂಡು ವೋಟು ಹಾಕುವ ಪರಿಸ್ಥಿತಿ ಬಂದಿರುವುದು ಯಾವ ರೀತಿಯ ರಾಜಕೀಯ ಮೌಲ್ಯವನ್ನು ನಿರ್ಮಾಣ ಮಾಡಬಹುದು? ಈ ರೀತಿ ಗೆದ್ದವರು, ನಂತರದ ಸ್ಥಳೀಯ ಸಂಸ್ಥೆಗಳ ಕ್ಷೇತ್ರದ ಎಂಎಲ್‌ಸಿ ಚುನಾವಣೆಯ ಮತದಾರರಾಗಿದ್ದರು. ಅವರಲ್ಲಿ ಹೆಚ್ಚಿನವರು ಹಣ ತೆಗೆದುಕೊಂಡೇ ವೋಟು ನೀಡಿದರು. ಮಂಡ್ಯ ಜಿಲ್ಲಾ ಕ್ಷೇತ್ರದಲ್ಲಿ ಅದುವರೆಗೆ ಯಾರಿಗೂ ಪರಿಚಯವಿರದಿದ್ದ ಅಪ್ಪಾಜಿಗೌಡ ಎಂಬ ವ್ಯಕ್ತಿ ಗೆದ್ದುಹೋದರು. ಅವರು ಗ್ರಾ.ಪಂ ಸದಸ್ಯರಿಗೆ 36,000 ರೂ., ತಾ.ಪಂ ಸದಸ್ಯರಿಗೆ 45,000 ರೂ. ಮತ್ತು ಜಿ.ಪಂ ಸದಸ್ಯರಿಗೆ 81,000 ರೂ ನೀಡಿದರೆಂಬುದು ಜಗಜ್ಜಾಹೀರಾಗಿದೆ. ಇಡೀ ಜಿಲ್ಲೆಯಲ್ಲಿ ಈ ಹಣವನ್ನು ನಿರಾಕರಿಸಿದ ಮತದಾರರ ಸಂಖ್ಯೆ ಹೆಚ್ಚೆಂದರೆ 15 ಇರಬಹುದು.

ಈ ವ್ಯಕ್ತಿ ಇಷ್ಟು ಹಣ ನೀಡದೇ ಇದ್ದರೂ ಗೆದ್ದು ಬರುವ ಸಾಧ್ಯತೆ ಇತ್ತು, ಆದರೂ ಇಷ್ಟು ಹಣ ನೀಡಿದ್ದಾಕೆ ಎಂದು ಅವರ ಪಕ್ಷದವರೊಬ್ಬರು ಕೇಳಿದರಂತೆ. ಅದಕ್ಕೆ ಆತ 'ಹೌದು, ಅಷ್ಟು ಖರ್ಚು ಮಾಡುವ ಅಗತ್ಯವಿರಲಿಲ್ಲ, ಆದರೆ, ಅಪ್ಪಾಜಿ ಗೌಡ ಬಂದವ್ನೆ ಅಂದರೆ ಹೆದರಿಕೋಬೇಕು. ಅದಕ್ಕೆ ಅಷ್ಟು ಹಣ ಕೊಟ್ಟೆ' ಎಂದು ಹೇಳಿದರೆಂಬ ಸುದ್ದಿ ಹರಿದಾಡುತ್ತಿದೆ. ಇದಾದನಂತರ ತಾ.ಪಂ. ಜಿ.ಪಂಗಳ ಚುನಾವಣೆಗಳು ನಡೆದವು. ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಕೆಲವು ಜಿ.ಪಂ ಕ್ಷೇತ್ರಗಳಲ್ಲಿ ಕೋಟಿ ರೂ.ವರೆಗೆ ಖರ್ಚು ಮಾಡಿದರು. ಇನ್ನೂ ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆ ನಡೆದಿಲ್ಲ, ಆಗ ಅಲ್ಲಿ ವೋಟು ಹಾಕುವ ಜಿ.ಪಂ ಸದಸ್ಯರು ಎಷ್ಟು ಹಣ ಕೇಳಬಹುದು? ಅದರಲ್ಲೂ ಹಲವಾರು ಜಿಲ್ಲೆಗಳಲ್ಲಿ ಯಾವ ಒಂದು ಪಕ್ಷಕ್ಕೂ ಬಹುಮತ ಇರದೇ ಅತಂತ್ರ ಸ್ಥಿತಿ ನಿರ್ಮಾಣವಾಗಿದೆ. ಅಲ್ಲಿ ಪರಿಸ್ಥಿತಿ ಹೇಗಿರಬಹುದು ಎಂದು ಊಹಿಸಿಕೊಳ್ಳಬೇಕೆಂದರೆ, ಈ ಸದ್ಯ ನಡೆಯುತ್ತಿರುವ ಮಂಡ್ಯ ನಗರಸಭೆಯ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನದ ಚುನಾವಣೆಯನ್ನು ನೋಡಬೇಕು. ಏಕೆಂದರೆ, ಅಲ್ಲಿಯೂ ಯಾವ ಪಕ್ಷಕ್ಕೂ ಬಹುಮತವಿಲ್ಲ.



ಈ ಸ್ಥಾನಗಳಿಗೆ ಚುನಾವಣೆ ನಡೆದಾಗ ಸ್ವಪಕ್ಷೀಯರಿಗೆ 2 ಲಕ್ಷ ರೂ., ಪಕ್ಷೇತರರು ಮತ್ತು ಬೇರೆ ಪಕ್ಷದವರಿಗೆ 4 ಲಕ್ಷ ರೂ. ಕೊಡಬಲ್ಲ ಸಾಮರ್ಥ್ಯ ಇರುವವರು ಪ್ರಯತ್ನಿಸಿ ಎಂದು ಅವರ ಪಕ್ಷಗಳ ನಾಯಕರು ಸೂಚಿಸಿದ್ದು ಸುದ್ದಿಯಾಗಿದೆ. ಕಳೆದ ವಾರ 'ಲಂಕೇಶ್' ವಾರಪತ್ರಿಕೆಯಲ್ಲಿ ಬಂದಿರುವ ವರದಿಯೇ ಹೇಳುವಂತೆ, ಈ ಹರಾಜಿನಲ್ಲಿ 1 ಲಕ್ಷ, 2 ಲಕ್ಷ ನೀಡಬಲ್ಲೆನೆಂಬ ವ್ಯಕ್ತಿಯನ್ನು ಪಕ್ಕಕ್ಕೆ ತಳ್ಳಿ, ಹೆಚ್ಚಿಗೆ ಬಿಡ್ ಮಾಡಿದವರಿಗೆ ಅವಕಾಶ ಮಾಡಿಕೊಡಲಾಗುತ್ತಿದೆ.

'ಇನ್ನು ಮುಂದೆ ಚುನಾವಣೆ ನಡೆಸುವ ಬದಲು ಹರಾಜು ಕೂಗಿಬಿಡುವುದು ಉತ್ತಮ' ಎಂಬ ಮಾತನ್ನು ಹತಾಶೆಯಲ್ಲಿ ಕೆಲವರು ಹೇಳುತ್ತಿದ್ದರು. ಅದೇ ಸತ್ಯವಾಗುತ್ತಿರುವುದಕ್ಕೆ ಇದು ನಿದರ್ಶನವಾಗಿದೆ. ಇಂತಹ ಸ್ಥಿತಿ ಉಂಟಾಗಿರುವುದರಿಂದ ನಗಬೇಕೋ, ಅಳಬೇಕೋ ಎಂದು ಗೊತ್ತಾಗದ ಕೆಲವು ಘಟನೆಗಳು ಚುನಾವಣೆಯ ಸಂದರ್ಭದಲ್ಲಿ ನಡೆಯುತ್ತಿವೆ. ಮತಗಟ್ಟೆಯ ಹತ್ತಿರಕ್ಕೆ ಹೋಗಿ, ಒಂದು ಮುದುಕಿ 'ನಮಗೆ ಯಾರೂ ಹಣ ಕೊಟ್ಟಿಲ್ಲ, ನಾನು ವೋಟು ಹಾಕುವುದಿಲ್ಲ' ಎಂದು ಹೇಳಿದ್ದು, 'ಪ್ರಗತಿಪರ' ಪಕ್ಷಗಳೇ 'ದುಡ್ಡು ಯಾರ ಹತ್ತಿರ ಬೇಕಾದ್ರೂ ಇಸ್ಕೊಳ್ಳಿ; ವೋಟು ಮಾತ್ರ ನಮಗೆ ಹಾಕಿ' ಎಂದು ಬಹಿರಂಗವಾಗಿ ಹೇಳುವುದು ಅಂತಹ ಕೆಲವು ಘಟನೆಗಳು.

ರಾಜಕಾರಣಿಗಳು ಪೂರಾ ಎಕ್ಕುಟ್ಟಿಹೋಗಿರುವ ಸಂದರ್ಭದಲ್ಲಿ, ಅವರಲ್ಲಿ ಜಾಗೃತಿ ಮೂಡಿಸುವ ಪ್ರಶ್ನೆಯೇನೂ ಉಳಿದಿಲ್ಲ. ಮತದಾರರಲ್ಲಿ ಜಾಗೃತಿ ಮೂಡಿಸುವ ಕೆಲಸ ಮಾಡಬೇಕೇ ಬೇಡವೇ? ಇದರ ಬಗ್ಗೆ ಒಂದು ವಾದ ಹೀಗಿದೆ. 'ಜನರಿಗೆ ಚುನಾವಣಾ ವ್ಯವಸ್ಥೆಯ ಮೇಲೆ ನಂಬಿಕೆ ಹೋಗಿರುವುದರಿಂದ ಅವರು ಈ ರೀತಿ ಮಾಡುತ್ತಿದ್ದಾರೆ. ಅದರಲ್ಲಿ ತಪ್ಪೇನೂ ಇಲ್ಲ, ಇದನ್ನು ನಾವು ವಿರೋಧಿಸುವ ಅಗತ್ಯವಿಲ್ಲ, ಅದು ಹಾಗೇ ಮುಂದುವರೆದರೆ ಕ್ರಾಂತಿಕಾರಕ ಬದಲಾವಣೆಗೆ ದಾರಿ ಮಾಡಿಕೊಡುತ್ತದೆ.' ನಮ್ಮ 'ಚಿಂತಕ' ಗೆಳೆಯರೊಬ್ಬರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೀಗೆ ಹೇಳಿದರು.

'ತಳಸಮುದಾಯಗಳು ತಮ್ಮನ್ನು ಶೋಷಿಸುವವರಿಗೆ ತಿರುಗೇಟು ನೀಡುವ ಹಲವು ವಿಧಾನಗಳನ್ನು ರೂಢಿಸಿಕೊಳ್ಳುತ್ತವೆ. ಬಹುತೇಕ ಸಂದರ್ಭಗಳಲ್ಲಿ ಅದು ಅನಿವಾರ್ಯವೂ ಆಗಿರುತ್ತದೆ; ಈ ಸಮುದಾಯಗಳ ಸೃಜನಶೀಲತೆಯ ಪ್ರತೀಕವೂ ಆಗಿರುತ್ತದೆ. ಈ ರೀತಿಯ ವಿಧಾನಗಳಲ್ಲಿ ಕೆಲವು ಶೋಷಿಸುವವರ ಮೌಲ್ಯಗಳನ್ನೇ ಆಧರಿಸಿದ ವಿಧಾನಗಳಾಗಿರುತ್ತವೆ'. ಇದನ್ನು ಮುಳ್ಳಿಗೆ ಮುಳ್ಳು ಎಂಬ ನೀತಿ ಎಂತಲೂ ಹೇಳಲಾಗುತ್ತದೆ. ಇದರಲ್ಲಿ ಸತ್ಯವಿದೆ; ಆದರೆ ಅರ್ಧ ಸತ್ಯವಿದೆ. ಶೋಷಿಸುವವರ ವಿಧಾನಗಳನ್ನು ವಿರೋಧಿಸುವಾಗ ಅದರ ಮೌಲ್ಯವನ್ನೂ ವಿರೋಧಿಸಬೇಕಾಗುತ್ತದೆ. ಇಲ್ಲದೇಹೋದರೆ, ದೀರ್ಘಕಾಲದಲ್ಲಿ ಅದು ರಿವರ್ಸ್ ಹೊಡೆಯುತ್ತದೆ. 'ನೀವು ಹೇಗೂ ಹಣ ಮಾಡಿಕೊಳ್ಳುವುದಕ್ಕೇ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದೀರಿ. ನಂತರ ನಮಗೆ ನಿಮ್ಮಿಂದ ಏನೂ ಒಳ್ಳೆಯದಾಗುವುದಿಲ್ಲ, ಹಾಗಾಗಿ ಚುನಾವಣೆಯ ಸಂದರ್ಭದಲ್ಲೇ ಬರಬೇಕಾದ್ದು ಬಂದುಬಿಡಲಿ' ಎಂಬ ಮತದಾರರ ಮನಸ್ಥಿತಿಯನ್ನು ನಾವು ಸಂಭ್ರಮಿಸಲಾಗದು.

ಸಾಮಾನ್ಯ ಮತದಾರರು ಹಣ ತೆಗೆದುಕೊಂಡು ವೋಟು ಹಾಕಿದ ಮೇಲೆ, ಆರಿಸಿಹೋದ ಜನಪ್ರತಿನಿಧಿಯನ್ನು ಪ್ರಶ್ನೆ ಮಾಡುವ ನೈತಿಕಶಕ್ತಿಯನ್ನು ಕಳೆದುಕೊಳ್ಳುತ್ತಾರೆ. 'ನಿಮಗೆ ನಾವು ವೋಟು ಹಾಕಿದ್ದು ಇದಕ್ಕೇನಾ?' ಎಂದು ಕೇಳುವವರಿಗೆ, 'ನೀವೇನು ಸುಮ್ಮನೇ ವೋಟು ಹಾಕಿದಿರಾ? ದುಡ್ಡು ಕೊಟ್ಟಿದ್ದೀನಿ, ತಗಂಡು ವೋಟು ಹಾಕಿದ್ದೀರಿ' ಎನ್ನುವ ಉತ್ತರ ಸಿದ್ಧವಾಗಿರುತ್ತದೆ.

ಬಂಡವಾಳ ಹೂಡಿಕೆಯು ಎಂದೆಂದೂ ಲಾಭದ ಉದ್ದೇಶವನ್ನೇ ಹೊಂದಿರುತ್ತದೆ. 'ಹಾಗೇನೂ ಇಲ್ಲ, ಕೆಲವು ಶ್ರೀಮಂತ ಜನಪ್ರತಿನಿಧಿಗಳು ಗೆದ್ದು ಹೋದ ಮೇಲೆ ಜನಪ್ರತಿನಿಧಿಯಾಗಿ ಭ್ರಷ್ಟಾಚಾರದಲ್ಲಿ ತೊಡಗಿಲ್ಲ, ಪ್ರತಿನಿತ್ಯ ಜನರನ್ನು 'ಮೈಂಟೇನ್' ಮಾಡುವುದಕ್ಕಾಗಿ ಇನ್ನಷ್ಟು ಖರ್ಚು ಮಾಡುತ್ತಿದ್ದಾರೆ' ಎಂಬ ಮಾತೂ ಇದೆ. ಹೌದು, ಆ ಥರದವರೂ ಇದ್ದಾರೆ. ಉದಾಹರಣೆಗೆ ಜನಾರ್ದನ ರೆಡ್ಡಿ, ಶ್ರೀರಾಮುಲು ಥರದವರು. ವಾಸ್ತವದಲ್ಲಿ ಅತ್ಯಂತ ಅಕ್ರಮವಾಗಿ ಸಂಪಾದಿಸಿದ ಲೋಡುಗಟ್ಟಲೆ ಹಣದ ಒಂದು ಸಣ್ಣ ಭಾಗವನ್ನು ಅವರು ರಾಜಕಾರಣದಲ್ಲೂ ಹೂಡಿದರು. ಇತರೆ ರಾಜಕಾರಣಿಗಳು ಮಾಡಿದಂತೆ ಅಧಿಕಾರಿಗಳಿಂದ ತಿಂಗಳ ಮಾಮೂಲು, ವರ್ಗಾವಣೆಯಲ್ಲಿ ಹಣ, ಕಾಮಗಾರಿಗಳಲ್ಲಿ ಪರ್ಸೆಂಟೇಜ್‌ಗಳನ್ನು ಅಂಥವರು ತೆಗೆದುಕೊಳ್ಳುವುದಿಲ್ಲ, ಆದರೆ, ಈಗಾಗಲೇ ಮಾಡಿರುವ ಅಕ್ರಮ ಹಣ ಸಂಪಾದನೆಗೆ ಬೇಕಿರುವ ರಕ್ಷಣೆಯನ್ನು ರಾಜಕೀಯ ಅಧಿಕಾರದಿಂದ ಪಡೆದುಕೊಳ್ಳುತ್ತಾರೆ. ಅದೇರೀತಿ ಈಗಲೂ ಮುಂದುವರೆದಿರುವ ಅಕ್ರಮ ಸಂಪಾದನೆಯನ್ನೂ ನಿರಾತಂಕವಾಗಿ ಮುಂದುವರೆಸಿಕೊಂಡು ಹೋಗಲು ಬೇಕಾದ ದಾರಿ, ರಹದಾರಿ ಮಾಡಿಕೊಂಡಿರುತ್ತಾರೆ.

ಇಂದು ಸಾಕಷ್ಟು ಸುದ್ದಿಯಲ್ಲಿರುವ ವಿಜಯ್ ಮಲ್ಯ ಎರಡು ಬಾರಿ ರಾಜ್ಯಸಭೆಗೆ ಆಯ್ಕೆಯಾಗಿದ್ದು, ರಾಜೀವ್ ಚಂದ್ರಶೇಖರ್ ಒಂದು ಸಾರಿ, ಅನಿಲ್ ಅಂಬಾನಿ, ರಾಮಸ್ವಾಮಿ, ಆದಿಕೇಶವುಲು ಹೀಗೆ ಇನ್ನೂ ಹಲವಾರು ಉದ್ದಿಮೆದಾರರು ರಾಜ್ಯಸಭೆಗೆ ಆಯ್ಕೆಯಾಗಿದ್ದು ಈ ಕಾರಣಕ್ಕೇನೇ. ಇಂತಹವರ ಕೆಲವರು ಪತ್ರಿಕೆಗಳನ್ನೂ, ಟಿ.ವಿ.ಚಾನೆಲ್‌ಗಳನ್ನೂ ನಡೆಸುತ್ತಾರೆ. ಸಾರ್ವಜನಿಕರಿಗೆ ಪಾಠವನ್ನೂ ಹೇಳ... ಪತ್ರಿಕೆಗಳು ಮತ್ತು ಟಿ.ವಿ.ಚಾನೆಲ್‌ಗಳು -ಸಾರ್ವಜ... ಕ್ಷೇತ್ರದಲ್ಲಿ ಮೌಲ್ಯ ನಿರ್ಮಾಣ ಮಾಡುವಲ್ಲಿ ಪ್ರ... ಪಾತ್ರ ವಹಿಸುತ್ತವೆ. ಆದರೆ, ಇಂತಹವರ ಮಾಲೀಕತ್ವದಲ್ಲಿರುವ ಮಾಧ್ಯಮಗಳು ಯಾವ ಬ... ಮೌಲ್ಯ ನಿರ್ಮಾಣ ಮಾಡಬಲ್ಲವು? ಜನರು ಥೂ... ಎನ್ನುತ್ತಾರೆಂಬ ಭಯ ಉಂಟಾಗದೇ ಇದ್ದಲ್ಲಿ ವೋಟಿಗಾಗಿ ಹಣ ನೀಡುವ ಪ್ರಕ್ರಿಯೆ ಒಟ್ಟಾರೆ ಮೌಲ್ಯಗಳ ಅಧಃಪತನಕ್ಕೆ ಕಾರಣವಾಗುವುದಿಲ್ಲವೇ... ಮೂಲಕ ಪರ್ಯಾಯ ನಿರ್ಮಾಣದ ಚಳವಳಿಗಳ... ಪರ್ಯಾಯ ರಾಜಕಾರಣವೂ ದುರ್ಬಲವಾಗಲಾರ...

ಪರ್ಯಾಯ ರಾಜಕಾರಣ ಎನ್ನುವುದು ಹಲ... ಹಲವು ಬಗೆಯಲ್ಲಿ ಇದೆ. ಕೆಲವರಿಗೆ ಅದು 'ಹೇಗಾದರೂ ಮಾಡಿ ಅಧಿಕಾರ ಹಿಡಿಯೋಣ. ಅದಕ್ಕಾಗಿ ಹಣ, ಜಾತಿ, ಅವಕಾಶವಾದೀ ಮೈತ್ರಿಗ... ಏನು ಬೇಕಾದರೂ ಬಳಸೋಣ. ಗೆದ್ದು ಬಂದ ನ... ನಾವು ಹೇಗೂ ಜನಪರವಾಗಿ ಕೆಲಸ ಮಾಡೋಣ... ಎಂದು ಇದ್ದರೆ; ಇನ್ನು ಕೆಲವರಿಗೆ 'ಚುನಾವಣಾ ವ್ಯವಸ್ಥೆಯನ್ನೂ ಶುದ್ಧೀಕರಿಸುತ್ತಾ, ಚುನಾವಣೆಯಲ್ಲಿ ಗೆಲ್ಲುವುದು', ಇನ್ನು ಕೆಲವರು ಹೊರಗಡೆ ಹೇಳು... ಪ್ರಗತಿಪರತೆ, ಪ್ರಜಾಪ್ರಭುತ್ವದ ಪಾವಿತ್ರ್ಯ ಎಲ್ಲವೂ, ಆದರೆ ಆಚರಣೆಯಲ್ಲಿ ಮಿಕ್ಕವರಿಗೆ ಪೈಪೋಟಿ ನೀಡುವ ಪ್ರಮಾಣದಲ್ಲಿ ಹಣ, ಜಾತಿ, ಸೈದ್ಧಾಂತಿಕ ರಾಜಿಕೋರತನ ಎಲ್ಲವೂ. ಇನ್ನೂ ಕೆಲವರು 'ನಮ್ಮ... ಚಳವಳಿ ರಾಜಕಾರಣ, ನಾವು ಯಾವ ಕಾರಣಕ್ಕೂ ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ.'

ಕೆಲವು ಕ್ರಾಂತಿಕಾರಿ ಸಂಘಟನೆಗಳು/ಪಕ್ಷಗಳು 'ನಾವು ಚುನಾವಣೆಯಲ್ಲಿ ಸ್ಪರ್ಧಿಸುವುದು ಅದರ ಪೊಳ್ಳುತನವನ್ನು ಬಯಲಿಗೆಳೆಯುವುದಕ್ಕೇ ಹೊರತು... ಗೆದ್ದು ಅಧಿಕಾರ ಹಿಡಿಯಲಿಕ್ಕಲ್ಲ' ಎನ್ನುತ್ತಾರೆ. ಇನ್ನು... ಕೆಲವು ಕ್ರಾಂತಿಕಾರಿ ಪಕ್ಷಗಳು 'ಚುನಾವಣೆಯನ್ನು ಬಹಿಷ್ಕರಿಸಬೇಕೇ ಹೊರತು, ಅದರಲ್ಲಿ ಯಾವ ರೀತಿಯಲ್ಲೂ ಪಾಲ್ಗೊಳ್ಳಬಾರದು' ಎನ್ನುತ್ತಾರೆ.

ಅದೇನೇ ಇರಲಿ, ಮತದಾರರು ಭ್ರಷ್ಟರಾಗುವ ವಿದ್ಯಮಾನವು ಮೇಲಿನ ಯಾವ ಬಗೆಯ ಧಾರೆಗಳ... ಒಳ್ಳೆಯದಲ್ಲ, ಅವರು ಮೋಸ ಮಾಡುತ್ತಿರುವುದು ಈಗಾಗಲೇ ಭ್ರಷ್ಟಗೊಂಡಿರುವ ಆಳುವ ವರ್ಗಗಳ ಪಕ್ಷಗಳಿಗೆ, ಅದು ಒಂದು ರೀತಿಯಲ್ಲಿ ಜನರು ವ್ಯವಸ್ಥೆಯ ವಿರುದ್ಧ ತೋರುತ್ತಿರುವ ಸಿಟ್ಟು ಎಂದು ನಾವು ವಿಶ್ಲೇಷಿಸಬಹುದು. ಈ ವಿಶ್ಲೇಷಣೆಯು ಮತದಾರರನ್ನೂ ರಾಜಕೀಯವಾಗಿ, ಮಾನಸಿಕವಾಗಿ ಭ್ರಷ್ಟಗೊಳಿಸುವುದನ್ನೇನೂ ತಡೆಯುವುದಿಲ್ಲ, ಇಂದು... ನಮ್ಮ ರಾಜಕೀಯ ಕ್ಷೇತ್ರದಲ್ಲಿ ಚುನಾವಣಾ ಸುಧಾರಣೆಗಳು, ಚುನಾವಣಾ ಪದ್ಧತಿಯಲ್ಲಿ ಬದಲಾವಣೆಗಳ ಕುರಿತು ಚರ್ಚೆ ಇದೆ. ಕೆಲವು ಸಂಸ್ಥೆಗಳು ಪ್ರತೀ ಚುನಾವಣೆಯಲ್ಲಿ ಸ್ಪರ್ಧಿಸುವ ಅಭ್ಯರ್ಥಿಗಳ ಆಸ್ತಿ ಕ್ರಿಮಿನಲ್ ಮೊಕದ್ದಮೆಗಳ ಕುರಿ... ನಿಗಾ ಇಟ್ಟು ಮಾಹಿತಿ ನೀಡುತ್ತಿವೆ. ಆದರೆ ಕೆಲವು ನಿರ್ದಿಷ್ಟ ಚುನಾವಣಾ ಸುಧಾರಣೆಗಳು ಮತ್ತು ಮತದಾರರಲ್ಲಿ ರಾಜಕೀಯ ಪ್ರಜ್ಞೆ ಮೂಡಿಸುವ ಕೆಲಸಗಳೆರಡೂ ನಡೆಯದೇ ಇದರಿಂದ ಅಂತಹ ದೊಡ್ಡ ಪ್ರಯೋಜನವಾಗುತ್ತಿಲ್ಲ.

ಪರ್ಯಾಯವನ್ನು ಬಯಸುವ ಎಲ್ಲರೂ ಸಾಮಾಜಿಕ, ಆರ್ಥಿಕ ಕ್ಷೇತ್ರಗಳಲ್ಲಿ ದೊಡ್ಡ ಬದಲಾವಣೆಯನ್ನು ತರಬೇಕೆಂದು ಪ್ರಯತ್ನಪಡುತ್ತಿರುವವರೇ. ಜೊತೆಗೆ ಈ ಬದಲಾವಣ... ರಾಜಕೀಯ ಬದಲಾವಣೆಯು ಕೀಲಿಕೈ ಎಂದೂ ನಂಬಿರುವವರೇ. ಹಾಗಿದ್ದ ಮೇಲೆ ಅಂತಹವರೆಲ್ಲರಿಗೂ 'ವೋಟಿನ ಮಾರಾಟದ ವಿರುದ್ಧದ ಕಾರ್ಯಸೂಚಿ' ಮುಖ್ಯವಾಗುವ ಅಗತ್ಯವಿದೆ. ಅದು ನಾವೆಲ್ಲರೂ ರೂಪಿಸಬೇಕೆಂದು ಬಯಸುವ ರಾಜಕೀಯ ಪ್ರಜ್ಞೆಯ... ಅವಿಭಾಜ್ಯ ಅಂಗವಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸಿ, ಗೆದ್ದು ಸಮಾಜ ಬದಲಾವಣೆ ಮಾಡಬೇಕೆಂದುಕೊಳ್ಳುವವರು; ಚುನಾವಣೆಯಲ್ಲಿ ಸ್ಪರ್ಧಿಸುವುದು ರಾಜಕೀಯ ಆಂದೋಲನದ ಭಾಗವಷ್ಟೇ ಎಂದುಕೊಳ್ಳುವವರು; ಚುನಾವಣೆಯಲ್ಲಿ ಸ್ಪರ್ಧಿಸಬಾರದು, ಆದರೆ ಅದರ ಮೇಲೆ ಪ್ರಭಾವ ಹೊಂದಬೇಕೆಂದುಕೊಳ್ಳುವವರು; ಚುನಾವಣೆಯನ್ನೇ ಬಹಿಷ್ಕರಿಸಬೇಕೆಂದುಕೊಳ್ಳುವವರು ಎಲ್ಲರೂ ಪರ್ಯಾಯ ಮೌಲ್ಯ ನಿರ್ಮಾಣ ಮಾಡದೇ ಇದ್ದಲ್ಲಿ, ನಾವು ಬಯಸುವ ಬದಲಾವಣೆಯೂ ಸಾಧ್ಯವಾಗದೇ ಹೋಗುತ್ತದೆ.

ಶೆಹ್ಲಾ ರಶೀದ್ ಎಂಬ ಹೋರಾಟಗಾರ್ತಿ

ಜೆಎನ್‌ಯು ವಿದ್ಯಾರ್ಥಿ ಸಂಘಟನೆಯ ಉಪಾಧ್ಯಕ್ಷೆ ಆಗಿರುವ ಶೆಹ್ಲಾ ರಶೀದಳಿಗೆ ಮೂರು ತರಹದ ಅನಾನುಕೂಲಗಳು ಇವೆ. ಮೊದಲನೆಯದಾಗಿ ಆಕೆ ಕಾಶ್ಮೀರದವಳು, ಎರಡನೆಯದಾಗಿ ಆಕೆ ಮುಸ್ಲಿಮ್, ಮೂರನೆಯದಾಗಿ ಆಕೆ ಮಹಿಳೆ. ಆದರೂ ಈ ಹೆಣ್ಣುಮಗಳು ಗಟ್ಟಿಗಿತ್ತಿ. ಎಡಪಂಥೀಯ ಸಿಪಿಐ-ಎಮ್‌ಎಲ್ ಪಕ್ಷದ ಸದಸ್ಯೆಯಾಗಿರುವ ಮತ್ತು ಅದೇ ಪಕ್ಷದ ವಿದ್ಯಾರ್ಥಿ ಘಟಕದ ನಾಯಕಿಯಾಗಿರುವ ಶೆಹ್ಲಾ ಜನಪರವಾಗಿ ತನ್ನ ದನಿ ಎತ್ತಲು ಹಿಂಜರಿಯುವವಳಲ್ಲ. ಇವತ್ತು ಕನ್ಹಯ್ಯನಂತೆ ದೇಶದಾದ್ಯಂತ ವಿದ್ಯಾರ್ಥಿಗಳ ಗಮನ ಸೆಳೆದಿರುವವಳು ಶೆಹ್ಲಾ.



ಈಗ ದೇಶದ ಹಲವಾರು ವಿಶ್ವವಿದ್ಯಾಲಯಗಳಲ್ಲಿ ನಡೆಯುತ್ತಿರುವ ದಲಿತ ಮತ್ತು ಎಡಪಂಥೀಯ ವಿದ್ಯಾರ್ಥಿಗಳ ವಿರುದ್ಧ ಯುದ್ಧ ಸಾರಿರುವ ಮೋದಿ ಸರ್ಕಾರ ಜೆಎನ್‌ಯು ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯನನ್ನು ಬಂಧಿಸಿದರೆ ಪರಿಣಾಮ ಏನಾಗುತ್ತದೆ ಎಂದು ಮುಂದಾಲೋಚಿಸಿರಲಿಲ್ಲ. ಹಾಗಾಗಿ ಗೃಹ ಸಚಿವ ರಾಜನಾಥ್ ಸಿಂಗ್ ಕನ್ಹಯ್ಯನನ್ನು ದೇಶದ್ರೋಹಿ ಎಂದು ಕರೆದು ಬಂಧಿಸಿದರಲ್ಲದೆ, ಆತನ ಮೇಲೆ ತಮ್ಮ ಗೂಂಡಾ ಪಡೆಗಳ ಮೂಲಕ ದಾಳಿಯನ್ನೂ ಮಾಡಿಸಿ ಜೈಲಿಗೆ ದಬ್ಬಿದ್ದ. ಆದರೆ ಜಾಮೀನಿನ ಮೇಲೆ ಹೊರಬಂದ ಕನ್ಹಯ್ಯ ತನ್ನ ಮಾತಿನ ಶಕ್ತಿಯ ಮೂಲಕವೇ ಮೋದಿ ಸರ್ಕಾರಕ್ಕೆ ಎಂತಹ ಛಾಟಿ ಏಟನ್ನು ನೀಡಿದ ಎಂಬುದು ಈಗ ನಮ್ಮೆಲ್ಲರಿಗೂ ಗೊತ್ತಿದೆ. ಇವತ್ತು ಕನ್ಹಯ್ಯನ 'ಆಜಾದಿ' ಕೂಗು ದೇಶದ ವಿವಿಧ ಕಡೆಗಳಲ್ಲಿ ಮೊಳಗುತ್ತಿದೆ.

ಕನ್ಹಯ್ಯನನ್ನು ಬಂಧಿಸಿದರೆ ಜೆಎನ್‌ಯು ವಿದ್ಯಾರ್ಥಿಗಳು ಭಯಭೀತರಾಗಿ ಬಾಯಿ ಮುಚ್ಚಿಕೊಂಡು ತೆಪ್ಪಗಾಗುತ್ತಾರೆ ಎಂಬುದೂ ಮೋದಿ ಸರ್ಕಾರದ ಲೆಕ್ಕಾಚಾರವಾಗಿತ್ತು. ಆದರೆ ಮೋದಿಯ ಫ್ಯಾಸಿಸ್ಟ್ ಸರ್ಕಾರದ ವಿರುದ್ಧ ಓರ್ವ ಯುವತಿ ದಿಟ್ಟವಾಗಿ ನಿಲ್ಲುತ್ತಾಳೆ ಎಂದು ಕನಸುಮನಸ್ಸಿನಲ್ಲೂ ಅಂದಾಜಿಸಿರಲಿಲ್ಲ. ಕನ್ಹಯ್ಯನ ಬಂಧನದ ನಂತರ ವಿದ್ಯಾರ್ಥಿಗಳು ಕೊಂಚಕಾಲ ದಿಕ್ಕೆಟ್ಟಿದ್ದು ನಿಜ. ಆದರೆ ಆಗ ಮುಂದಾಳತ್ವವನ್ನು ವಹಿಸಿ ಇಡೀ ಚಳವಳಿಯನ್ನು ಮುನ್ನಡೆಸಿದ್ದು ಶೆಹ್ಲಾ.


ಈಗಿನ್ನೂ 27ರ ಪ್ರಾಯದ ಶೆಹ್ಲಾ ಆರು ವರ್ಷಗಳ ಹಿಂದಿನತನಕ ರಾಜಕೀಯದ ಬಗ್ಗೆ ತಲೆಕೆಡಿಸಿಕೊಂಡವಳಲ್ಲ. ಆಕೆ ಆಗ ಇವತ್ತಿನ ಹೆಚ್ಚಿನ ಯುವಜನತೆಯಂತೆ ಟೆಕ್ಕಿ ಆಗಲು ಇಚ್ಛಿಸಿದ್ದಳು. ಆ ನಿಟ್ಟಿನಲ್ಲಿ ಆಕೆ ಶ್ರೀನಗರದಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ ಪ್ರವೇಶ ಪಡೆದಳು. ಆಕೆಯ ತರಗತಿಯಲ್ಲಿ ನಲವತ್ತು ಯುವಕರಿದ್ದರೆ, ಶೆಹ್ಲಾ ಕೂಡ ಸೇರಿ ಯುವತಿಯರಿದ್ದದ್ದು ಬರೀ ಇಬ್ಬರು. ಆಗ ಮಹಿಳೆಯರಿಗೆ ಕಾಲೇಜುಗಳಲ್ಲಿ ಆಗುವ ಲಿಂಗ ತಾರತಮ್ಯದ ಅನುಭವವಾಗಿ ಆಕೆ ಕಂಗೆಟ್ಟಿದ್ದಳು. "ಅಂತಹ ಪರಿಸ್ಥಿತಿಯಲ್ಲಿ ಸಾಮಾನ್ಯ ಕಿರುಕುಳ ಮಾತ್ರವಲ್ಲ, ಲೈಂಗಿಕ ಕಿರುಕುಳವೂ ಹೆಚ್ಚಾಗುತ್ತದೆ. ಒಮ್ಮೆ ಅದನ್ನು ತಡೆಯಲಾಗದೆ ಸಂಸ್ಥೆಯ ಮುಖ್ಯಸ್ಥರಿಗೆ ದೂರು ನೀಡಿದೆ. ನಾನು ದೂರು ಕೊಟ್ಟೆ ಎಂಬ ಕಾರಣಕ್ಕೇ ಇಡೀ ಕಾಲೇಜು ನನ್ನ ವಿರುದ್ಧ ತಿರುಗಿಬಿತ್ತು. ಆಗಲೇ ನನಗೆ ಮಹಿಳೆಯರಿಗೂ ರಾಜಕೀಯ ಪ್ರಾತಿನಿಧ್ಯದ ಅಗತ್ಯತೆ ಅರ್ಥವಾಗಿದ್ದು" ಎನ್ನುತ್ತಾಳೆ ಶೆಹ್ಲಾ.

2010ರಲ್ಲಿ ಕಾಲೇಜು ಮುಗಿಸುವ ಹೊತ್ತಿಗೆ ಕಾಶ್ಮೀರದಲ್ಲಿ ಸರ್ಕಾರ ಎಸ್‌ಎಂಎಸ್‌ಗಳನ್ನು ನಿಷೇಧಗೊಳಿಸಿತ್ತು, ಅದನ್ನು ತೆರವುಗೊಳಿಸಬೇಕೆಂದು ಶೆಹ್ಲಾ ಸಮಾಜಿಕ ಜಾಲತಾಣದಲ್ಲಿ ಒಂದು ಸಾರ್ವಜನಿಕ ಮನವಿಗೆ ಚಾಲನೆ ನೀಡಿದಳು. ಆಕೆಯೇ ಹೇಳುವಂತೆ ಅದು ಆಕೆ ತೆಗೆದುಕೊಂಡು ಪ್ರಥಮ ರಾಜಕೀಯ ಹೆಜ್ಜೆ. ಕಾಶ್ಮೀರದವಳೇ ಆದ್ದರಿಂದ ಶೆಹ್ಲಾಗೆ ಮಾನವ ಹಕ್ಕುಗಳ ಉಲ್ಲಂಘನೆ ಬಗ್ಗೆ ಕಾಳಜಿ ಮತ್ತು ಸಿಟ್ಟು ಇದ್ದೇ ಇತ್ತು. ಕಾಲೇಜು ಮುಗಿಸಿದ ನಂತರ ಶೆಹ್ಲಾ ದೆಹಲಿಯಲ್ಲಿ ಒಂದು ಪ್ರತಿಷ್ಠಿತ ಐಟಿ ಕಂಪನಿಯಲ್ಲಿ ಕೆಲಸಕ್ಕೆ ಸೇರಿದಳು. ಆದರೆ ಆಕೆಯ ಯೋಚನಾ ಲಹರಿಗೂ ಅಲ್ಲಿನ ಜನರ ನಿಲುವುಗಳಿಗೂ ಸರಿ ಹೊಂದಿಬರಲಿಲ್ಲವಾದ್ದರಿಂದ ಕೆಲವು ತಿಂಗಳುಗಳ ನಂತರ ನೌಕರಿ ತೊರೆದಳು. ಮುಂದೇನು ಮಾಡಬೇಕೆಂದು ಗೊತ್ತಾಗದೆ 18 ತಿಂಗಳ ಕಾಲ ಸುಮ್ಮನಿದ್ದಳು. ಆಗ ಯಾರೋ ಆಕೆಯನ್ನು ಬೆಂಗಳೂರಿಗೆ ಆಹ್ವಾನಿಸಿದರು. ಇಲ್ಲಿನ ಐಐಎಂ ಸಂಸ್ಥೆಯಲ್ಲಿ 'ನಾಯಕತ್ವ ಮತ್ತು ಭಾರತೀಯ ಮಹಿಳೆಯರು' ಕುರಿತ ಮೂರು ತಿಂಗಳ ಶಿಬಿರದಲ್ಲಿ ಆಕೆ ಭಾಗವಹಿಸಿದಳು. "ಆಗಲೇ ನಾನು ರಾಜಕೀಯವಾಗಿ ಕಣ್ಣು ತೆರೆದದ್ದು" ಎಂದು ಹೇಳುವ ಶೆಹ್ಲಾ 2012ರಲ್ಲಿ ಜೆಎನ್‌ಯು ಸೇರಿ ಸಮಾಜಶಾಸ್ತ್ರದಲ್ಲಿ ಎಂಎ ಪ್ರಾರಂಭಿಸಿದಳು.

"ಜೆಎನ್‌ಯು ನನ್ನ ಬದುಕನ್ನೇ ಬದಲಾಯಿಸಿತು ಎನ್ನಬಹುದು. ಇಲ್ಲಿನ ವಿಚಾರಧಾರೆಗಳು ವಿದ್ಯಾರ್ಥಿಗಳನ್ನು ಚಿಂತನೆಗೆ ಹಚ್ಚುತ್ತವೆ, ಪ್ರಶ್ನೆಗಳನ್ನು ಕೇಳಲು ಪ್ರಚೋದಿಸುತ್ತದೆ, ವಿರೋಧ ವ್ಯಕ್ತಪಡಿಸಲು ಪ್ರೋತ್ಸಾಹಿಸುತ್ತದೆ. ಇಲ್ಲಿ ಎಲ್ಲರಿಗೂ ಜವಾಬ್ದಾರಿ ಮತ್ತು ಸ್ವಾತಂತ್ರ್ಯ ಎರಡೂ ಇದೆ. ಈ ಎಲ್ಲ ಕಾರಣಕ್ಕೆ ಜೆಎನ್‌ಯು ಎಂಬ ಸಂಸ್ಥೆಯನ್ನು ಈಗಿರುವ ಹಾಗೆ ಉಳಿಸಿಕೊಳ್ಳುವುದು ಎಲ್ಲರ ಜವಾಬ್ದಾರಿಯಾಗಿದೆ" ಎನ್ನುತ್ತಾಳೆ ಶೆಹ್ಲಾ.

2012ರ ಡಿಸೆಂಬರ್‌ನಲ್ಲಿ ದೆಹಲಿಯಲ್ಲಿ ನಿರ್ಭಯಾಳ ಮೇಲೆ ಸಾಮೂಹಿಕ ಅತ್ಯಾಚಾರ ನಡೆಯಿತಲ್ಲ, ಅದೂ ಕೂಡ ಶೆಹ್ಲಾಳ ನಿಲುವು ಮತ್ತು ಸಿದ್ಧಾಂತದ ಮೇಲೆ ಪ್ರಭಾವ ಬೀರಿತು. "ಆ ಪ್ರಕರಣ ನಡೆದಾಗ ನಾನೂ ಕೂಡ ಎಲ್ಲರಂತೆ ಅತ್ಯಾಚಾರಿಗಳಿಗೆ ಮರಣದಂಡನೆಯನ್ನು ನೀಡಬೇಕು ಎಂದೇ ನಂಬಿದ್ದೆ. ಯಾಕೆಂದರೆ ಇತರರಂತೆ ಅಂತಹ ಶಿಕ್ಷೆ ಇದ್ದರೆ ಅತ್ಯಾಚಾರ ತಡೆಯಬಹುದು ಎಂದು ನಾನು ಗ್ರಹಿಸಿದ್ದೆ. ಆದರೆ ಆಗ ಕವಿತಾ ಕೃಷ್ಣನ್ ಅವರು ಹಲವು ಮುಖ್ಯ ಲೇಖನಗಳನ್ನು ಬರೆದರು. ಆ ಲೇಖನಗಳಲ್ಲಿ ಮರಣದಂಡನೆಯಿಂದಾಗಿ ಅತ್ಯಾಚಾರ ನಿಲ್ಲುವುದಿಲ್ಲ ಎಂದು ವಾದಿಸಿದ್ದರು. ಅದು ಸತ್ಯವೂ ಆಗಿದೆ. ಉದಾಹರಣೆಗೆ ಜಸ್ಟೀಸ್ ವರ್ಮಾ ಸಮಿತಿ ಅತ್ಯಾಚಾರಿಗಳಿಗೆ ಮರಣ ಶಿಕ್ಷೆಯನ್ನು ಶಿಫಾರಸ್ಸು ಮಾಡಿದ್ದರೂ ದೇಶದಲ್ಲಿ ಎಲ್ಲೂ ಅತ್ಯಾಚಾರಗಳು ನಿಂತಿಲ್ಲ" ಎನ್ನುವ ಶೆಹ್ಲಾ ಆಗ ಕವಿತಾ ಅವರ ಮೂಲಕ ಸಿಪಿಐ-ಎಂಎಲ್‌ನೊಂದಿಗೆ ಸಂಪರ್ಕ ಬೆಳೆಸಿಕೊಂಡರು. ಆಮೇಲೆ ಆಕೆ ಆ ಪಕ್ಷದ ಪ್ರತಿನಿಧಿಯಾಗಿ ವಿದ್ಯಾರ್ಥಿ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿ ಗೆದ್ದರು ಕೂಡ. ಆಕೆ ಆ ವಿಶ್ವವಿದ್ಯಾಲಯದಲ್ಲಿ ವಿದ್ಯಾರ್ಥಿ ಪ್ರತಿನಿಧಿಯಾಗಿರುವ ಪ್ರಥಮ ಕಾಶ್ಮೀರದ ಮಹಿಳೆ!

ಮೊನ್ನೆ ಆಕೆ 'ಲಂಕೇಶ್ 81' ಸಭೆಯಲ್ಲಿ ಹೇಳಿದ ಹಲವು ಮುಖ್ಯ ಅಂಶಗಳನ್ನು ಇಲ್ಲಿ ದಾಖಲಿಸುತ್ತೇನೆ.



ಕಂಡಹಾಗೆ

• ಗೌರಿ ಲಂಕೇಶ್
editorlankesh@gmail.com

"ಯಾರು ಭಯೋತ್ಪಾದಕರು ಎಂಬುದನ್ನು ನಾವು ಯೋಚಿಸಬೇಕಿದೆ. ತಮ್ಮ ಪಾಡಿಗೆ ತಾವಿರುವ ವಿದ್ಯಾರ್ಥಿಗಳೋ ಅಥವಾ ವಿಶ್ವವಿದ್ಯಾಲಯಗಳಲ್ಲಿ ಭಯದ ವಾತಾವರಣವನ್ನು ಸೃಷ್ಟಿಸಿರುವ ಮೋದಿ ಸರ್ಕಾರವೋ? ಇವತ್ತು ಕ್ಯಾಂಪಸ್‌ಗಳಲ್ಲಿ ಎಂಥ ಭಯವನ್ನು ಸೃಷ್ಟಿಸಲಾಗಿದೆ ಎಂದರೆ ರೋಹಿತ್ ವೇಮುಲ ಅದನ್ನು ಸಹಿಸಲಾಗದೆ ಆತ್ಮಹತ್ಯೆಗೆ ಶರಣಾದ. ಆತ ಸತ್ತನಂತರ ಮೋದಿ 'ದೇಶ ತನ್ನ ಒಂದು ಮಗನನ್ನು ಕಳೆದುಕೊಂಡಿದೆ' ಎಂದರು. ಆದರೆ ಮೂರು ತಿಂಗಳ ಹಿಂದೆ ಅದೇ ಮೋದಿ ಸರ್ಕಾರ ಆತನನ್ನು 'ದೇಶದ್ರೋಹಿ' ಎಂದು ಕರೆದಿತ್ತು. ಅಂತಹ ರೋಹಿತ್‌ನನ್ನು ಮೋದಿ ಅದು ಹೇಗೆ 'ದೇಶದ ಪುತ್ರ' ಎಂದು ಕರೆಯುತ್ತಾರೆ?

ಆರ್‌ಸ್ಸೆಸ್‌ಗೆ ಒಂದು ಭಾಷೆ, ಒಂದು ಸಂಸ್ಕೃತಿ ಮತ್ತು ಒಂದು ಧರ್ಮ ಮುಖ್ಯವಾಗಿದೆ. ಅವರಿಗೆ ನಾನೊಂದು ಪ್ರಶ್ನೆ ಕೇಳುತ್ತೇನೆ. ವೈವಿಧ್ಯತೆಯನ್ನು ಇಷ್ಟ ಪಡದ ತಾವು ಈ ಜಾತಿ ವೈವಿಧ್ಯತೆಯ ಬಗ್ಗೆ ಏನು ಹೇಳುತ್ತೀರ? ಯಾಕೆ ಇಲ್ಲಿ ಅಷ್ಟೊಂದು ಜಾತಿ, ಉಪಜಾತಿ, ಕುಲ, ಗೋತ್ರ ಇತ್ಯಾದಿಗಳಿವೆ?

ಈ ಹಿಂದೆ ಅವರು ಕೋಮುವಾದವನ್ನು ರಾಜಕೀಯ ಲಾಭಕ್ಕೆ ಬಳಸಿಕೊಳ್ಳುತ್ತಿದ್ದರು. ಆ ಗುಟ್ಟು ಈಗ ರಟ್ಟಾಗಿದೆ. ಆದ್ದರಿಂದ ಇವತ್ತು ಅವರು ದೇಶಭಕ್ತಿಯನ್ನು ಕೋಮುವಾದದಂತೆ ಅಸ್ತ್ರವಾಗಿ ಬಳಸುತ್ತಿದ್ದಾರೆ. ಯಾಕೆಂದರೆ ಯಾರು ದೇಶಭಕ್ತ ಯಾರು ದೇಶಭಕ್ತರಲ್ಲ ಎಂಬ ಚರ್ಚೆಯಲ್ಲಿ ನಾವೆಲ್ಲ ಇದ್ದು ಯಾರೂ ಇವತ್ತು ಮುಖ್ಯವಾದ ಪ್ರಶ್ನೆಗಳನ್ನು ಕೇಳದಂತೆ ಮಾಡುವುದೇ ಅವರ ಕುತಂತ್ರವಾಗಿದೆ. ಯಾಕೆಂದರೆ ವಿಜಯ್ ಮಲ್ಯ ಅದು ಹೇಗೆ ಲಂಡನ್ನಿಗೆ ಹಾರಿಹೋದ ಎಂಬ ತರಹದ ಪ್ರಶ್ನೆಗಳನ್ನು ದೇಶದ ಜನ ಕೇಳುವುದು ಅವರಿಗೆ ಬೇಕಿಲ್ಲ.

ವಿದ್ಯಾರ್ಥಿಗಳು ತೆರಿಗೆದಾರರ ಹಣದಲ್ಲಿ ಶಿಕ್ಷಣ ಪಡೆಯುತ್ತಿರುವುದರಿಂದ ನಾವು ಪ್ರಶ್ನೆಗಳನ್ನು ಕೇಳಕೂಡದು ಎಂಬ ಅವರ ವಾದವೂ ಅವರ ಊಳಿಗಮಾನ್ಯ ಮನಸ್ಥಿತಿಯನ್ನು ತೋರುತ್ತದೆ. ಅದು ಹೇಗೆಂದರೆ 'ನೀನು ನನ್ನ ಗುಲಾಮ. ಆದ್ದರಿಂದ ಬಾಯಿ ಮುಚ್ಚಿಕೊಂಡಿರಬೇಕು' ಎಂಬ ಅವರ ವಾದ ಖಂಡನಾರ್ಹ.


ಮೋದಿಯ ಸರ್ಕಾರದ ಅಜೆಂಡ ಯಾರ ವಿರುದ್ಧ ಎಂದು ಅರ್ಥಮಾಡಿಕೊಳ್ಳಲು ಅವರು ಎಂತಹ ವಿದ್ಯಾರ್ಥಿಗಳನ್ನು ಗುರಿಯಾಗಿಸಿಕೊಂಡಿದ್ದಾರೆ ಎಂದು ನೋಡಬೇಕು. ಹೈದರಾಬಾದ್ ಕೇಂದ್ರ ವಿವಿಯಲ್ಲಿ 'ಸಾಮಾಜಿಕ ಬಹಿಷ್ಕಾರ'ಕ್ಕೆ ಗುರಿಯಾದ ಐವರು ವಿದ್ಯಾರ್ಥಿಗಳು ದಲಿತರು. ಹಾಗೆಯೇ ಜೆಎನ್‌ಯುನಲ್ಲಿ ವಜಾಗೊಂಡಿರುವ ಎಂಟು ವಿದ್ಯಾರ್ಥಿಗಳ ಪೈಕಿ, ಇಬ್ಬರು ದಲಿತರು, ಇಬ್ಬರು ಹಿಂದುಳಿದ ವರ್ಗದವರು, ಇಬ್ಬರು ಮಹಿಳೆಯರು ಮತ್ತೊಬ್ಬ ಮುಸ್ಲಿಮ್. ಈ ಎಲ್ಲಾ ವಿದ್ಯಾರ್ಥಿಗಳು - ರೋಹಿತ್ ಮತ್ತು ಕನ್ಹಯ್ಯನಂತೆ - ಬಡಕುಟುಂಬಗಳಿಂದ ಬಂದವರು. ಇದಕ್ಕೆ ಹೋಲಿಸಿದರೆ, ಈ ಎಲ್ಲಾ ವಿದ್ಯಾರ್ಥಿಗಳನ್ನು ಕುರಿತು ವಿಚಾರಣೆ ನಡೆಸಲು ನೇಮಕಗೊಂಡವರು ಮೇಲು ಜಾತಿಯ ಪುರುಷರು. ಇದು ಏನನ್ನು ಸೂಚಿಸುತ್ತದೆ?

ಹಿಂದಿನ ಕಾಲದಲ್ಲಿ ಭೂಮಿ ಗೋಲಾಕಾರದಲ್ಲಿದೆ ಎಂದು ಹೇಳುವುದು ಧರ್ಮನಿಂದನೆ ಆಗುತ್ತಿತ್ತು, ಯಾಕೆಂದರೆ ಆಗ ಕ್ಯಾಥೊಲಿಕ್ ಚರ್ಚ್ ಭೂಮಿ ಚಪ್ಪಟೆಯಾಗಿದೆ ಎಂದು ವಾದಿಸುತ್ತಿತ್ತು. ನಮ್ಮ ದೇಶದಲ್ಲಿನ ಈಗಿನ ಪರಿಸ್ಥಿತಿ ಹೀಗೇ ಮುಂದುವರೆದರೆ ಇನ್ನು ಐದು ವರ್ಷಗಳಲ್ಲಿ ಯಾವುದೇ ವಿದ್ಯಾರ್ಥಿ 'ಹಿಂದಿನ ಕಾಲದಲ್ಲಿ ಗಣೇಶನಿಗೆ ನ್ಯಾನೋ ಸರ್ಜರಿ ಮಾಡಿರಲಿಲ್ಲ' ಎಂದೋ, 'ಐದು ಸಾವಿರ ವರ್ಷಗಳ ಹಿಂದೆ ನಮ್ಮನ್ನೆಲ್ಲ ಮಂಗಳ ಗ್ರಹಕ್ಕೆ ಕರೆದೊಯ್ಯಲು ಪುಷ್ಪಕ ವಿಮಾನಗಳಿರಲಿಲ್ಲ' ಎಂದೂ ಬರೆದರೆ ಆತನಿಗೆ ವಿಷ ಕುಡಿಯದೆ ಬೇರೆ ದಾರಿ ಇರುವುದಿಲ್ಲ. ಆ ಕಾರಣಕ್ಕಾಗಿ ನೀವೆಲ್ಲ ನಮ್ಮ ಜೊತೆ ನಿಲ್ಲಿ ಎಂದು ಮನವಿ ಮಾಡಿಕೊಳ್ಳುತ್ತಿದ್ದೇವೆ."

ಈಗಾಗಲೇ ಎಡಪಕ್ಷಗಳು ಕನ್ಹಯ್ಯನನ್ನು ತಮ್ಮ ಪ್ರಚಾರದ ರೂವಾರಿ ಆಗಿಸಿಕೊಳ್ಳಲು ಉತ್ಸಾಹ ತೋರುತ್ತಿವೆ. ಆದರೆ ಕನ್ಹಯ್ಯ ಈಗಲೂ ತನ್ನ ಪಿಎಚ್‌ಡಿ ಮುಗಿಸಿ ಅಧ್ಯಾಪಕನಾಗುವ ಹಂಬಲವನ್ನೇ ವ್ಯಕ್ತಪಡಿಸುತ್ತಿದ್ದಾನೆ. ಆದರೆ ಶೆಹ್ಲಾ ಹಾಗಲ್ಲ. ಆಕೆ ಈಗಾಗಲೆ ರಾಜಕಾರಣಿ ಆಗಿದ್ದಾಳೆ. ಮುಂದೆ ಆಕೆ ಅದೇ ಹಾದಿಯಲ್ಲಿ ಸಾಗುವುದರ ಬಗ್ಗೆ ಯಾವ ಅನುಮಾನಗಳೂ ಇಲ್ಲ.

ಅವತ್ತು ಶೆಹ್ಲಾ ಹೇಳಿದ್ದೆಲ್ಲವೂ ನಮ್ಮ ಹನ್ನೊಂದು ವರ್ಷದ ಇಶಾಳಿಗೆ ಅರ್ಥವಾಗಲಿಲ್ಲ. ಆದರೂ ಇಶಾ "ಶೆಹ್ಲಾ ಇನ್ನೂ ಹೆಚ್ಚು ಸಮಯ ಮಾತನಾಡಬೇಕಿತ್ತು" ಎಂದಳಲ್ಲದೆ "ಶೆಹ್ಲಾ ಜೊತೆ ಫೋಟೋ ತೆಗೆಸಿಕೊಳ್ಳಬೇಕು" ಎಂದು ಹೇಳಿ ಫೋಟೋ ತೆಗೆಸಿಕೊಂಡಳು. ಇಷ್ಟು ವರ್ಷಗಳ ಕಾಲ ಇಶಾ ಎಂದೂ ಯಾರ ಜೊತೆಯೂ ಫೋಟೋ ತೆಗೆಸಿಕೊಳ್ಳುವ ಆಶೆ ವ್ಯಕ್ತಪಡಿಸಿರಲಿಲ್ಲ.

``She is awesome" ಎಂದು ಇಶಾ ಹೇಳಿದಾಗ ನಾನಂದೆ "ಮುಂದೆ ನೀನು ಆಕೆಯಂತೆಯೇ ಆಗಬೇಕು." ಅದಕ್ಕೆ ಇಶಾ ಮುಗುಳ್ನಗೆ ಬೀರಿದಳು. "ನೀನು ನನ್ನೊಂದಿಗೆ ಹೆಚ್ಚು ಮಾತನಾಡಿದರೆ, ಚರ್ಚಿಸಿದರೆ ನೀನು ಶೆಹ್ಲಾ ತರಹ ಆಗುತ್ತಿ" ಎಂದೆ ಪ್ರೀತಿಯ ಇಶಾಳಿಗೆ! ●




ಅಗಲಿದ ಮಿತ್ರ ಚಸರಾ

ನಮ್ಮೆಲ್ಲರ ಮಿತ್ರರಾಗಿದ್ದು ನಮ್ಮೆಲ್ಲರ ಜನಪರ ಹೋರಾಟಗಳಲ್ಲಿ ಕೈಜೋಡಿಸುತ್ತಿದ್ದ ಫಾದರ್ ಚಸರಾ ಇನ್ನಿಲ್ಲ. ಅನಿರೀಕ್ಷಿತವಾಗಿ ಅನಾರೋಗ್ಯಕ್ಕೆ ತುತ್ತಾದ ಅವರು ಇಂದು (ಬುಧವಾರ) ಬೆಳಗ್ಗೆ ಕೊನೆಯುಸಿರೆಳೆದಿದ್ದಾರೆ.

ನಾನು ಚಸರಾ ಅವರೊಂದಿಗೆ ಹೆಚ್ಚು ಸಮಯ ಕಳೆದವಳಲ್ಲ, ಕೆಲವು ಬಾರಿ ಮಿತ್ರರ ಮನೆಯಲ್ಲಿ ಮತ್ತು ಹಲವು ಸಭೆಗಳಲ್ಲಿ ಅವರನ್ನು ಭೇಟಿ ಆಗಿದ್ದೆ. ಕಾಂಗ್ರೆಸ್ ಪಕ್ಷದವರು ಸಿದ್ದರಾಮಯ್ಯನವರ ನೇತೃತ್ವದಲ್ಲಿ ಬೆಂಗಳೂರಿನಿಂದ ಬಳ್ಳಾರಿಗೆ ಕಾಲ್ನಡಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದಾಗ ಅದಕ್ಕೆ ಜನರ ಸ್ಪಂದನೆಯನ್ನು ನೋಡಲು ನಾವೊಂದಿಷ್ಟು ಮಿತ್ರರು ಒಂದು ದಿನ ಹೋಗಿದ್ದೆವು. ಅವತ್ತು ಚಸರಾ ಕೂಡ ನಮ್ಮೊಂದಿಗೆ ಬಂದಿದ್ದರು. ಅವತ್ತೇ ನಾನು ಅವರೊಂದಿಗೆ ಹೆಚ್ಚು ಸಮಯ ಕಳೆದದ್ದು. ಚಸರಾ ಓರ್ವ ಧಾರ್ಮಿಕ ಗುರು ಆಗಿದ್ದರೂ ಅವರು ನಮ್ಮೆಲ್ಲರಂತೆ ಜಾತ್ಯತೀತರಾಗಿ ಯೋಚಿಸುವವರಾಗಿದ್ದರು. ನಮ್ಮ ಭಾಷೆ, ಸಂಸ್ಕೃತಿ, ಸೌಹಾರ್ದ ಬದುಕಿನ ಬಗ್ಗೆ ನಮ್ಮಷ್ಟೇ ಗಾಢವಾಗಿ ಚಿಂತಿಸುವವರಾಗಿದ್ದರು.


ಕೆಲವು ವರ್ಷಗಳ ಹಿಂದೆ ಇದ್ದಕ್ಕಿದ್ದಂತೆ ನಮ್ಮ ಕಚೇರಿಗೆ ಆಗಮಿಸಿದ ಚಸರಾ ಅವರು ನನಗೊಂದು ಕೇಕ್ ಕೊಟ್ಟರು. ಜೊತೆಗೆ ಒಂದು ಕಾರ್ಡನ್ನೂ ಸಹ. ಕಾರ್ಡಿನ ಕವರ್ ಮೇಲೆ 'ಗೌರಿ ಲಂಕೇಶ್ ಅವರಿಗೆ, ಕ್ರಿಸ್ತಜಯಂತಿ ಶುಭಾಷಯಗಳು' ಎಂದು ಬರೆದಿದ್ದರು. ಒಳಗೆ "ಎಲ್ಲರ ನಿಲುವು ನಮ್ಮ ನಿಲುವಾಗಬೇಕಿಲ್ಲ, ನಮ್ಮ ನಿಲುವು ಎಲ್ಲರಿಗೂ ಮೆಚ್ಚುಗೆಯಾಗಬೇಕಿಲ್ಲ, ಅದು ಜನಪರವಾಗಿದ್ದರೆ, ಮಾನವಧರ್ಮವಾಗಿದ್ದರೆ ಸಾಕು! ಪ್ರೀತಿಯ ಗೌರಿ, ಸಂಘರ್ಷಗಳಲ್ಲಿ ನಾವು ನಿಮ್ಮೊಡನಿದ್ದೇವೆ. ಫಾ. ಚಸರಾ' ಎಂದು ಬರೆದಿದ್ದರು.



ಅವತ್ತು ಮಾತನಾಡುತ್ತಾ "ನೀವು ನಮ್ಮೊಂದಿಗಿಲ್ಲದಿದ್ದರೆ ತುಂಬಾ ಕಷ್ಟವಾಗುತ್ತೆ, ನಿಮ್ಮ ಆರೋಗ್ಯ ನೋಡಿಕೊಳ್ಳಿ" ಎಂದು ಭಾವುಕರಾಗಿ ಹೇಳಿದ್ದರು. ಇವತ್ತು ಅವರೇ ನಮ್ಮನ್ನೆಲ್ಲ ಅಗಲಿ ನಮ್ಮನ್ನೆಲ್ಲ ಕಷ್ಟಕ್ಕೆ ದೂಡಿಹೋಗಿದ್ದಾರೆ.

ನೀವು ಇಷ್ಟು ಬೇಗ ನಮ್ಮನ್ನೆಲ್ಲ ಬಿಟ್ಟು ಹೋಗಬಾರದಿತ್ತು ಮಿತ್ರ.

- ಗೌರಿ






ಅರ್ಥಪೂರ್ಣವಾಗಿದ್ದ 'ಲಂಕೇಶ್ 81' ಕಾರ್ಯಕ್ರಮ









ಕಳೆದ ಶನಿವಾರ ಬೆಂಗಳೂರಿನಲ್ಲಿ ಹಮ್ಮಿಕೊಂಡಿದ್ದ 'ರೋಹಿತ್ ವೇಮುಲ ನೆನಪಿನಲ್ಲಿ ಲಂಕೇಶ್ 81' ಕಾರ್ಯಕ್ರಮ ಅಚ್ಚುಕಟ್ಟಾಗಿ ನಡೆಯಿತಲ್ಲದೆ ಅರ್ಥಪೂರ್ಣವಾಗಿತ್ತು. ಕಳೆದ ವಾರ ಸಂಪಾದಕಿ ಗೌರಿ ಲಂಕೇಶ್ ಬರೆದಂತೆ ಈ ವರ್ಷದ ಕಾರ್ಯಕ್ರಮದಲ್ಲಿ ದಲಿತ ಮತ್ತು ಎಡಪಕ್ಷಗಳ ವಿದ್ಯಾರ್ಥಿ ನಾಯಕರು ನಡೆಸುವ 'ಆಜಾದಿ' ಬಗೆಗಿನ ಚರ್ಚೆಗೆ ಒತ್ತು ಕೊಡಲಾಗಿತ್ತು.

ಈ ವರ್ಷದ ಇನ್ನೊಂದು ವಿಶೇಷ ಯಾವುದೆಂದರೆ ಎಲ್ಲಾ ಎಡಪಕ್ಷಗಳ ನಾಯಕರು ಮತ್ತು ಹೊಸ ಪೀಳಿಗೆಯ ಯುವಕರು ಬಂದದ್ದು. ಸಿಪಿಎಂ ನಾಯಕ ಜಿ.ಎನ್. ನಾಗರಾಜ್, ಸಿಪಿಐ ನಾಯಕ ಸಿದ್ದನಗೌಡ ಪಾಟಿಲ್, ಸಿಪಿಐ-ಎಮ್‌ಎಲ್ ಪಕ್ಷದ ಮಾರುತಿ ಅವರು ಹಾಜರಿದ್ದರು. ಜೊತೆಗೆ ಲಂಕೇಶರ ಮಿತ್ರರಾಗಿದ್ದ ಡಾ.ಶ್ರೀನಿವಾಸ ಗೌಡ, ಬಸವರಾಜು ಅರಸ್, ಎಫ್.ಎಸ್.ಯೋಗಪ್ಪನವರ್ ಕೂಡ ಬಂದಿದ್ದರು.

ಪತ್ರಿಕಾತಂಡದ ದೊಡ್ಡಿಪಾಳ್ಯ ನರಸಿಂಹಮೂರ್ತಿ ಪ್ರಾಸ್ತಾವಿಕ ಮಾತುಗಳನ್ನು ಆಡಿದ ನಂತರ, ಯುವ ಲೇಖಕ ಟಿ.ಕೆ.ದಯಾನಂದ್ 'ಸಮಕಾಲೀನ ಸಂದರ್ಭದಲ್ಲಿ ಲಂಕೇಶ್ ಚಿಂತನೆ' ಕುರಿತು ಮಾತನಾಡುತ್ತಾ ಲಂಕೇಶರನ್ನು ಪ್ರವಾಹಕ್ಕೆ ವಿರುದ್ಧವಾಗಿ ಈಜುವ ಸಾಲಮಂಡರ್ ಮೀನಿಗೆ ಹೋಲಿಸಿದರು.

ಲಂಕೇಶರ ಮೊಮ್ಮಗಳು ಇಶಾ ಲಂಕೇಶ್ ನಮ್ಮ ಪ್ರಕಾಶನ ಪ್ರಕಟಿಸಿರುವ ಎಂಟು ಹೊಸ ಪುಸ್ತಕಗಳನ್ನು ಬಿಡುಗಡೆ ಮಾಡಿದಳು. ಅಷ್ಟು ಹೊತ್ತಿಗೆ ಸಮಯ ಮೀರಿದ್ದರಿಂದ ಗೌರಿ ಲಂಕೇಶ್ ತಮ್ಮ ಎಂದಿನ ಶೈಲಿಯಲ್ಲಿ ಚಿಕ್ಕದಾಗಿ ಮಾತನಾಡಿ ಮೊದಲನೆ ಗೋಷ್ಠಿಯನ್ನು ಮುಗಿಸಿದರು.

ಎಲ್ಲರೂ ಸಮೋಸ ಮತ್ತು ಕಾಫಿ ಸೇವಿಸಿದ ನಂತರ ಎರಡನೆ ಗೋಷ್ಠಿ ಪ್ರಾರಂಭವಾಯಿತು. ಎಂದಿನಂತೆ ಪತ್ರಿಕೆಯ ಮಿತ್ರ ಪಾವಗಡದ ಮಲ್ಲಿಕಾರ್ಜುನಯ್ಯನವರು ಒಂದು ಹಾಡನ್ನು ಹೇಳಿದರು. ಆಮೇಲೆ ಸಾತಿ ಸುಂದರೇಶ್ ಅವರ ನೇತೃತ್ವದಲ್ಲಿ ಇಪ್ಟಾ ತಂಡದವರು ಕ್ರಾಂತಿಕಾರಿ ಹಾಡುಗಳನ್ನು ಹಾಡಿದರು.

ಬಹಳ ವರ್ಷಗಳಿಂದ ಪತ್ರಿಕೆಯ ಅಭಿಮಾನಿ ಆಗಿರುವ ಘನಶ್ಯಾ ಭಾಂಡಗೆ ಅವರು ಬಂದು ಗೌರಿಗೆ ಸುಂದರವಾದ ಹೂಗುಚ್ಛ ನೀಡಿದರು. ಬಂಗಾಡೆ ಅವರು ಅಂಬೇಡ್ಕರ್‌ವಾದ ಬೀರುವ ಪರಿಣಾಮ ಕುರಿತು 'ಇಂಗಳೆ ಮಾರ್ಗ' ಎಂಬ ಸಿನಿಮಾವನ್ನು ನಿರ್ಮಿಸಿದ್ದಾರೆ. ಬಿಡುಗಡೆಯಾದ ಹೊಸ ಪುಸ್ತಕಗಳನ್ನು ಬಂಗಾಡೆ ಅವರಿಗೆ ಕೊಡುವ ಮೂಲಕ ಗೌರಿ ಧನ್ಯವಾದಗಳನ್ನು ಸೂಚಿಸಿದರು.

ಎರಡನೆ ಗೋಷ್ಠಿಗೆ ನೂರ್ ಶ್ರೀಧರ್ ಸೂಕ್ತವಾದ ಪ್ರಾಸ್ತಾವನೆಯನ್ನು ಮಂಡಿಸಿದರು. ಹೈದರಾಬಾದಿನಿಂದ ಆಗಮಿಸಿದ್ದ ರೋಹಿತ್ ವೇಮುಲನ ಮಿತ್ರರೂ, ಹೈದರಾಬಾದಿನ ಕೇಂದ್ರ ವಿಶ್ವವಿದ್ಯಾಲಯದ ಅಂಬೇಡ್ಕರ್ ವಿದ್ಯಾರ್ಥಿ ಸಂಘದ ನಾಯಕರೂ ಆದ ಉಮಾಮಹೇಶ್ವರ ರಾವ್ ಅವರು ಹೃದಯದಾಳದಿಂದ ದಲಿತ ಸಮೂಹ ಎದುರಿಸುತ್ತಿರುವ ಸವಾಲುಗಳನ್ನು ವಿವರಿಸಿದರು. ಶೆಹ್ಲಾ ರಶೀದ್ ಮತ್ತು ಮೋಹಿತ್ ಪಾಂಡೆಯೊಂದಿ[illegible] ಆಗಮಿಸಿದ್ದವರು ಅಕ್ಟರ್ ಚೌಧುರಿ. ಇವರು ಜೆಎನ್‌ಯ[illegible] ವಿದ್ಯಾರ್ಥಿ ಸಂಘದ ಮಾಜಿ ಅಧ್ಯಕ್ಷರು ಮಾತ್ರವ[illegible] ಎಐಎಸ್‌ಎ ಸಂಘಟನೆಯ ನಾಯಕರೂ ಕೂಡ ಹೌದ[illegible] ಅಕ್ಟರ್ ಮತ್ತು ಮೋಹಿತ್ ಇಬ್ಬರೂ ಜೆಎನ್‌ಯುನ[illegible] ಈಗ ಆಗುತ್ತಿರುವ ವಿದ್ಯಮಾನಗಳನ್ನು ವಿವರಿಸಿದರು. ಜೊತ[illegible] ವಕೀಲ ಅನಂತ್ ನಾಯಕ್, ಎಐಎಸ್‌ಎಫ್‌ನ ಸಂತೋ[illegible] ಎಚ್.ಎಂ, ಎಸ್‌ಎಫ್‌ಐ ಸಂಘಟನೆಯ ಚಿಕ್ಕರಾಜ[illegible] ಬಿವಿಎಸ್‌ನ ಹರಿರಾಮ್ ಮತ್ತು ಕರ್ನಾಟಕ ವಿದ್ಯಾರ್ಥಿ[illegible] ಸಂಘಟನೆಯ ಸರೋವರ ಬೆಂಕಿಕೆರೆ ತಮ್ಮ ಅನಿಸಿಕೆಗಳನ್ನು ಮಂಡಿಸಿದರು. ಕೊನೆಯದಾಗಿ ಮಾತನಾಡಿದ ಶೆಹ್ಲಾ ರಶೀದ್[illegible] ಮೋದಿ ಸರ್ಕಾರಕ್ಕೆ ಸಖತ್ತಾಗಿಯೇ ಸವಾಲುಗಳನ್ನು ಹಾಕಿದರು.

ಗೋಷ್ಠಿಯ ಕೊನೆಗೆ ಆಕೆ ಕೂಗಿದ ಘೋಷಣೆಗಳಿ[illegible] ಇಡೀ ಸಭಾಂಗಣವೇ 'ಆಜಾದಿ' ಎಂಬ ಉತ್ತರವನ್ನು ಮೊಳಗಿಸಿತು.

ಸಾಸ್ವೇಹಳ್ಳಿ ರಚಿಸಿ-ನಿರ್ದೇಶಿಸಿರುವ, ಸುಪ್ರಿಯಾ ಎಸ್[illegible] ರಾವ್ ಅಭಿನಯಿಸಿದ 'ಮೈಥಿಲಿ' ನಾಟಕವೂ ಇವತ್ತಿ[illegible] ಸಂದರ್ಭಕ್ಕೆ ಸೂಕ್ತವಾಗಿತ್ತು.

ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನೆರವಾ[illegible] ಎಲ್ಲ ಮಿತ್ರರಿಗೂ, ಅದಕ್ಕೆ ಬಂದು ಸಹಕರಿಸಿದ ಎಲ್[illegible] ಗೆಳೆಯರಿಗೂ ನಾವು ಆಭಾರಿಗಳು.

■ ಲಂಕೇಶ್ ಬಳಗ





ಮಾರ್ಚ್ ತಿಂಗಳ 15 ಮತ್ತು 16ರಂದು ನಗರದ ಬಸವನಗುಡಿಯಲ್ಲಿರುವ ನಿಡುಮಾಮಿಡಿ ಮಠದಲ್ಲಿ ಸಮಾನತೆಗಾಗಿ ಜನಾಂದೋಲನದ ರಾಜ್ಯಮಟ್ಟದ ಕಾರ್ಯಕರ್ತರ ಶಿಬಿರ ನಡೆಯಿತು. ಈ ಶಿಬಿರವನ್ನು ಉದ್ಘಾಟನೆ ಮಾಡಿ ಮಾತಾಡಿದ ಶ್ರೀಮಠದ ವೀರಭದ್ರ ಚನ್ನಮಲ್ಲ ಸ್ವಾಮೀಜಿಯವರು ಆಡಿದ ಮಾತುಗಳು ಇಂದಿನ ಕಾಲದ ಎಲ್ಲ ಸಾಮಾಜಿಕ ಕಾರ್ಯಕರ್ತರಿಗೆ ಮತ್ತು ನಾಯಕರಿಗೆ ಒಂದು ಉಪಯುಕ್ತ ಕೈಪಿಡಿಯಂತಿದೆ. ತಮ್ಮದೇ ಸ್ವಾರ್ಥ ಹಿತಾಸಕ್ತಿ ವ್ಯಕ್ತಿ ಪ್ರತಿಷ್ಠೆಗಳಲ್ಲಿ ಮುಳುಗಿ ಹೋರಾಟದ/ ಸಾಮಾಜಿಕ ಹಿತಾಸಕ್ತಿಗಳನ್ನು ಬಲಿಕೊಡುತ್ತಿರುವ ನಾಯಕರಿಗೆ ಚುರುಕು ಮುಟ್ಟಿಸಿದರು. ನಿಡುಮಾಮಿಡಿ ಸ್ವಾಮಿಯವರ ಮಾತುಗಳು ಈ ಕಾಲಘಟ್ಟದ ಚಳವಳಿಗಳು ಮುಂದೆ ಸಾಗಬೇಕಾದ ಸ್ಪಷ್ಟ ದಿಕ್ಕನ್ನು ಸೂಚಿಸುತ್ತಿರುವುದರಿಂದ ನಮ್ಮ ಓದುಗರಿಗಾಗಿ ಅವರ ಭಾಷಣದ ಆಯ್ದ ಭಾಗಗಳನ್ನು ಇಲ್ಲಿ ಯಥಾವತ್ ನೀಡುತ್ತಿದ್ದೇವೆ.

‘ನಾಯಕರ ವೈಯಕ್ತಿಕ ಲೋಲುಪತೆ ನಿಲ್ಲಲಿ’-ನಿಡುಮಾಮಿಡಿ ಸ್ವಾಮೀಜಿ

ಮೊದಲನೆಯದಾಗಿ, ಭೂಗತ ಬದುಕಿನಿಂದ ಹೊರಬಂದು, ಮುಖ್ಯವಾಹಿನಿ ಚಳವಳಿಯಲ್ಲಿ ಬೆರೆತು ಪ್ರಜಾತಂತ್ರವನ್ನು ಬಲಪಡಿಸಲಿಕ್ಕೆ ತೊಡಗಿಸಿಕೊಂಡಿರುವ ನೂರ್ ಶ್ರೀಧರ್ ಮತ್ತು ಸಿರಿಮನೆ ನಾಗರಾಜ್ ಅವರಿಗೆ ಹೃತ್ಪೂರ್ವಕ ಸ್ವಾಗತ. ಪ್ರಜಾಪ್ರಭುತ್ವಕ್ಕೆ ಶಕ್ತಿ ತುಂಬುವ ಕೆಲಸ ಅತ್ಯಂತ ಸಂಯಮದಿಂದ ನಡೆಯಬೇಕು; ಅಹಿಂಸೆಯ ಮಾರ್ಗದಲ್ಲಿ ಮಾತ್ರ ಪ್ರಜಾತಾಂತ್ರಿಕ ಚಳವಳಿಗಳು ಯಶಸ್ಸು ಕಾಣಲು ಸಾಧ್ಯ ಎಂಬುದು ನನ್ನ ಭಾವನೆ. ಆದರೆ ಈ ಕಾಲಘಟ್ಟದ ಚಳವಳಿಗಳು ಎದುರಿಸುತ್ತಿರುವ ಸವಾಲುಗಳಿಗೆ ಉತ್ತರ ಕಂಡುಕೊಳ್ಳಲು ಹೊಸಚಿಂತನೆಗಳ ಅವಶ್ಯಕತೆಯಿದೆ.


ಶೋಷಣೆರಹಿತ ಸಮಾಜದ ನಿರ್ಮಾಣ, ಸಮಾನತೆ ಸಾಧನೆ - ಇವುಗಳೇ ಎಲ್ಲಾ ಸಾಮಾಜಿಕ ಚಳವಳಿಗಳ ಆಶಯವಾಗಿದೆ. ಇತಿಹಾಸದಲ್ಲಿ ಮೊದಲಿಗೆ ಗಣಗಳ ಹೋರಾಟ ಹೆಚ್ಚು ಮಹತ್ವವನ್ನು ಪಡೆದುಕೊಂಡಿದೆ. ನಂತರದಲ್ಲಿ ಬಂದ ಚಾರ್ವಾಕರು ಈ ಆಶಯಕ್ಕಾಗಿ ಭಾರೀ ಹೋರಾಟವನ್ನೇ ನಡೆಸಿದ್ದರು. ನಂತರ ಬಂದ ಶ್ರಮಣರು, ಬುದ್ಧ, ಮಹಾವೀರ ಇತ್ಯಾದಿಗಳು ಈ ಆಶಯವನ್ನು ಪ್ರತಿಪಾದಿಸಿ ವಿಭಿನ್ನ ರೀತಿಯ ಚಳವಳಿಯನ್ನು ಹುಟ್ಟುಹಾಕಿದ್ದರು. ಆ ಚಳವಳಿಗಳು ಇಂದಿಗೂ ನಮಗೆ ಪ್ರಸ್ತುತವಾಗಿವೆ. ಉದಾ: 3500 ವರ್ಷಗಳ ಹಿಂದೆ ಚಾರ್ವಾಕರು ಎತ್ತಿದ ಪ್ರಶ್ನೆಗಳಿಗೆ ಇಂದಿಗೂ ನಾವು ಉತ್ತರ ಕಂಡುಕೊಳ್ಳಲು ಸಾಧ್ಯವಾಗಿಲ್ಲ.

ಅವರ ವಿಚಾರಗಳು ಅಷ್ಟು ಶಕ್ತಿಶಾಲಿಯಾಗಿದ್ದುದಕ್ಕೆ ಕಾರಣ ಅವರು ಪ್ರಜ್ಞಾ ವಲಯವನ್ನು ವಿಸ್ತರಣೆ ಮಾಡಿದ್ದು ಮಾತ್ರವಲ್ಲ, ಅದರ ಜೊತೆಗೆ ಧ್ಯಾನದ ಮಾರ್ಗವನ್ನೂ ಕೂಡ ಅನುಸರಿಸಿದ್ದರು; ವೈಚಾರಿಕತೆಯ ಜೊತೆಜೊತೆಗೇ ಧ್ಯಾನಕ್ಕೂ ಆದ್ಯತೆ ಕೊಟ್ಟಿದ್ದರು. ನಂತರದ ಕಾಲಘಟ್ಟದ ಹೋರಾಟಗಾರರು ಪ್ರಜ್ಞಾವಲಯಕ್ಕೆ ಮಹತ್ವ ಕೊಟ್ಟರೂ ಧ್ಯಾನ ಮಾರ್ಗ ಅವರ ಆದ್ಯತೆಯಾಗಿರಲಿಲ್ಲ. ಹಾಗೆಯೇ, ಮಠಮಾನ್ಯಗಳು ವ್ಯವಹಾರಿಕ ಧಾರ್ಮಿಕತೆ ಮತ್ತು ವ್ಯವಹಾರಿಕ ಭಕ್ತಿಯನ್ನು ಆಚರಿಸಿದ್ದಾರೆಯೇ ಹೊರತು ಜನರ ಪ್ರಜ್ಞಾವಲಯವನ್ನು ವಿಸ್ತರಿಸುವ, ವೈಚಾರಿಕತೆಯನ್ನು ಬೆಳೆಸುವ ಕೆಲಸ ಮಾಡಲಿಲ್ಲ. ಹೀಗಾಗಿ ಅನೇಕ ವಿರೋಧಾಭಾಸಗಳು ತಲೆಯೆತ್ತಿರುವುದನ್ನು ನಾವು ಕಾಣುತ್ತೇವೆ.

ಇದರ ಅಹಿತಕರ ಪರಿಣಾಮವಾಗಿ ಹೋರಾಟಗಾರರಲ್ಲಿ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳಿಗಿಂತಲೂ ವೈಯಕ್ತಿಕ ವಿಚಾರಗಳು ಹೆಚ್ಚಾಗಿ ಹೋರಾಟ ದಿಕ್ಕುತಪ್ಪಿರುವುದನ್ನು ನಾವು ಕಾಣುತ್ತೇವೆ.

ಇಂದು ಹೋರಾಟಗಳಲ್ಲಿ ನಾನಾಬಗೆಯ ಹೋರಾಟಗಳನ್ನು ನಾವು ಪಟ್ಟಿ ಮಾಡಬಹುದು, ರೈತ ಹೋರಾಟ, ಕಾರ್ಮಿಕ ಹೋರಾಟ, ಮಹಿಳಾ ಹೋರಾಟ, ದಲಿತ ಹೋರಾಟಗಳಲ್ಲದೆ, ಪರಿಸರ, ಭ್ರಷ್ಟಾಚಾರ ವಿರೋಧಿ, ಭಾಷಾ ಚಳವಳಿ ಹೀಗೆ ಒಟ್ಟು ಪ್ರಮುಖ 15 - 16 ವಿವಿಧ ಧಾರೆಗಳ ಹೋರಾಟಗಳನ್ನು ನಾವು ರಾಜ್ಯಮಟ್ಟದಲ್ಲಿಯೂ, ರಾಷ್ಟ್ರಮಟ್ಟದಲ್ಲಿಯೂ ನೋಡಬಹುದು. ಈ ಧಾರೆಗಳು ಒಂದಕ್ಕೊಂದು ಎದುರುಬದುರಾಗಿ ನಿಲ್ಲಬೇಕಿಲ್ಲ. ಈ ಎಲ್ಲ ಧಾರೆಗಳು ವಾಸ್ತವದಲ್ಲಿ ಪರಸ್ಪರ ಪೂರಕವಾದಂಥವು. ಆದರೆ ನಮ್ಮ ಮುಂದಿರುವ ಕಠಿಣ ಸವಾಲು ಏನೆಂದರೆ ಈ ಎಲ್ಲ ಬಿಡಿಬಿಡಿ ಧಾರೆಗಳನ್ನು ಒಟ್ಟಿಗೆ ತರುವುದು ಹೇಗೆ?

ವಾಜಪೇಯಿ ಸರ್ಕಾರ ಪ್ರಥಮ ಬಾರಿಗೆ ಅಧಿಕಾರಕ್ಕೆ ಬಂದ ಸಂದರ್ಭದಲ್ಲಿ ಕೆಲವು ಹೋರಾಟಗಾರರ ಮುಂದೆ ನಾನು ಒಂದು ಪ್ರಶ್ನೆ ಇಟ್ಟಿದ್ದೆ, ‘32 ಪಕ್ಷಗಳು ಒಟ್ಟಾಗಿ ಸೇರಿ, ತಮ್ಮ ಹಿತಾಸಕ್ತಿಗಳನ್ನು ಕಾಪಾಡಿಕೊಳ್ಳಲು ಒಂದು ಸರ್ಕಾರವನ್ನು ರಚಿಸಬಹುದಾದರೆ 30 ಸಂಘಟನೆಗಳು ಒಟ್ಟಾಗಿ ಒಂದು ಹೋರಾಟವನ್ನು ರೂಪಿಸುವುದು ಯಾಕೆ ಸಾಧ್ಯವಿಲ್ಲ? ಈ ಉದ್ದೇಶಕ್ಕಾಗಿ ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮ ರೂಪಿಸಲು ಹೋರಾಟಗಾರರು ಯಾಕೆ ಮುಂದಾಗುತ್ತಿಲ್ಲ?’ ಅಂತ. ಇಂಥ ಮಹತ್ವದ ಪ್ರಯೋಗ



ನಮ್ಮ ನಾಡಿನಲ್ಲಿ ಆಗಲೇ ಶುರುವಾಗಬೇಕಿತ್ತು. ತಡವಾಗಿಯಾದರೂ ಅಂಥ ಪ್ರಯತ್ನ ಶುರುವಾಗಿರುವುದು ಸ್ವಾಗತಾರ್ಹ.

ಮೊದಲಿಗೆ. ಪ್ರಾಮಾಣಿಕತೆ ಹಾಗೂ ಜನಹಿತವೇ ಅಂತಿಮ ಎಂಬ ಬದ್ಧತೆ ನಾಯಕತ್ವದಲ್ಲಿರಬೇಕು. ಸಣ್ಣಪುಟ್ಟ ಭಿನ್ನಾಭಿಪ್ರಾಯವಿದ್ದರೂ ಜೊತೆಗೂಡಿ ಸಾಗುವಂತಹ ಮನಸ್ಥಿತಿ ಇರಬೇಕು. ನಾವು ಎಷ್ಟು ಹೆಜ್ಜೆ ಮುಂದೆ ಹೋಗಿದ್ದೇವೆ? ಹಿಂದೆ ಸರಿದ್ದಿದ್ದೆಷ್ಟು? ನಮ್ಮ ಕಾರ್ಯತಂತ್ರಗಳಲ್ಲಿ ಬರಬೇಕಾದ ಬದಲಾವಣೆ ಏನು? ಈ ಎಲ್ಲ ವಿಚಾರಗಳ ಬಗ್ಗೆ ಸಮಗ್ರ ಆತ್ಮಾವಲೋಕನ ಮಾಡಿಕೊಳ್ಳಲೇಬೇಕಾದ ತುರ್ತನ್ನು ಮನಗಾಣಬೇಕು.



ಎಲ್ಲ ಹೋರಾಟದ ಧಾರೆಗಳು, ಸಂಘಟನೆಗಳು ಒಂದು ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಆಧಾರದಲ್ಲಿ ಒಂದು ಮಹಾಒಕ್ಕೂಟ ರಚಿಸುವತ್ತ ಮಹತ್ವದ ಹೆಜ್ಜೆ ಇಡಬೇಕು. ಶೋಷಣೆರಹಿತ ಸಮಾಜದ ಸ್ಥಾಪನೆಯೇ ಈ ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಅಂತಿಮ ಗುರಿ ಎಂಬುದರಲ್ಲಿ ಯಾವುದೇ ಭಿನ್ನಾಭಿಪ್ರಾಯ ಇರಲು ಸಾಧ್ಯವಿಲ್ಲ. ಸಾಮಾನ್ಯ ಕನಿಷ್ಠ ಕಾರ್ಯಕ್ರಮದ ಬೇಡಿಕೆಗಳು ಹೇಗಿರಬೇಕು?

ಒಂದೆರಡು ಉದಾಹರಣೆಗಳನ್ನು ನೋಡಬಹುದು. ಬಹಳ ಕಾಲದಿಂದಲೂ ಮಹಿಳಾ ಮೀಸಲಾತಿ ಹೋರಾಟ ನೆನೆಗುದಿಗೆ ಬಿದ್ದಿದೆ. ಆಸ್ತಿಯ ಹಕ್ಕಿನ ವಿಚಾರದಲ್ಲಿ ಪುರುಷಾಧಿಪತ್ಯ, ತಾರತಮ್ಯದ ವ್ಯವಸ್ಥೆ ಅನೂಚಾನವಾಗಿ ಮುಂದುವರೆದಿದೆ. ಒಟ್ಟು ಸ್ಥಿರಾಸ್ತಿಗಳ ಹಿಡುವಳಿಯಲ್ಲಿ ಶೇಕಡ 99ರಷ್ಟು ಪುರುಷರ ಕೈಯಲ್ಲೇ ಇದೆ. ಕೇವಲ ಶೇಕಡ 1ರಷ್ಟು ಮಾತ್ರ ಮಹಿಳೆಯರ ಹೆಸರಿನಲ್ಲಿರುವುದು. ಕುಟುಂಬದ ಆಸ್ತಿಯನ್ನು ಪುರುಷ ಮತ್ತು ಮಹಿಳೆಯರ ಜಂಟಿಹೆಸರಿನಲ್ಲಿ ತರಬೇಕೆಂಬ ಬೇಡಿಕೆಯನ್ನು ರೂಪಿಸಬೇಕಾದ ಅಗತ್ಯವಿದೆ. ದಲಿತರಿಗೆ ಸಂಬಂಧಿಸಿದ ಅಸ್ಪೃಶ್ಯತೆಯ ಪಿಡುಗನ್ನು ನಾಶ ಮಾಡುವ ನಿಟ್ಟಿನಲ್ಲಿ ನಿರ್ದಿಷ್ಟ ಬೇಡಿಕೆಗಳನ್ನು ರೂಪಿಸಬಹುದು; ಎಲ್ಲಕ್ಕಿಂತಲೂ ಮುಖ್ಯವಾಗಿ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಕೊಡಬೇಕು ಎಂಬುದು ಇಂದಿನ ಕಾಲಘಟ್ಟಕ್ಕೆ ಅತ್ಯಂತ ಮಹತ್ವದ್ದು. ಹಾಗೆಯೇ ಮೂಢನಂಬಿಕೆ ವಿರೋಧಿ ಹೋರಾಟಕ್ಕೆ ಇಂದು ಹೆಚ್ಚಿನ ಪ್ರಾಮುಖ್ಯತೆ ಬಂದಿದೆ. ಮೂಢನಂಬಿಕೆಗಳನ್ನೇ ಬಂಡವಾಳಮಾಡಿಕೊಂಡು ಜನರನ್ನು ಶೋಷಿಸುತ್ತಿರುವ ವರ್ಗ ಹೆಚ್ಚಾಗ್ತಾ ಇದೆ. ಈ ಮೂಢನಂಬಿಕೆಯಿಂದಾಗಿ ಬಡತನಕ್ಕಿಂತಲೂ ಹೆಚ್ಚಾಗಿ ಸಮಾಜ ನಲುಗಿಹೋಗಿದೆ. ಕೋಮುದ್ವೇಷ ಬಿತ್ತುವ ಶಕ್ತಿಗಳಿಗೆ ವಿರುದ್ಧವಾಗಿ ಬಹುತ್ವದ ವಿಚಾರಗಳನ್ನು ಪ್ರತಿಪಾದಿಸುವ ಕೆಲಸ ಆಗಬೇಕಿದೆ. ... ಹೀಗೆ ಈ ಸಂದರ್ಭದ ತುರ್ತು ಬೇಡಿಕೆಗಳತ್ತ ಕೇಂದ್ರೀಕರಿಸಬೇಕಾಗುತ್ತದೆ.

ವಿವಿಧ ಸಂಘಟನೆಗಳು ತಮ್ಮ ತಮ್ಮ ಐಡೆಂಟಿಟಿಗಳನ್ನು, ಬ್ಯಾನರ್‌ಗಳನ್ನು ಉಳಿಸಿಕೊಂಡೇ ಸಾಮಾನ್ಯ ಕನಿಷ್ಠ ಕಾರ್ಯಕ್ರಮಗಳ ಆಧಾರದಲ್ಲಿ ಹೋರಾಟಗಾರರ ಮಹಾಒಕ್ಕೂಟ ರಚಿಸುವ ಕಡೆ ನೀವು ಮುಂದಡಿ ಇಡುತ್ತೀರಿ ಎಂದು ಭಾವಿಸಿದ್ದೇನೆ. ಇದರ ಜೊತೆಗೆ ಅನುಭವಿ ಚಿಂತಕರನ್ನು ಒಳಗೊಂಡ ಒಂದು ಮಾರ್ಗದರ್ಶಿ ಮಂಡಳಿ ರಚನೆಯಾಗಬೇಕು. ಮಹಾಒಕ್ಕೂಟ ಮತ್ತು ಮಾರ್ಗದರ್ಶಿ ಮಂಡಳಿ ಈ ಎರಡೂ ಕೂಡ ಬಹಳ ಮಹತ್ವದ್ದು.

ಹೀಗೆ ಪರ್ಯಾಯ ರಾಜಕಾರಣ ಮಾಡಬೇಕೆಂಬ ಚರ್ಚೆ 15 ವರ್ಷಗಳ ಹಿಂದೆಯೂ ಬಂದಿತ್ತು, ಆದರೆ ಒಂದು ಜಟಿಲ ಸವಾಲು ಇದೆ. ಪರ್ಯಾಯ ರಾಜಕಾರಣ ಮಾಡಲಿಕ್ಕೆ ಪರ್ಯಾಯ ಮತದಾರ ಬೇಕಲ್ಲವೆ? ಅಂಥಾ ಮತದಾರರನ್ನು ಆಕಾಶದಿಂದ ತರಲು ಸಾಧ್ಯವೆ? ಭ್ರಷ್ಟ ರಾಜಕಾರಣಿಗಳು ಹಾಗೂ ಅವರ ಪಕ್ಷಗಳು ಇಂದಿನ ಮತದಾರರನ್ನು ಭ್ರಷ್ಟರನ್ನಾಗಿಸಿದ್ದಾರೆ ಎಂಬುದನ್ನು ಅರ್ಥ ಮಾಡಿಕೊಂಡು, ನಮ್ಮ ಮತದಾರರ ಮನಸ್ಥಿತಿಯನ್ನು ಬದಲಾಯಿಸಿ ಪರ್ಯಾಯ ಮತದಾರರನ್ನು ಸೃಷ್ಟಿಸಬೇಕು.

ಇಲ್ಲಿ ಮತ್ತೊಂದು ವಿಷಯವನ್ನು ನೆನಪಿಸಬಹುದು. ಕೆಲವರು ಚುನಾವಣೆಗಳನ್ನು ಬಹಿಷ್ಕಾರ ಮಾಡುವ ಸುದ್ದಿಗಳು ಕೇಳಿಬರುತ್ತವೆ. ಚುನಾವಣೆಗಳನ್ನು ಹೀಗಳೆಯುವ, ತಿರಸ್ಕಾರದಿಂದ ನೋಡುವ ಮಾತುಗಳು ಸಾಕಷ್ಟು ಕೇಳಿಬರುತ್ತವೆ. ಹೀಗೆ ಸಿನಿಕತನ ಮಾತನಾಡುವ, ತಿರಸ್ಕಾರದ ಮಾತನ್ನಾಡುವ ಜನ ಚುನಾವಣಾ ಪ್ರಕ್ರಿಯೆಯ ಮಹತ್ವದ ಬಗ್ಗೆ ಗಂಭಿರವಾಗಿ ವಿಚಾರ ಮಾಡಿರುವುದಿಲ್ಲ; ಅಥವ ಅಂಥಾ ಉಪಯುಕ್ತ ಪ್ರಯೋಗವನ್ನು ಯಾರೂ ಮಾಡಿಲ್ಲ, ಹೀಗಾಗಿ ಇಂಥಾ ವಾದಗಳು ಅಷ್ಟೇನೂ ಉಪಯುಕ್ತವಲ್ಲ ಅಂತ ನನ್ನ ಭಾವನೆ.

ಮುಂದಿನ ಎರಡು ವರ್ಷಗಳಲ್ಲಿ ವಿಧಾನಸಭೆ ಚುನಾವಣೆ ಬರಲಿದೆ. ಮೂರು ವರ್ಷಗಳಲ್ಲಿ ಸಂಸತ್ ಚುನಾವಣೆ ಬರಲಿದೆ. ಆ ವೇಳೆಗೆ ನಾವು ಕರ್ನಾಟಕದ 30 ಜಿಲ್ಲೆಗಳಲ್ಲೂ ಒಂದು ವಿಶಿಷ್ಟ ಪ್ರಯೋಗ ಮಾಡಲು ಸಾಧ್ಯವೇ? ಪ್ರತಿ ಜಿಲ್ಲೆಯಲ್ಲೂ ಒಂದು ಕ್ಷೇತ್ರವನ್ನು ಆರಿಸಿಕೊಂಡು, ಜನರ ಬೆಂಬಲ ಪ್ರೀತಿ ವಿಶ್ವಾಸ ಗಳಿಸಿರುವ ಯೋಗ್ಯವ್ಯಕ್ತಿಯನ್ನು ನಮ್ಮ ಅಭ್ಯರ್ಥಿಯನ್ನಾಗಿಸಿ ಹೋರಾಟಕ್ಕಿಳಿದರೆ, ಹಣಬಲ, ಜಾತಿಬಲ, ತೋಳ್ಬಲಗಳನ್ನು ಬಳಸಿಕೊಂಡು ರಾಜಕೀಯ ಮಾಡುತ್ತಿರುವ ಶಕ್ತಿಗಳನ್ನು ನಾವು ಎದುರಿಸಲು ಸಾಧ್ಯವಾಗುತ್ತದೆ. ನಾವು ಪ್ರಯೋಗಕ್ಕೆ ಇಳಿಯದೆ ಯಶಸ್ಸಿನ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಾ ಕೂರುವುದರಿಂದ ಪ್ರಯೋಜನವಿಲ್ಲ.


ಎಲ್ಲಿಯವರೆಗೆ ಚುನಾವಣಾ ವ್ಯವಸ್ಥೆ ಸರಿಯಾಗುವುದಿಲ್ಲವೋ ಅಲ್ಲಿಯವರೆಗೆ ನಮ್ಮ ಯಾವುದೇ ಮೂಲ ಸಮಸ್ಯೆಗಳು ಪರಿಹಾರ ಕಾಣುವುದಿಲ್ಲ. ಇದು ಅಸಾಧ್ಯವಾದುದೇನಲ್ಲ, ಗಂಭೀರ ಪ್ರಯತ್ನದ ಅಗತ್ಯವಿದೆ. ಈ ಕಾಲಘಟ್ಟದಲ್ಲಿ ನಕಲಿ ದೇಶಭಕ್ತರು ಹೆಚ್ಚುತ್ತಿದ್ದಾರೆ, ಹೀಗಿರುವಾಗ ಪ್ರಾಮಾಣಿಕರು, ಸಜ್ಜನರು ಒಟ್ಟಾಗಿ ನಕಲಿ ದೇಶಭಕ್ತರ ತಂತ್ರಗಳನ್ನು ಬಯಲು ಮಾಡಬೇಕಿದೆ.

ಈ ಸಭೆಯಲ್ಲಿ ಒಂದು ಕ್ರಾಂತಿಕಾರಿ ಹಾಡು ಹಾಡಿದರು. ಈ ಕ್ರಾಂತಿಗೀತೆಗಳನ್ನು 35 ವರ್ಷಗಳಿಂದ ಕೇಳ್ತಾ ಇದ್ದೇವೆ. ಅದೇ ಕಾರ್ಯತಂತ್ರಗಳನ್ನು ನೋಡ್ತಾ ಇದ್ದೇವೆ. ಚಳವಳಿಗಳು ಯಶಸ್ವಿಯಾಗದಿರಲಿಕ್ಕೆ ನಾಯಕತ್ವದ ಇತಿಮಿತಿಗಳೇ ಮುಖ್ಯ ಕಾರಣ ಅನಿಸುತ್ತೆ. ನಾಯಕರಲ್ಲಿ ಸಿದ್ಧಾಂತ ಲೋಲುಪತೆ, ಆತ್ಮ ಲೋಲುಪತೆ, ವೈಚಾರಿಕಾ ಹಿತಾಸಕ್ತಿಗಳು ಹೆಚ್ಚಾಗಿವೆ. ನಾಯಕರು ಇಂಥಾ ಲೋಲುಪತೆಗಳಿಂದ ಹೊರಬಂದಾಗ ಮಾತ್ರ ಚಳವಳಿ ಮುಂದಡಿಯಿಡಲು ಸಾಧ್ಯವಾಗುತ್ತದೆ.

ಇಂದು ರೈತರು - ಕಾರ್ಮಿಕರು ಆರ್ಥಿಕವಾಗಿ ಅತಿಹೆಚ್ಚು ಶೋಷಿತರಾಗಿದ್ದಾರೆ. ದಲಿತರು ಸಾಮಾಜಿಕವಾಗಿ ಅತಿಹೆಚ್ಚು ಶೋಷಿತರಾಗಿದ್ದಾರೆ. ಮಹಿಳೆಯರು ಕೌಟುಂಬಿಕವಾಗಿ ಅತಿಹೆಚ್ಚು ಶೋಷಿತರಾಗಿದ್ದಾರೆ. ಇಂಥಾ ಶೋಷಣೆಗಳನ್ನು ಅಂತ್ಯಗೊಳಿಸುವ ನಿಟ್ಟಿನಲ್ಲಿ ಸಮಾನತೆಗಾಗಿ ಜನಾಂದೋಲನ ಗಂಭೀರ ಪ್ರಯತ್ನ ಹಾಕಬೇಕು, ಆ ವಿಶ್ವಾಸ ಇದೆ. ನಿಮ್ಮ ನಿಮ್ಮ ವ್ಯಾಪ್ತಿಯಲ್ಲಿ ಜನತೆಗೆ, ಕಾರ್ಯಕರ್ತರಿಗೆ ವಿಚಾರ ತಲುಪಿಸುವ ಪ್ರಯತ್ನ ಆಗಬೇಕು. ಸರಿಯಾದ ದಿಕ್ಕಿನಲ್ಲಿ ನಡೆದದ್ದೇ ಆದರೆ ಗೆಲುವು ನಿಶ್ಚಿತ. ಇದನ್ನು ಸಾಧಿಸಲು ಚಳವಳಿ, ಹೋರಾಟಗಳು ನಗರದಿಂದ ಹಳ್ಳಿಗಳ ಕಡೆಗೆ ಸಾಗಬೇಕು.

ಕೊನೆಯದಾಗಿ, ಇಂಥ ಮಹತ್ವದ ಕಾರ್ಯಾಗಾರವನ್ನು ಆಯೋಜಿಸಿ ರಾಜ್ಯದ ಬೇರೆಬೇರೆ ಕಡೆ ಕೆಲಸ ಮಾಡುತ್ತಿರುವ ವಿವಿಧ ಧಾರೆಗಳ ಕಾರ್ಯಕರ್ತರನ್ನು ಒಂದೆಡೆ ತರುವ ಪ್ರಯತ್ನ ಮಾಡಿದ ಸಮಾನತೆಗಾಗಿ ಜನಾಂದೋಲನದ ಎಲ್ಲ ಪದಾಧಿಕಾರಿಗಳು, ನಿರ್ದೇಶಕ ಮಂಡಳಿ ಸದಸ್ಯರು ಮತ್ತು ಹಿತೈಷಿಗಳಿಗೆ ಹೃತ್ಪೂರ್ವಕ ಅಭಿನಂದನೆಗಳು.

• ದೊಡ್ಡಿಪಾಳ್ಯ ನರಸಿಂಹಮೂರ್ತಿ






ಮೈಸೂರು: ಭಜ್ರಂಗಿ ರಾಜು ಹತ್ಯೆಯ ಸುತ್ತ...

ಮೈಸೂರಿನ ಭಜರಂಗದಳದ ಅಧ್ಯಕ್ಷ ರಾಜು 2009 ರಲ್ಲಿ ತನ್ನ ಮನೆಯ ಸಮೀಪದಲ್ಲಿ ತಲೆ ಎತ್ತುತ್ತಿದ್ದ ಮದರಸಾವೊಂದರ ಮೇಲೆ ಹಂದಿ ಮಾಂಸ ಎಸೆದು ರಾದ್ಧಾಂತ ಸೃಷ್ಟಿಸಿ ಬಿಟ್ಟಿದ್ದ! ಆವತ್ತು ಉದಯಗಿರಿ ಪೊಲೀಸ್ ಸ್ಟೇಷನ್‌ನಲ್ಲಿ ಇನ್ಸ್‌ಪೆಕ್ಟರ್ ಆಗಿದ್ದ ಮ್ಯಾಥ್ಯೂಸ್ ಈತನ ವಿರುದ್ಧ ರೌಡಿಶೀಟ್ ತೆರೆದು ಜೈಲಿಗೆ ಕಳುಹಿಸಿದ್ದರು! ವಸತಿ ಪ್ರದೇಶದಲ್ಲಿ ಮದರಸಾ ತೆರೆಯ ಬಾರದು ಎಂಬ ಕಾನೂನಿದ್ದರೂ ಉದಯಗಿರಿಯ ಕೆಲವು ಮುಸ್ಲಿಮರು ಮದರಸಾ ಕಟ್ಟಡವನ್ನು ಸಂಪೂರ್ಣ ಗೊಳಿಸಿ ನಮಾಜು ಮೊಳಗಿಸಿ ಬಿಟ್ಟಿದ್ದರು. ರಾಜು ಇದರ ವಿರುದ್ಧ ಕೋರ್ಟ್‌ಗೆ ಹೋಗಿ ತಡೆಯಾಜ್ಞೆ ತಂದಿದ್ದ! ಆದರೂ ನಮಾಜು ನಿಲ್ಲದಿದ್ದರಿಂದ ಹಂದಿಮಾಂಸ ಎಸೆದು ರಾದ್ಧಾಂತ ಸೃಷ್ಟಿಸಿಬಿಟ್ಟಿದ್ದ!

ಮೈಸೂರಿನ ಭಜರಂಗದಳದ ಅಧ್ಯಕ್ಷ ರಾಜು ಭೀಕರವಾಗಿ ಹತ್ಯೆಯಾಗಿದ್ದಾನೆ. ಮಾರ್ಚ್ 13, 2016ರ ಸಾಯಂಕಾಲ 5.15 ಗಂಟೆಯ ಸುಮಾರಿಗೆ ಉದಯಗಿರಿಯ ಸರ್ಕಲ್‌ನಲ್ಲಿ ಆತನನ್ನು ಕೊಚ್ಚಿ ಹಾಕಲಾಗಿದೆ. ಭಜ್ರಂಗಿ ರಾಜು ಟೀ ಅಂಗಡಿಯೊಂದರ ಮುಂದೆ ತನ್ನ ಸ್ನೇಹಿತನೊಂದಿಗೆ ಟೀ ಕುಡಿಯುತ್ತಾ ನಿಂತಿದ್ದಾಗ ಬಂದ ಹಂತಕರಿಬ್ಬರು ಅವನನ್ನು ಕತ್ತರಿಸಿ ಪರಾರಿಯಾಗಿದ್ದಾರೆ. ಒಬ್ಬಾತ ಬೈಕ್ ಸ್ಟಾರ್ಟ್ ಮಾಡಿಕೊಂಡು ಕುಂತಿದ್ದು, ಇನ್ನೊಬ್ಬ ರಾಜುವನ್ನು ಕತ್ತರಿಸಿ ಚಲಿಸಲು ಸಿದ್ಧವಾಗಿದ್ದ ಬೈಕ್ ಏರಿ ಪರಾರಿಯಾಗಿದ್ದಾನೆ!

ಕೊಲೆಯಾದ ರಾಜುವಿಗೆ ಈಗಿನ್ನೂ 30ರ ಹರೆಯ. ಆದರೆ ಹೆಸರು ಮಾಡಿದ್ದ! ಕಳೆದ ಎಂಟ್ಹತ್ತು ವರ್ಷಗಳಿಂದ ಆರೆಸ್ಸೆಸ್‌ನಲ್ಲಿದ್ದ ರಾಜು ಇದೀಗ 'ಶ್ರೀರಾಮಸೇನೆ'ಗೆ ಹಾರಿ ಮೈಸೂರಿನ ಶಾಖೆಗೆ ಅಧ್ಯಕ್ಷನಾಗಿದ್ದ. ಶ್ರೀರಾಮಸೇನೆಯ ನಾಯಕ ಪ್ರಮೋದ್ ಮುತಾಲಿಕನನ್ನು ಆಗಾಗ್ಗೆ ಮೈಸೂರಿಗೆ ಕರೆಸಿ ಸಭೆ-ಸಮಾರಂಭ ಮಾಡುತ್ತಿದ್ದ! ಇದರಿಂದ ಅವನ ಮಾಜಿ ಗೆಳೆಯರಿಗೆ ಜಲಸ್ ಆಗಿದ್ದು ಸುಳ್ಳಲ್ಲ, ಎಲ್ಲರಿಗಿಂತ ಹೆಚ್ಚಾಗಿ ಮೈಸೂರಿನ ಉದಯಗಿರಿಯ ಮುಸ್ಲಿಮರಿಗೆ 'ಉರಿ' ತರಿಸಿದ್ದು ಖರೆ! ಉದಯಗಿರಿಯ ಮುಸ್ಲಿಮರು ರಾಜು ವಿರುದ್ಧ ಕೆಂಡ ಕಾರುತ್ತಿದ್ದುದೇಕೆ ಎಂದರೆ..



ಹಂದಿಮಾಂಸ ಹಾಕಿದ್ದ!

ಇಸವಿ 2009ರಲ್ಲಿ ಮೈಸೂರಿನ ಉದಯಗಿರಿ ಬಡಾವಣೆಯಲ್ಲಿ ಹಿಂದು-ಮುಸ್ಲಿಂ ಕೋಮುಗಲಭೆ ಹೊತ್ತಿಕೊಂಡು ಉರಿದದ್ದು ನಿಮಗೆ ನೆನಪಿರಬೇಕು. ಆ ಗಲಭೆಯ ಸೂತ್ರಧಾರ ಇವತ್ತು ಕೊಲೆಯಾಗಿರುವ ಭಜ್ರಂಗಿ ರಾಜುವೇ! ಉದಯಗಿರಿಯ ಕ್ಯಾತಮಾರನಹಳ್ಳಿಯಲ್ಲಿ ರಾಜು ಮನೆಯಿದೆ. ಅದಕ್ಕೆ ಸಮೀಪದಲ್ಲಿಯೇ 4ನೇ ಸ್ಟೈಟ್‌ನಲ್ಲಿ ಮುಸ್ಲಿಂ ಮುಖಂಡರು ಒಂದು ಮದರಸಾ ಕಟ್ಟಲು ಹೊರಟಿದ್ದರು. ಅದನ್ನು ವಿರೋಧಿಸಿದ್ದ ಭಜ್ರಂಗಿ ರಾಜು, ಜಾತಿವಾರು ಬಾಂಧವರು ವಾಸಿಸುತ್ತಿರುವ ಪ್ರದೇಶದಲ್ಲಿ ಮುಸ್ಲಿಮರು ಮಾತ್ರ ಮದರಸಾ ನಿರ್ಮಿಸುವುದು ಸರಿಯಲ್ಲ ಎಂದು ವಾದಿಸಿ ಕೋರ್ಟ್‌ನಲ್ಲಿ ದಾವೆ ಹೂಡಿದ್ದ. ಈ ವಾದವನ್ನು ಮಾನ್ಯ ನ್ಯಾಯಾಲಯವೂ ಒಪ್ಪಿಕೊಂಡು ಮದರಸಾ ಕಟ್ಟಡ ನಿರ್ಮಾಣಕ್ಕೆ ತಡೆಯಾಜ್ಞೆ ನೀಡಿತ್ತು, ಆದರೂ ಕೆಲವರು ಕ್ಯಾರೇ ಅನ್ನದೆ ಕಟ್ಟಡ ನಿರ್ಮಾಣವನ್ನು ಮುಂದುವರೆಸಿದ್ದರು. ಆವತ್ತಿಗೆ ಆರೆಸ್ಸೆಸ್‌ನಲ್ಲಿದ್ದ ರಾಜು ತನ್ನ ಸಹಚರರಿಗೆ ಯುದ್ಧಕ್ಕೆ ಸಿದ್ಧವಾಗಿರಲು ಸೂಚಿಸಿ, ಆ ವಿವಾದಿತ ಜಾಗಕ್ಕೆ ಹಂದಿಮಾಂಸ ಹಾಕಿಬಿಟ್ಟಿದ್ದ! ಆವತ್ತು ಕೋಮು ಗಲಭೆ ಹೊತ್ತಿಕೊಂಡು ಉರಿದಿತ್ತು.

ಉದಯಗಿರಿಯ ಪೊಲೀಸರು ರಾಜು, ಪತ್ರಿಕಾವಿತರಕರ ಸಂಘದ ಅಧ್ಯಕ್ಷ ಸುರೇಶ ಮತ್ತಿತರೆ ಮೂವರನ್ನು ಬಂಧಿಸಿ, ರೌಡಿಶೀಟ್ ತೆರೆದು ಜೈಲಿಗೆ ದಬ್ಬಿದ್ದರು. ಆ ಕೇಸಿನಲ್ಲಿ ಒಂದಿಷ್ಟು ದಿವಸ ಜೈಲುವಾಸ ಅನುಭವಿಸಿದ್ದ ರಾಜು ಮತ್ತು ಟೀಂ ಆನಂತರ ಜಾಮೀನಿನ ಮೇಲೆ ಹೊರಬಂದಿತ್ತು ನಂತರವೂ ಒಂದಿಷ್ಟು ವರ್ಷಗಳ ಕಾಲ ಆರೆಸ್ಸೆಸ್‌ನಲ್ಲಿಯೇ ಕಾಲ ತಳ್ಳಿದ ರಾಜು, ಇದೀಗ ಪ್ರತ್ಯೇಕಗೊಂಡು 'ಶ್ರೀರಾಮಸೇನೆ' ಶಾಖೆ ಸ್ಥಾಪಿಸಿ ಅದರ ಅಧ್ಯಕ್ಷನಾಗಿದ್ದ, ಇದರಿಂದ ಆರೆಸ್ಸೆಸ್‌ನಲ್ಲಿದ್ದ ರಾಜನ ಸಹಚರರಿಗೆ ಬೇಜಾರಾಗಿತ್ತು. ರಾಜು ಆಗಾಗ್ಗೆ ಸಭೆ-ಸಮಾರಂಭಗಳನ್ನು ನಡೆಸುತ್ತಾ ಪ್ರಮೋದ್ ಮುತಾಲಿಕ್‌ನನ್ನು ಕರೆಸತೊಡಗಿದ ಮೇಲೆ ಶತ್ರುಗಳ ಸಂಖ್ಯೆ ಜಾಸ್ತಿಯಾಗಿತ್ತು, ಅದರಲ್ಲೂ ಉದಯಗಿರಿಯ ಮುಸ್ಲಿಮರು ಉರಿದು ಬಿದ್ದಿದ್ದರು!

ಗಣೇಶಗುಡಿ ವಿವಾದ!

ಮೈಸೂರಿನ ಕ್ಯಾತಮಾರನಹಳ್ಳಿಯಲ್ಲಿ ಮಾಜಿ ಮೇಯರ್ ಶ್ರೀಕಂಠಯ್ಯನ ಮನೆಯಿದೆಯಲ್ಲಾ ಅದಕ್ಕೆ ಸಮೀಪದಲ್ಲಿಯೇ ಭಜ್ರಂಗಿ ರಾಜು ಮನೆಯಿದೆ. ಆ ಬೀದಿಯಲ್ಲಿ ಒಂದು ಗಣೇಶನ ಗುಡಿಯಿದ್ದು, ಕಳೆದ ಇಪ್ಪತ್ತು ವರ್ಷಗಳಿಂದಲೂ ಅದರ ಬಾಗಿಲಿಗೆ ಬೀಗ ಬಿದ್ದಿತ್ತು, ಆ ಭಾಗದ ಲಿಂಗಾಯತರು ಹಾಗೂ ನಾಯಕರು (ಪರಿವಾರ) ಸದರಿ ಗಣೇಶನ ಗುಡಿ ನಮ್ಮದು, ತಮ್ಮದು ಎಂದು ಕಚ್ಚಾಡಿಕೊಳ್ಳುತ್ತಲೇ ಕೂತಿದ್ದರು. ರಾಜು ಆರೆಸ್ಸೆಸ್ ಬಿಟ್ಟು ಶ್ರೀರಾಮಸೇನೆ ಸ್ಥಾಪಿಸಿ ಆರ್ಭಟಿಸಲಾರಂಭಿಸಿದ ಬಳಿಕ, ಈತನೇ ಈ ಗಣೇಶಗುಡಿಯ ವಿವಾದದಲ್ಲಿ ತಲೆಹಾಕಿ ಲಿಂಗಾಯತರೇ ಪೂಜೆ ಮಾಡುವ ಹಾಗೆ ಮಾಡಿದ್ದ! ಈಗ್ಗೆ 10 ದಿನಗಳ ಹಿಂದೆ ಆ ಗಣೇಶನ ಗುಡಿಯ ಬೀಗ ತೆರವುಗೊಳಿಸಿ, ಸುಣ್ಣಬಣ್ಣ ಬಳಿದು ಪೂಜೆ ಆರಂಭಿಸಲಾಗಿತ್ತು! ಈ ಘಟನೆ ನಡೆದ ಕೆಲವೇ ದಿನಗಳಲ್ಲಿ ರಾಜು ಹತ್ಯೆಯಾಗಿದೆ. ಹೀಗಾಗಿ, ಈ ಹತ್ಯೆಯನ್ನು ಹಿಂದೂಗಳೇ ಮಾಡಿದ್ದಾರೋ ಅಥವಾ ಹಂದಿಮಾಂಸದ ಘಟನೆಯಿಂದ ರೋಸಿದ್ದ ಮುಸ್ಲಿಮರೇ ಮಾಡಿದ್ದಾರೋ ಎಂದು ಖಚಿತವಾಗಿ ಹೇಳಲಾಗುತ್ತಿಲ್ಲ!

ಸಿ.ಸಿ. ಫುಟೇಜ್ ಸಾಕ್ಷ್ಯ!

ರಾಜುವಿನ ಹತ್ಯೆ ನಡೆದಿರುವ ಉದಯಗಿರಿ ಸರ್ಕಲ್‌ನಲ್ಲಿ ಬಹುತೇಕ ಮುಸ್ಲಿಮರ ಅಂಗಡಿ ಮುಂಗಟ್ಟುಗಳೇ ಇವೆ. ಆದರೆ ಕೆಲವರ ಅಂಗಡಿಗೆ ಮಾತ್ರ ಸಿ.ಸಿ. ಕ್ಯಾಮರಾ ಅಳವಡಿಸಲಾಗಿದೆ, ಅವರು ಅಷ್ಟು ಸುಲಭವಾಗಿ ಗುಟ್ಟು



ಬಿಟ್ಟು ಕೊಡುವುದಿಲ್ಲ! ಉದಯಗಿರಿಯ ಪೊಲೀಸರು ಬಹಳ ಕಷ್ಟಪಟ್ಟು ಸಿ.ಸಿ. ಕ್ಯಾಮರಾದೊಳಗೆ ರೆಕಾರ್ಡ್ ಆಗಿರುವ ಫುಟೇಜ್ ಸಂಗ್ರಹಿಸಿದ್ದಾರೆ. ಇದರ ಆಧಾರದಿಂದ ರಾಜುವಿನ ಹಂತಕರ ಪತ್ತೆಯಾಗುವ ಸಾಧ್ಯತೆಗಳಿವೆ!

ಮೈಸೂರಿನ ಪೊಲೀಸ್ ಕಮೀಷನರ್ ದಯಾನಂದ್ ದಕ್ಷರು. ಇವರು ಯಾವುದೇ ಪಕ್ಷ, ಸಂಘಟನೆ, ವ್ಯಕ್ತಿಗಳ ಶಿಫಾರಸ್ಸಿಗೆ ಬಗ್ಗುವುದಿಲ್ಲ. ಹೀಗಾಗಿ ಈ ಪ್ರಕರಣದ ತನಿಖೆ ನ್ಯಾಯಯುತವಾಗಿ ನಡೆದು ಹಂತಕರ ಪತ್ತೆ, ಜೈಲುಶಿಕ್ಷೆ ಖಚಿತವೆಂದು ಮೈಸೂರಿನ ಜನ ಮಾತಾಡುತ್ತಿದ್ದಾರೆ!

■ ವರದಿಗಾರ

ಬಲವಂತದ ಬಂದ್

ಶ್ರೀರಾಮ ಸೇನೆಯ ಜಿಲ್ಲಾಧ್ಯಕ್ಷ ರಾಜು ಹತ್ಯೆಯ ಹಿನ್ನೆಲೆಯಲ್ಲಿ ಮೈಸೂರಿನ ಬಿಜೆಪಿಗರೆಲ್ಲಾ ಒಗ್ಗಟ್ಟಾ[illegible] ಬೀದಿಗಿಳಿದಿದ್ದಾರೆ. ಆರೆಸ್ಸೆಸ್, ಭಜ್ರಂಗದಳ ಎನ್ನದೆ ಎಲ[illegible] ಕೇಸರಿ ಸಂಘಟನೆಗಳೂ ಬೀದಿಗಿಳಿದು ಪ್ರತಿಭಟಿಸುತ್ತಿ[illegible] ಆದರೆ ಈ ಪ್ರತಿಭಟನೆ ಸಾತ್ವಿಕವಾಗಿ ನಡೆಯುತ್ತಿಲ್ಲ, ಅಂಗಡಿ[illegible] ವ್ಯಾಪಾರಿಗಳನ್ನು ಹೆದರಿಸಿ ಬಲವಂತವಾಗಿ ಬಾಗಿಲು[illegible] ಮುಚ್ಚಿಸಿ ದಾಂಧಲೆ ಎಬ್ಬಿಸಲಾಗಿದೆ! ಇದನ್ನೆಲ್ಲಾ ಗಮನಿಸಿರು[illegible] ಜಿಲ್ಲಾಧಿಕಾರಿ ಶಿಖಾ ಮತ್ತು ಪೊಲೀಸ್ ಕಮೀಷನರ್ ಬಿ.ದಯಾನಂದ್ ನಗರದಲ್ಲಿ 144 ಸೆಕ್ಷನ್ ಜಾರಿಗೊಳಿ[illegible] ದುಷ್ಕೃತ್ಯಗಳಲ್ಲಿ ತೊಡಗಿರುವವರನ್ನು ಪತ್ತೆ ಹಚ್ಚಿ ಬಂಧಿಸಿದ್ದಾರೆ[illegible] ಇದರ ಮಧ್ಯೆ ಮೃತ ರಾಜುವಿನ ಶವಸಂಸ್ಕಾರ ಕಾಯ[illegible] ಮುಗಿಯುವತನಕ ಸೈಲೆಂಟಾಗಿದ್ದ ಉದಯಗಿರಿಯ[illegible] ಮುಸ್ಲಿಮರು, ಸಂಜೆಯ ನಂತರ ಉದ್ವಿಗ್ನಗೊಂಡು[illegible] ಹಿಂದೂಗಳ ಮೇಲೆ ತಿರುಗಿಬಿದ್ದಿದ್ದಾರೆ! ಮೊದಲಿಗೆ[illegible] ಪೊಲೀಸರು ಮತ್ತು ಮಾಧ್ಯಮಗಳ ಸಿಬ್ಬಂದಿಯ ಮೇಲೆಯೂ[illegible] ಕಲ್ಲು ತೂರಿದ್ದಾರೆ! ಕೆಲವರ ಕೈಲಿದ್ದ ಮಚ್ಚು ಲಾಂಗ್‌ಗಳನ್ನು ನೋಡಿ ಖಾಸಗಿ ವಾಹಿನಿಗಳ ವರದಿಗಾರರು ಪ್ರಾಣ ಉಳಿದರೆ ಸಾಕೆಂದುಕೊಂಡು ಓಡಿಬಂದಿದ್ದಾರೆ!

ಮುಸ್ಲಿಮರು ಜಾಸ್ತಿಯಿರುವ ಮಂಡಿಮೊಹಲ್ಲಾ[illegible] ಗೌಸಿಯಾನಗರ, ಉದಯಗಿರಿ, ರಾಜೀವ್ ನಗರ, ಕಲ್ಯಾಣಗಿರಿ[illegible] ಮುಂತಾದ ಪ್ರದೇಶಗಳಲ್ಲಿ ಪೊಲೀಸ್ ಬಂದೋಬಸ್ತ್[illegible] ಜೊತೆಗೆ ಮಿಲಿಟರಿ ಪಡೆಗಳನ್ನೂ ನಿಯೋಜಿಸಲಾಗಿದೆ!

ಅದು ಹೆಣ್ಣುಮಕ್ಕಳ ಕುಟುಂಬ!

ಕ್ಯಾತಮಾರನಹಳ್ಳಿಯ ಮಾದಪ್ಪ ಮತ್ತು ಚಂದ್ರಮ್ಮ ದಂಪತಿಗಳ ಒಬ್ಬನೇ ಮಗ ರಾಜು. ಇವರಿಗೆ ನಾಲ್ಕು ಹೆಣ್ಣು ಮಕ್ಕಳಿದ್ದಾರೆ. ಈ ಕುಟುಂಬಕ್ಕೆ ರಾಜುವೇ ದಿಕ್ಕಾಗಿದ್ದ, ಇವತ್ತು ಅವನ ಕೊಲೆಯಾಗಿದೆ. ಹೀಗಾಗಿ ಈ ಕುಟುಂಬ ಈಗ ತತ್ತರಿಸಿಹೋಗಿದೆ. ಜಿಲ್ಲಾಧಿಕಾರಿ ಶಿಖಾ ಈಗಾಗಲೇ ಈ ಕುಟುಂಬಕ್ಕೆ 5 ಲಕ್ಷ ರೂ ಪರಿಹಾರ ಘೋಷಿಸಿದ್ದಾರೆ. ಗೃಹ ಸಚಿವ ರಾಜು ಹತ್ಯೆಯ ಕೇಸ್‌ನ ತನಿಖೆಯನ್ನು ಸಿಸಿಬಿಗೆ ವಹಿಸಿದ್ದಾರೆ. ರಾಜು ಹತ್ಯೆಯ ಹಿನ್ನೆಲೆಯಲ್ಲಿ ಗುಂಪು ಗೂಡಿರುವ ಆರೆಸ್ಸೆಸ್‌ನವರು ಮತ್ತು ಶ್ರೀರಾಮಸೇನೆಯವರು ಮುಸ್ಲಿಮರ ವಿರುದ್ಧ ಆರೋಪಿಸುತ್ತಿದ್ದಾರೆಯೇ ಹೊರತು, ಹತ್ಯೆಯಾಗಿರುವ ರಾಜು ಕುಟುಂಬಕ್ಕೆ ಏನೇನೂ ನೆರವು ನೀಡಿಲ್ಲ! ಮೈಸೂರಿನ ಸಂಸದ ಪ್ರತಾಪ್ ಸಿಂಹ, ಬಿಜೆಪಿಗರಾದ ರಾಮದಾಸ್, ಮಾರುತಿರಾವ್ ಪವಾರ್ ಇತರರು ಕಾಂಗ್ರೆಸ್ ಸರ್ಕಾರದ ವಿರುದ್ಧ ಘೋಷಣೆ ಕೂಗಿಕೊಂಡು ನಿಂತಿದ್ದಾರೆ!

ಇವರೆಲ್ಲಾ ಸೇರಿ ಮೃತ ರಾಜುವಿನ ಕುಟುಂಬಕ್ಕೆ ಅಲ್ಪ ಸ್ವಲ್ಪ ನೆರವು ನೀಡಿದರೆ ಆ ಹೆಣ್ಣುಮಕ್ಕಳು ಬದುಕಿಕೊಂಡಾರು...





ಮಂಡ್ಯ ನಗರಸಭೆ:

ಅರ್ಧಕೋಟಿ ಖರ್ಚು ಮಾಡಿ ಅಧ್ಯಕ್ಷನಾದ ಬೋರೇಗೌಡ



ಹೊಸಹಳ್ಳಿ ಬೋರೇಗೌಡ


ಮಂಡ್ಯ ನಗರಸಭೆ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಅಧಿಕಾರ ಹಿಡಿಯಲು ಕೈ-ತೆನೆ ನಡುವೆ ನಡೆದ ...ತ್ತಿನಲ್ಲಿ ಕೊನೆಗೂ ಕೈ ಪಡೆ ವಿಜಯ ಸಾಧಿಸಿದೆ. ...ವು ಹೈಡ್ರಾಮಾದ ನಡುವೆಯೂ ಮಾರ್ಚ್ 16ರಂದು ...ದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಹೊಸಹಳ್ಳಿ ...ೋರೇಗೌಡ, ಉಪಾಧ್ಯಕ್ಷರಾಗಿ ಸುಜಾತಮಣಿ ...ಯ್ಕೆಯಾಗಿದ್ದಾರೆ. ಅಂತೂಇಂತೂ ನಗರಸಭೆ ಅಧ್ಯಕ್ಷನಾಗಿ ...ಿಕಾರ ಹಿಡಿಯುವ ಹೊಸಹಳ್ಳಿ ಬೋರೇಗೌಡರ ಕನಸು ...ಗೂ ನನಸಾಗಿದೆ. ಮೂರನೇ ಬಾರಿ ನಗರಸಭೆಗೆ ಆರಿಸಿ ...ದಿದ್ದರೂ ಮೊದಲ ಅವಧಿಯಲ್ಲೇ ಅಧ್ಯಕ್ಷ ಸ್ಥಾನ ...ಸಹಳ್ಳಿ ಬೋರೇಗೌಡನ ಕೈತಪ್ಪಿ ಪಕ್ಷೇತರ ಸದಸ್ಯ ...ದ್ದರಾಜು ಪಾಲಾಗಿತ್ತು. ಎರಡನೇ ಅವಧಿಯಲ್ಲೂ ಸಚಿವ ...ಬಿ ಉಡಾಫೆಗೆ ಹೊಸಹಳ್ಳಿ ಬೋರೇಗೌಡರಿಗೆ ಅಧಿಕಾರ ...ದೆ ಲೋಕೇಶ್ ಅಧ್ಯಕ್ಷರಾಗಿ ಆಯ್ಕೆಯಾಗಿದ್ದರು. ಆದರೆ ... ಬಾರಿ ಹೊಸಹಳ್ಳಿ ಬೋರೇಗೌಡ ಅರ್ಧಕೋಟಿಗೂ ...ಧಿಕ ದುಡ್ಡು ಸುರಿದು ನಗರಸಭೆ ಅಧ್ಯಕ್ಷ ಗಾದಿಗೇರಿದ್ದಾರೆ.

ಮಾ.16ರ ಹೈಡ್ರಾಮಾ

ಮಂಡ್ಯ ನಗರಸಭೆಯಲ್ಲಿ ಕಾಂಗ್ರೆಸ್ 15, ಜಾ.ದಳ ... ಪಕ್ಷೇತರ 10 ಹಾಗೂ ಬಿಜೆಪಿ ಒಬ್ಬ ಸದಸ್ಯ ಸೇರಿ ...5 ಸದಸ್ಯ ಬಲವಿದ್ದು ಸಚಿವ ಅಂಬರೀಶ್ ಹಾಗೂ ...ಸದ ಸಿ.ಎಸ್.ಪುಟ್ಟರಾಜು ಮತದಾನದ ಹಕ್ಕು ...ೊಂದಿದ್ದರು. ನಗರಸಭೆಯಲ್ಲಿ ಅಧಿಕಾರ ಹಿಡಿಯಲು ...ರಡು ಪಕ್ಷಗಳು 19 ಮ್ಯಾಜಿಕ್ ಸಂಖ್ಯೆಯನ್ನು ...ಟಬೇಕಿತ್ತು, ಅದರಲ್ಲಿ ಕಾಂಗ್ರೆಸ್ ಪಕ್ಷ ಯಶಸ್ವಿಯಾಗಿದ್ದು ...ಧ್ಯಕ್ಷ-ಉಪಾಧ್ಯಕ್ಷ ಅಧಿಕಾರದ ಚುಕ್ಕಾಣಿ ಹಿಡಿದಿದೆ. ...ರುಡು ಕಾಂಚಾಣದ ಹಿನ್ನೆಲೆಯಲ್ಲಿ ಅಧ್ಯಕ್ಷ-ಉಪಾಧ್ಯಕ್ಷ ...ನಾವಣೆ ಸಾಕಷ್ಟು ಕುತೂಹಲ ಮೂಡಿಸಿತ್ತು. ...ಗರಸಭೆಯಲ್ಲಿ ಕಾಂಗ್ರೆಸ್ ಪಕ್ಷದ 16 ಮಂದಿ ಸದಸ್ಯರಿದ್ದರೂ ...ಮ್ಯಾಜಿಕ್ ಸಂಖ್ಯೆ 19 ತಲುಪುವುದು ಅಷ್ಟು ...ಲಭವಿರಲಿಲ್ಲ, ಏಕೆಂದರೆ ಜೆಡಿಎಸ್ ಪಕ್ಷ ಸಂಸದ ...ಎಸ್.ಪುಟ್ಟರಾಜು ನೇತೃತ್ವದಲ್ಲಿ 6 ಮಂದಿ ಪಕ್ಷೇತರರು ...ಾಗೂ ಮೂವರು ಕಾಂಗ್ರೆಸ್ ಸದಸ್ಯರ ಬೆಂಬಲ ಪಡೆದಿತ್ತು. ...ಾರದ ಹಿಂದೆಯೇ ಜೆಡಿಎಸ್‌ನ 9 ಮಂದಿ ಸದಸ್ಯರು, ... ಮಂದಿ ಪಕ್ಷೇತರ ಹಾಗೂ 3 ಮಂದಿ ಕಾಂಗ್ರೆಸ್ ...ದಸ್ಯರು ದೆಹಲಿ ಪ್ರವಾಸಕ್ಕೆ ಹೋಗಿದ್ದರು. ಇದರಿಂದಾಗಿ ... ಬಾರಿಯೂ ನಗರಸಭೆ ಅಧ್ಯಕ್ಷರಾಗಿ ಬೋರೇಗೌಡ ...ಯ್ಕೆಯಾಗುವುದು ಕಷ್ಟ ಎಂಬ ವಾತಾವರಣ ಚುನಾವಣೆ ...ರಂಭವಾದ ನಂತರವೂ ಇತ್ತು. ಆದರೆ ಕಾಂಗ್ರೆಸ್ ಪಕ್ಷದ ...ಪ್ ಸ್ವೀಕರಿಸದೆ ಜೆಡಿಎಸ್ ಜೊತೆ ಗುರುತಿಸಿಕೊಂಡಿದ್ದ ...ನೇ ವಾರ್ಡ್ ಸದಸ್ಯ ಅನಂತಪದ್ಮನಾಭ ಹಾಗೂ 4ನೇ ...ವಾರ್ಡ್‌ನ ಮಧುಸೂದನ್ ಅಂತಿಮ ಗಳಿಗೆಯಲ್ಲಿ ...ಜೆಡಿಎಸ್‌ಗೆ ಕೈಕೊಟ್ಟು ಬೋರೇಗೌಡರ ಪರ ಮತ ...ಚಲಾಯಿಸಿದ್ದರಿಂದ ಜೆಡಿಎಸ್ ಪಕ್ಷ ಅಧಿಕಾರ ಹಿಡಿಯುವ ...ನಸು ನುಚ್ಚು ನೂರಾಯಿತು. ಅಧ್ಯಕ್ಷರಾಗಲು ತುದಿಗಾಲಲ್ಲಿ ...ಂತಿದ್ದ ಜೆಡಿಎಸ್‌ನ ಸುನೀತಾ ರವೀಂದ್ರ ಖರ್ಚು ಮಾಡಿದ್ದ ...ರ್ಧ ಕೋಟಿಗೂ ಹಣ ನೀರಿನಲ್ಲಿ ಮಾಡಿದ ಹೋಮದಂತೆ ...ೊಚ್ಚಿ ಹೋಯಿತು. ಕೊನೆಯ ಹಂತದವರೆಗೂ ಜೆಡಿಎಸ್ ಅಭ್ಯರ್ಥಿಗೆ ಮತ ಹಾಕುತ್ತೇನೆಂದು ಮಾತು ಕೊಟ್ಟು ...ಪ್ರವಾಸಮುಗಿಸಿ ಸಂಸದ ಸಿ.ಎಸ್.ಪುಟ್ಟರಾಜು ಜೊತೆಗೆ ...ನಗರಸಭೆಗೆ ಬಂದ ಸದಸ್ಯರಾದ ಅನಂತಪದ್ಮನಾಭ ಹಾಗೂ ...ಮಧುಸೂದನ್ ಮೀರ್ ಸಾಧಕರಂತೆ ವರ್ತಿಸಿ ...ರ್ಜರಿಯಾಗಿ ಕೈಕೊಟ್ಟುಬಿಟ್ಟರು. ನಗರಸಭೆ ಅಧಿಕಾರ ...ಜೆಡಿಎಸ್‌ಗೆ ಗ್ಯಾರಂಟಿ ಎಂದುಕೊಂಡಿದ್ದ ಜೆಡಿಎಸ್ ...ಕಾರ್ಯಕರ್ತರು ಹಾಗೂ ಮುಖಂಡರಿಗೆ ಶಾಕ್‌ಕೊಟ್ಟ ...ಇವರಿಬ್ಬರು ತಾವು ನಿಯತ್ತಿಲ್ಲದ, ಹಣಕ್ಕಾಗಿ ಬಾಯಿ ಬಿಡುವ ...ಸದಸ್ಯರೆಂಬುದನ್ನು ಸಾಬೀತು ಮಾಡಿದರು.


ಒಂದು ಕೋಟಿಗೂ ಹೆಚ್ಚು ಹಣ

ನಗರಸಭೆ ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಯಲ್ಲಿ ಈ ...ಾರಿ ಕೈ ಬದಲಾದ ಹಣ ಒಂದು ಕೋಟಿಗೂ ಹೆಚ್ಚು. ...ಾಂಗ್ರೆಸ್‌ನ ಬೋರೇಗೌಡ 60 ಲಕ್ಷ, ಜೆಡಿಎಸ್‌ನ ಸುನೀತಾ ರವೀಂದ್ರ 60 ಲಕ್ಷ ಸೇರಿದಂತೆ ಒಂದು ಕೋಟಿಗೂ ಹೆಚ್ಚು ಹಣ ಸುರಿದಿದ್ದಾರೆ. ಅಧ್ಯಕ್ಷನಾದ ಬೋರೇಗೌಡ ಕಳೆದ ಬಾರಿ ಅಧ್ಯಕ್ಷನಾಗಬೇಕೆಂದು 40 ಲಕ್ಷ ರೂ.ವನ್ನು ಅಂಬಿ ಶಿಷ್ಯ ಅಮರಾವತಿ ಚಂದ್ರನಿಗೆ ಕೊಟ್ಟಿದ್ದರು. ಆದರೆ ಲೋಕೇಶ್ ಅಧ್ಯಕ್ಷನಾಗಿದ್ದರಿಂದ ಅಮರಾವತಿ ಚಂದ್ರ ಸಿದ್ದರಾಜು ಕೆಳಗಿಳಿಸಲು ಸಾಕಷ್ಟು ಖರ್ಚಾಯಿತು ಎಂದೇಳಿ 15 ಲಕ್ಷಕ್ಕೆ ನಾಮ ಹಾಕಿ 25 ಲಕ್ಷ ರೂ. ವಾಪಸ್ ಮಾಡಿದ್ದ. ಈ ಬಾರಿಯೂ 60 ಲಕ್ಷವನ್ನು ಬೋರೇಗೌಡ ಅಧ್ಯಕ್ಷನಾಗಲು ಸುರಿದಿದ್ದಾನೆ. ಕಾಂಗ್ರೆಸ್ ಪಕ್ಷದ 12 ಮಂದಿ ಸದಸ್ಯರಿಗೆ ತಲಾ 3 ಲಕ್ಷ, ಐವರು ಪಕ್ಷೇತರ ಸದಸ್ಯರಿಗೆ 5 ಲಕ್ಷ ಹಾಗೂ ಕೊನೆಗಳಿಗೆಯಲ್ಲಿ ಬಂದ ಕಾಂಗ್ರೆಸ್ ಸದಸ್ಯರಿಬ್ಬರಿಗೆ 10 ಲಕ್ಷದವರೆಗೆ ಹಣ ಕೊಟ್ಟು ಖರೀದಿಸಿಯೇ ಬೋರೇಗೌಡ ಅಧ್ಯಕ್ಷನಾಗಿದ್ದಾನೆ. ಕೊನೆಗಳಿಗೆಯವರೆಗೂ ಜೆಡಿಎಸ್ ಜೊತೆ ಗುರುತಿಸಿಕೊಂಡಿದ್ದ ಕಾಂಗ್ರೆಸ್ ಸದಸ್ಯರಾದ ಮಧುಸೂದನ್ ಹಾಗೂ ಅನಂತಪದ್ಮನಾಭ ಜೆಡಿಎಸ್‌ನವರಿಂದ ತಲಾ 6 ಲಕ್ಷರೂ.ಗಳನ್ನು ಪಡೆದು ಅವರ ಜೊತೆಯೇ ಇದ್ದರು. ಪಕ್ಷೇತರ ಸದಸ್ಯರಿಗೆ 4ರಿಂದ 5 ಲಕ್ಷ ಹಾಗೂ ಜೆಡಿಎಸ್ ಸದಸ್ಯರಿಗೆ 2ರಿಂದ 3 ಲಕ್ಷ ರೂ. ಫಿಕ್ಸ್ ಮಾಡಲಾಗಿತ್ತು. ಒಟ್ಟಾರೆ ಜೆಡಿಎಸ್‌ನ ಸುನೀತಾ ರವೀಂದ್ರರ 60 ಲಕ್ಷಕ್ಕೂ ಹೆಚ್ಚು ಹಣ ಧನದಾಹಿ ಸದಸ್ಯರ ಜೇಬು ತುಂಬಿದೆ.



ಸುನೀತಾ

ಕಾಂಗ್ರೆಸ್ ಸದಸ್ಯರಾದ ಅನಂತಪದ್ಮನಾಭ ಮತ್ತು ಮಧುಸೂದನ್ ನಮ್ಮನ್ನು ನಂಬಿಸಿ ಮೋಸ ಮಾಡಿದ್ರು ಎಂದು ಜೆಡಿಎಸ್‌ನ ಸುನೀತಾ ಅಳುತ್ತಾ ಹೇಳಿದ್ದು, ದುಡ್ಡಿಗಾಗಿ ಬಾಯಿಬಿಡುವ ನಗರಸಭಾ ಸದಸ್ಯರ ಬಗ್ಗೆ ಎಚ್ಚರಿಕೆಯಿಂದ ಇರಬೇಕು ಎಂಬುದು ಮಂಡ್ಯ ನಾಗರಿಕರಿಗೆ ಸ್ಪಷ್ಟವಾಗಿಯೇ ತಿಳಿಯಿತು. ಅಧಿಕಾರದ ಆಸೆಗಾಗಿ ಇವರಿಬ್ಬರನ್ನು ನಂಬಿದ ಜೆಡಿಎಸ್ ನಾಯಕರ ಮುಖ ಇಂಗು ತಿಂದ ಮಂಗನಂತಾಗಿದೆ.



ರವಿಕುಮಾರ್

'ಕೊಟ್ಟೋನು ಕೋಡಂಗಿ ಈಸ್ಕೊಂಡೋನು ಈರಭದ್ರ' ಎಂಬ ಗಾದೆಯಂತಾಗಿದೆ ಸುನೀತಾ ರವೀಂದ್ರರ ಪರಿಸ್ಥಿತಿ.

ಫೆ. 12ರ ಬೆಳಿಗ್ಗೆ 9 ಗಂಟೆಗೆ ನಾಮಪತ್ರ ಸಲ್ಲಿಕೆ ಪ್ರಕ್ರಿಯೆ ಆರಂಭವಾಗುತ್ತಿದ್ದಂತೆ ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಬೋರೇಗೌಡ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ್ದರು. ಜೆಡಿಎಸ್‌ನಿಂದ ಸುನೀತಾ ರವೀಂದ್ರ ನಾಮಪತ್ರ ಸಲ್ಲಿಸಿದ್ದರು. ಉಪಾಧ್ಯಕ್ಷ ಸ್ಥಾನಕ್ಕೆ ಕಾಂಗ್ರೆಸ್‌ನಿಂದ ಸುಜಾತಮಣಿ ನಿಂತಿದ್ದರೆ, ಜೆಡಿಎಸ್ ಪಕ್ಷ ಪಕ್ಷೇತರ ಸದಸ್ಯ ಅರುಣ್‌ಕುಮಾರ್‌ನನ್ನು ಕಣಕ್ಕಿಳಿಸಿತ್ತು. ನಾಮಪತ್ರ ವಾಪಸ್ ಪಡೆಯಲು 12 ಗಂಟೆವರೆಗೂ ಸಮಯ ನೀಡಲಾಗಿತ್ತು. ಕಾಂಗ್ರೆಸ್ ಮತ್ತು ಜೆಡಿಎಸ್ ಎರಡು ಕಡೆಯಿಂದಲೂ ಯಾರೂ ನಾಮಪತ್ರ ವಾಪಸ್ ಪಡೆಯದ ಕಾರಣ ಚುನಾವಣೆ ನಡೆಸಲು ನಿರ್ಧರಿಸಲಾಯಿತು. ಮೊದಲು ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್‌ನ ಬೋರೇಗೌಡನ ಪರವಾಗಿ 20 ಮತಗಳು, ಜೆಡಿಎಸ್‌ನ ಸುನೀತಾ ರವೀಂದ್ರರ ಪರವಾಗಿ 18 ಮತಗಳು ಬಿದ್ದವು. ಜೆಡಿಎಸ್ ನಂಬಿಕೊಂಡಿದ್ದ ಮೀರ್‌ಸಾದಿಕರಿಂದಾಗಿ ಬೋರೇಗೌಡರು ಅಧ್ಯಕ್ಷರಾಗಿ ಆಯ್ಕೆಯಾಗುವಂತಾಯಿತು.

ಮಧುಸೂದನ್ ಹಾಗೂ ಅನಂತ ಪದ್ಮನಾಭ ಜೆಡಿಎಸ್ ನಾಯಕರ ಜೊತೆಗಿದ್ದರೂ ಅವರನ್ನು ಆಪರೇಟ್ ಮಾಡಿ ಮತ್ತೆ ಕಾಂಗ್ರೆಸ್ ಪಾಳಯಕ್ಕೆ ಕರೆತರುವಲ್ಲಿ ಕಾಂಗ್ರೆಸ್ ಮುಖಂಡ ಗಣಿಗ ರವಿಕುಮಾರ್ ಪಾತ್ರ ಬಹಳ ಮುಖ್ಯ. ಈ ಬಾರಿಯೂ ಕಾಂಗ್ರೆಸ್ ಅಭ್ಯರ್ಥಿ ಸೋತು ಸಚಿವ ಅಂಬಿಗೆ ಮುಖಭಂಗ ಮಾಡುತ್ತೇನೆ ಎಂದು ನಿಂತಿದ್ದ ಹಲವರಿಗೆ ಗಣಿಗ ರವಿಕುಮಾರ್ ತಮ್ಮ ತಾಕತ್ತು ಏನು ಎಂಬುದನ್ನು ತೋರಿಸಿಕೊಟ್ಟಿದ್ದಾರೆ. ಹಾಗೆಯೇ ಸಚಿವ ಅಂಬರೀಶ್ ಮಾನವನ್ನು ಉಳಿಸಿದ್ದಾರೆ.

ಇನ್ನು ಉಪಾಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಕಾಂಗ್ರೆಸ್‌ನ ಸುಜಾತಾಮಣಿ ಪರವಾಗಿ 21 ಮತಗಳು ಹಾಗೂ ಜೆಡಿಎಸ್ ಬೆಂಬಲಿತ ಪಕ್ಷೇತರ ಸದಸ್ಯ ಅರುಣ್‌ಕುಮಾರ್ ಅವರಿಗೆ ಕೇವಲ 14 ಮತಗಳು ಬಿದ್ದವು. ಪಕ್ಷೇತರ ಸದಸ್ಯ ಕೆ.ಸಿ.ರವೀಂದ್ರ ಸುಜಾತಮಣಿ ಹಾಗೂ ಅರುಣ್‌ಕುಮಾರ್ ಇಬ್ಬರ ಪರವೂ ಕೈಎತ್ತಿದ್ದರಿಂದ ಅವರ ಮತ ತಿರಸ್ಕೃತ ವಾಯಿತು. ಜೆಡಿಎಸ್‌ನ ಮಹೇಶ್‌ಕೃಷ್ಣ ಕೂಡ ಅರುಣ್ ಕುಮಾರ್‌ಗೆ ಮತ ಹಾಕದೆ ಕಾಂಗ್ರೆಸ್‌ನ ಸುಜಾತಮಣಿ ಪರ ನಿಂತಿದ್ದರಿಂದ 21 ಮತ ಪಡೆಯುವಂತಾಗಿ ಮಾಜಿ ಅಧ್ಯಕ್ಷ ಎಂ.ಪಿ.ಅರುಣ್‌ಕುಮಾರ್ ಹೀನಾಯವಾಗಿ ಸೋಲುವಂತಾಯಿತು. ಜೆಡಿಎಸ್‌ನಿಂದ ಉಪಾಧ್ಯಕ್ಷ ಸ್ಥಾನಕ್ಕೆ ಪಕ್ಷೇತರ ಸದಸ್ಯ ಕೆ.ಸಿ.ರವೀಂದ್ರನನ್ನು ಕಣಕ್ಕಿಳಿಸಲು ತೀರ್ಮಾನಿಸಿತ್ತು. ಆದರೆ ನಿನ್ನೆ ರಾತ್ರಿ 1ರ ಸುಮಾರಿಗೆ ಅರುಣ್‌ಕುಮಾರ್ ಕ್ಯಾತೆ ತೆಗೆದು ನನ್ನನ್ನು ಉಪಾಧ್ಯಕ್ಷ ಮಾಡದಿದ್ದರೆ ಕಾಂಗ್ರೆಸ್ ಕಡೆ ಹೋಗಬೇಕಾಗುತ್ತದೆ ಎಂದು ಹೇಳಿದ್ದರಿಂದ ಕೊನೆಗೆ ಸಂಸದ ಸಿ.ಎಸ್.ಪುಟ್ಟರಾಜು ಕೆ.ಸಿ.ರವೀಂದ್ರನ ಮನವೊಲಿಸಿ ಅರುಣ್‌ಕುಮಾರ್ ಉಪಾಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿದರು. ಆದರೆ ಅಧ್ಯಕ್ಷ ಚುನಾವಣೆಯಲ್ಲಿ ಜೆಡಿಎಸ್‌ನ ಸುನೀತಾ ರವೀಂದ್ರ ಸೋತಿದ್ದರಿಂದ ಸದಸ್ಯರಾದ ಜೆಡಿಎಸ್‌ನ ಮಹೇಶ್‌ಕೃಷ್ಣ ಅರುಣ್‌ಕುಮಾರ್‌ಗೆ ಕೈ ಕೊಟ್ಟು ಕಾಂಗ್ರೆಸ್‌ನ ಸುಜಾತಮಣಿ ಪರ ಕೈ ಎತ್ತಿದರು.



ಸುಜಾತ

ಸದಸ್ಯರಿಗೆ ವಿಪ್


ಚುನಾವಣೆಯ ಹಿನ್ನೆಲೆಯಲ್ಲಿ ಕಾಂಗ್ರೆಸ್ ಹಾಗೂ ಜೆಡಿಎಸ್ ತನ್ನ ಸದಸ್ಯರಿಗೆ ವಿಪ್ ನೀಡಿತ್ತು. ಜೆಡಿಎಸ್ ಜೊತೆ ಗುರುತಿಸಿಕೊಂಡು ದೆಹಲಿ ಪ್ರವಾಸಕ್ಕೆ ತೆರಳಿದ್ದ ಕಾಂಗ್ರೆಸ್ ಸದಸ್ಯರಾದ ಅನಂತಪದ್ಮನಾಭ, ಮಧುಸೂದನ್, ಸುಕುಮಾರ್ ಹಾಗೂ ಕಾಂಗ್ರೆಸ್ ಸಹ ಸದಸ್ಯತ್ವ ಪಡೆದಿದ್ದ ಹಿನ್ನೆಲೆಯಲ್ಲಿ ಪಕ್ಷೇತರ ಸದಸ್ಯರಾದ ಅರುಣ್‌ಕುಮಾರ್ ಹಾಗೂ ಬಿ.ಸಿದ್ದರಾಜುರವರಿಗೆ ವಿಪ್ ಜಾರಿ ಮಾಡಲು ಕಾಂಗ್ರೆಸ್ ಮುಖಂಡ ಬೇಲೂರು ಸೋಮಶೇಖರ್ ಯತ್ನಿಸಿದರೂ ಅವರು ಸಿಕ್ಕಿರಲಿಲ್ಲ. ಹಾಗಾಗಿ ಅವರ ಮನೆ ಬಾಗಿಲಿಗೆ ಹೋಗಿ ವಿಪ್ ಅನ್ನು ನೀಡಿ ಬಾಗಿಲಿಗೆ ಅಂಟಿಸಿ ಬಂದಿದ್ದರು. ಚುನಾವಣೆಯ ಮತದಾನದ ದಿನದಂದು ಕೂಡ ಬೇಲೂರು ಸೋಮಶೇಖರ್ ನಗರಸಭೆ ಆವರಣದಲ್ಲಿ ವಿಪ್ ನೀಡಲು ಹೋದಾಗ ಸದಸ್ಯ ಬಿ.ಸಿದ್ದರಾಜು ವಿಪ್ ಪ್ರತಿಯನ್ನು ಬಿಸಾಕಿದ್ದಲ್ಲದೆ, ಅವಾಚ್ಯ ಶಬ್ದಗಳಿಂದ ಬೇಲೂರು ಸೋಮಶೇಖರನನ್ನು ಬೈದ ಪ್ರಕರಣವು ನಡೆಯಿತು. ಮೂರು ಬಿಟ್ಟವರು ಊರಿಗೆ ದೊಡ್ಡೋರು ಎಂಬ ಗಾದೆ ಮಾತಿನಂತೆ ದುಡ್ಡಿಗಾಗಿ ಪಕ್ಷ-ತತ್ವ-ಸಿದ್ಧಾಂತವನ್ನು ಸದಸ್ಯರು ಮರೆತದ್ದು ನಾಚಿಕೆಗೇಡಿನ ಸಂಗತಿ.

ಒಟ್ಟಿನಲ್ಲಿ ಮಂಡ್ಯ ನಗರಸಭೆ ಮತ್ತೊಮ್ಮೆ ಕುರುಡು ಕಾಂಚಾಣದ ಅಬ್ಬರಕ್ಕೆ ಸಿಲುಕಿ ನಲುಗಿಹೋಗಿದೆ. ಬರೋಬ್ಬರಿ 1 ಕೋಟಿಗೂ ಹೆಚ್ಚು ಹಣ ಧನದಾಹಿ ಸದಸ್ಯರ ಜೇಬು ಸೇರಿದೆ. ಇಷ್ಟು ದೊಡ್ಡ ಮೊತ್ತವನ್ನು ಖರ್ಚು ಮಾಡಿ ಅಧ್ಯಕ್ಷ, ಉಪಾಧ್ಯಕ್ಷರಾದವರಿಂದ ನಗರದ ಅಭಿವೃದ್ಧಿಯಾಗುತ್ತದೆ ಎನ್ನುವುದು ಶುದ್ಧ ಸುಳ್ಳು.

■ ವರದಿಗಾರ

ಧನದಾಹಿ ಸದಸ್ಯರ ಜೇಬು ಭರ್ತಿ

ದುಡ್ಡಿನ ಮುಂದೆ ಪಕ್ಷ, ತತ್ವ, ಸಿದ್ಧಾಂತ ಎಂಬುದಕ್ಕೆ ಬೆಲೆ ಇಲ್ಲ ಎನ್ನುವುದು ಬಹುತೇಕ ನಗರಸಭಾ ಸದಸ್ಯರ ಒಕ್ಕೊರಲಿನ ಮಾತು. ನಗರಸಭೆಯ ಮೊದಲ ಅವಧಿಗೆ ಅಧ್ಯಕ್ಷನಾಗಲು ಹಾಗೂ ಬಜೆಟ್ ಸಭೆಗೆ ಕೋರಂ ನೀಡಲೆಂದು ಬಿ.ಸಿದ್ದರಾಜು ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರಿಗೆ ಅವರವರ ಯೋಗ್ಯತೆಗೆ ತಕ್ಕಂತೆ ಹಣ ನೀಡಿ ತಮ್ಮ ಪರ ನಿಲ್ಲುವಂತೆ ಮಾಡಿದ್ದ. ಸಿದ್ದರಾಜುನನ್ನು ಕೆಳಗಿಳಿಸಲು ಅಮರಾವತಿ ಚಂದ್ರಶೇಖರ್ ಪ್ರತಿ ಸದಸ್ಯರಿಗೂ ಒಂದರಿಂದ ಎರಡು ಲಕ್ಷ ಹಣ ಖರ್ಚು ಮಾಡಿದ್ದ. ನಂತರ ಅಧ್ಯಕ್ಷನಾದ ಲೋಕೇಶ್ ಕಾಂಗ್ರೆಸ್ ಹಾಗೂ ಪಕ್ಷೇತರ ಸದಸ್ಯರಿಗೆ ಲಕ್ಷಗಟ್ಟಲೆ ಹಣ ನೀಡಿ 9 ತಿಂಗಳು ಅಧ್ಯಕ್ಷನಾಗಿದ್ದ.




ಮಧುಸೂದನ್

ಆದರೆ ನಗರಸಭೆಯ ಎರಡನೇ ಅವಧಿಯ ಅಧ್ಯಕ್ಷ-ಉಪಾಧ್ಯಕ್ಷ ಸ್ಥಾನಗಳೆರಡು ಸಾಮಾನ್ಯ ವರ್ಗಕ್ಕೆ ಮೀಸಲಾಗಿದ್ದರಿಂದ ಹಿಂದೆಂದೂ ಕಾಣದಷ್ಟು ಹಣದ ಅರ್ಭಟ ಈ ಬಾರಿ ನಡೆಯಿತು. ಕಾಂಗ್ರೆಸ್‌ನ ಹೊಸಹಳ್ಳಿ ಬೋರೇಗೌಡ 50 ಲಕ್ಷಕ್ಕೂ ಹೆಚ್ಚು ಹಣವನ್ನು ಖರ್ಚು ಮಾಡಿ ಅಧ್ಯಕ್ಷನಾದರೆ ಅಷ್ಟೇ ಹಣವನ್ನು ಚೆಲ್ಲಿಯೂ ಜೆಡಿಎಸ್‌ನ ಸುನೀತಾ ರವೀಂದ್ರ ಸೋತಿದ್ದಾರೆ.

ಕಾಂಗ್ರೆಸ್ ನೀಡುವ ವಿಪ್ ಉಲ್ಲಂಘಿಸಿ ನಿಮಗೆ ಮತ ಹಾಕುತ್ತೇನೆಂದು 4ನೇ ವಾರ್ಡ್‌ನ ಕಾಂಗ್ರೆಸ್ ಸದಸ್ಯ ಮಧುಸೂದನ್ ಜೆಡಿಎಸ್‌ನವರಿಂದ 6 ಲಕ್ಷ ರೂ. ಪಡೆದಿದ್ದ. ಆದರೆ ಜೆಡಿಎಸ್‌ನವರಿಗೆ ಕೊನೆಗಳಿಗೆಯಲ್ಲಿ ದ್ರೋಹ ಬಗೆದು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿದ್ದ. ಈತ ವಾರದ ಹಿಂದಷ್ಟೆ ಜೆಡಿಎಸ್ ಜೊತೆ ಗುರುತಿಸಿಕೊಂಡು ದೆಹಲಿ ಪ್ರವಾಸಕ್ಕೆ ತೆರಳಿದ್ದ. ಅದೇನಾಯಿತೋ ಏನೋ ಕೊಡುವುದರಲ್ಲಿ ವ್ಯತ್ಯಾಸವಾಯಿತೋ ಗೊತ್ತಿಲ್ಲ, ಪ್ರವಾಸ ಅರ್ಧಕ್ಕೆ ಮೊಟಕುಗೊಳಿಸಿ ಸಚಿವ ಅಂಬರೀಶ್ ಮನೆಗೆ ಬಂದು ಕಾಂಗ್ರೆಸ್ ಪಕ್ಷಕ್ಕೆ ದ್ರೋಹ ಮಾಡಲ್ಲ ಎಂದು ಮಾಧ್ಯಮದ ಮುಂದೆ ಪೋಸ್ ನೀಡಿದ್ದ. ಅದಾಗಿ ಎರಡನೇ ದಿನಕ್ಕೆ ಮತ್ತೆ ಜೆಡಿಎಸ್ ಪಾಳಯಕ್ಕೆ ಹೋಗಿ ಚುನಾವಣೆಯ ದಿನವು ಅವರ ಜೊತೆಯಲ್ಲೇ ಬಸ್‌ನಲ್ಲಿ ಬಂದ. ಆದರೆ ಕೊನೆಗಳಿಗೆಯಲ್ಲಿ ಜೆಡಿಎಸ್‌ಗೆ ದ್ರೋಹ ಬಗೆದು ಮಲ್ಲಪ್ಪ ಶೆಟ್ಟಿಯಂತೆ ವರ್ತಿಸಿದ್ದಾನೆ. ಈತನನ್ನು ನಂಬಿದ ತಪ್ಪಿಗೆ ಸುನೀತಾ ರವೀಂದ್ರರ 60 ಲಕ್ಷಕ್ಕೂ ಹೆಚ್ಚು ಹಣ ನೀರಿನಲ್ಲಿ ಹೋಮ ಮಾಡಿದಂತಾಗಿದೆ.

ಇನ್ನು ಮೂರನೇ ವಾರ್ಡ್‌ನಿಂದ ಗೆದ್ದಿರುವ ಅನಂತಪದ್ಮನಾಭ ರೌಡಿ ಎಲಿಮೆಂಟು. ರೌಡಿ ಜಡೇಜಾ ರವಿಯ ಶಿಷ್ಯನಾಗಿ ರೋಲ್‌ಕಾಲ್ ಮಾಡಿಕೊಂಡಿದ್ದ ಈತ ಮೀಸಲಾತಿಯ ಲಾಭ ಪಡೆದು ಗೆದ್ದು ಬಂದಿದ್ದಾನೆ. ಹಣಕ್ಕಾಗಿ ಸದಸ್ಯತ್ವವನ್ನು ಮಾರಿಕೊಳ್ಳುವ ಗಿರಾಕಿಯಾದ ಈತ ಈ ಬಾರಿ ಜೆಡಿಎಸ್‌ಗೆ 6 ಲಕ್ಷ ಹಣಕ್ಕೆ ತನ್ನ ಸದಸ್ಯತ್ವ ಮಾರಿಕೊಂಡಿದ್ದ. ಆದರೆ ಕೊನೆಗಳಿಗೆಯಲ್ಲಿ ಜೆಡಿಎಸ್‌ಗೆ ದ್ರೋಹ ಬಗೆದು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿ ಮೀರ್‌ಸಾದಿಕ್‌ನ ಪಾತ್ರ ನಿರ್ವಹಿಸಿದ್ದಾನೆ. ಹಾಗೆಯೇ 24ನೇ ವಾರ್ಡ್‌ನ ಕಾಂಗ್ರೆಸ್ ಸದಸ್ಯ ಸುಕುಮಾರ್ ಎಂಬಾತ ನಗರಸಭೆ ಸದಸ್ಯನಾಗಲು ಅರ್ಹತೆಯಿಲ್ಲದ ನಾಲಾಯಕ್ ಮನುಷ್ಯ. ತಮಿಳು ಕಾಲೋನಿಯ ಜನರನ್ನು ಎತ್ತಿಕಟ್ಟಿ ಸದಸ್ಯನಾದ ಈತ ಒಂದು ದಿನವೂ ವಾರ್ಡ್‌ನ ಸಮಸ್ಯೆ ಬಗ್ಗೆ ದನಿಯೆತ್ತಿಲ್ಲ. ತಮಿಳು ಕಾಲೋನಿಯ ಜನ ಕಳೆದ 8 ವರ್ಷಗಳಿಂದ ಬೀದಿಯಲ್ಲೇ ಬಿದ್ದಿದ್ದರೂ ಜನಪ್ರತಿನಿಧಿಯಾಗಿ ಯಾವುದೇ ಹೋರಾಟ ಮಾಡದ ಈತ ಜೆಡಿಎಸ್‌ನವರ ಜೊತೆ ಹೋಗಿ 6 ಲಕ್ಷ ಹಣ ಪಡೆದಿದ್ದ. ಕಾಂಗ್ರೆಸ್ ಸದಸ್ಯನಾದ ಈತ ಕಾಂಗ್ರೆಸ್‌ಗೆ ದ್ರೋಹ ಬಗೆದರು ಸುನಿತಾ ರವೀಂದ್ರರ ಪರ ಕೈಎತ್ತಿದ್ದಾನೆ. ಹಾಗೆಯೇ 6ನೇ ವಾರ್ಡ್‌ನ ರಾಜೇಶನಿಗೂ 6 ಲಕ್ಷ ರೂ. ನೀಡಲಾಗಿತ್ತು. ಪಕ್ಷೇತರ ಅರುಣ್‌ಕುಮಾರ್‌ಗೆ 5 ಲಕ್ಷ ಕ್ಯಾಷ್ ಕೊಟ್ಟಿದ್ದರೂ ಉಪಾಧ್ಯಕ್ಷ ಸ್ಥಾನಕ್ಕೆ ಪಟ್ಟು ಹಿಡಿದು ಕೊನೆಗೂ ಹೀನಾಯವಾಗಿ ಸೋತಿದ್ದಾನೆ. ನಗರಸಭೆ ಅಧ್ಯಕ್ಷನಾಗಿ ಲೂಟಿ ಹೊಡೆದದ್ದೇ ಈತನ ಸಾಧನೆ.




ಅನಂತಪದ್ಮನಾಭ

ಕಾಂಗ್ರೆಸ್‌ನ ಹೊಸಹಳ್ಳಿ ಬೋರೇಗೌಡ, ಪಕ್ಷೇತರ ಸದಸ್ಯರಾದ ನಯಾಜ್, ನಲ್ಲಮ್ಮ ನರಸಮ್ಮ, ಚಂದ್ರುಕುಮಾರ್, ಬಿಜೆಪಿಯ ಶಿವಪ್ರಕಾಶ್ ಬಬು ಇವರ ಪುಡಿಗೆ ಅವರ ಯೋಗ್ಯತೆಗೆ ತಕ್ಕಂತೆ ನಾಲ್ಕರಿಂದ ಐದು ಲಕ್ಷ ಕೊಟ್ಟು ಖರೀದಿಸಿ ಅಧ್ಯಕ್ಷನಾಗಿದ್ದಾನೆ. ಹಾಗೆಯೇ ಕಾಂಗ್ರೆಸ್ ಸದಸ್ಯರಿಗೂ ಅವರ ಯೋಗ್ಯತೆ ಅನುಸಾರ 2-3 ಲಕ್ಷ ರೂ. ಕೊಟ್ಟಿದ್ದಾನೆ.

ಮಂಡ್ಯ ನಗರಸಭೆಗೆ ಆರಿಸಿಬಂದಿರುವ ಬಹುತೇಕ ಸದಸ್ಯರು ಹಣಕ್ಕಾಗಿ ತಮ್ಮ ಸದಸ್ಯತ್ವವನ್ನೇ ಹರಾಜಿಗಿಡುವ ಚಾಳಿಯುಳ್ಳವರು. ಅಧ್ಯಕ್ಷ-ಉಪಾಧ್ಯಕ್ಷ ಚುನಾವಣೆಗೆ ಹಣ, ಸಾಮಾನ್ಯ ಸಭೆ ನಡೆಸಲು ಹಣ, ಕಾಮಗಾರಿಯಲ್ಲಿ ಪರ್ಸಂಟೇಜ್ ಹಣ ಪೀಕುವ ಇಂತಹವರಿಂದ ನಗರಸಭೆ ಉದ್ಧಾರವಾಗುತ್ತದೆ ಎನ್ನುವುದು ಭ್ರಮೆ. ಇಂತಹ ಮಾರಿಕೊಳ್ಳುವ ಸದಸ್ಯರಿಗೆ ಮಂಡ್ಯದ ಮತದಾರರು ಸರಿಯಾದ ಪಾಠವನ್ನು ಕಲಿಸಬೇಕಿದೆ.

ಭಟ್ಕಳಕ್ಕೆ ಬೆಂಕಿಯಿಕ್ಕಲು ಸಂಘಿ ಸಂಚು!


ಅನಂತಕುಮಾರ್ ಹೆಗ್ಡೆ

ಭಟ್ಕಳ ಬೂದಿ ಮುಚ್ಚಿದ ಕೆಂಡದಂತಿದೆ; ಧರ್ಮೋನ್ಮಾದದ ಒಂದೇ ಒಂದು ಅಸಹನೆ, ಅನುಮಾನ ಅಥವಾ ಅಧಿಕಪ್ರಸಂಗದ ಸಣ್ಣ ಕಿಡಿ ಸೋಕಿದರೂ ಸಾಕು, ಬೆಂಕಿ ಭುಗಿಲೇಳುವ ಭಯದಲ್ಲಿದೆ! ನವಾಯತ ಮುಸ್ಲಿಮರು ಹೆಚ್ಚಿರುವ ಭಟ್ಕಳವೆಂದರೆ, ಹೇಳಿಕೇಳಿ ಸಂಘಪರಿವಾರದ ಜಗಳಗಂಟರ 'ಕರ್ಮ'ಭೂಮಿ; ಹಿಂಸಾತ್ಮಕ ಹಿಂದೂತ್ವದ ಆ್ಯಂಟಿ ಹೀರೋ ಅನಂತಕುಮಾರ್ ಹೆಗಡೆಯ ಆಡಂಬೋಲ. 1990ರ ದಶಕದಲ್ಲಿ ವರ್ಷಾನುಗಟ್ಟಲೆ ಭಟ್ಕಳದಲ್ಲಿ ನಡೆದ ಸಂಘಿ ಪ್ರಣೀತ ಕುಖ್ಯಾತ ಕೋಮು ದಂಗೆಯಿದೆಯಲ್ಲ, ಅದೇ ಶಿರಸಿಯ ಹೈಗರ ತಿರಬೋಕಿ ಮಾಣಿ ಅನಂತೂಗೆ ರಾಜಕಾರಣಿಯ ಟಚಪ್ಪು ಮತ್ತು ಸಂಸದಗಿರಿಯ ಗೆಟಪ್ಪು ಕೊಟ್ಟಿದ್ದು!


ಸಂಸದನಾಗಿ ಒಂದು ಅವಧಿ ಕಳೆವಷ್ಟರಲ್ಲೇ ಅನಂತ್ಮಾಣಿಯ ಅಸಲಿ ಬಣ್ಣ ಬಯಲಾಗಿಹೋಯ್ತು. ರಾಜಕೀಯ ಪದವಿ-ಪ್ರಖ್ಯಾತಿಗಾಗಿ ಭಟ್ಕಳವನ್ನು ಅಗ್ನಿಕುಂಡ ಮಾಡಿದ್ದೇ ಈ ಮಾಣಿಯೆಂಬುದು ಜನರಿಗೆ ಸಂಶಯಾತೀತವಾಗಿ ಸಾಬೀತಾಗಿಬಿಟ್ಟಿತು! ಭಟ್ಕಳಿಗರು ಈ ಬೆಂಕಿ ನವಾಬನ ನಂಬದಂತಾದರು. ಆತ ಎಂಪಿಗಿರಿಗೆ ಸ್ಪರ್ಧಿಸಿದಾಗೆಲ್ಲ ಭಟ್ಕಳದಲ್ಲೇ ಹಿನ್ನಡೆ ಆಗತೊಡಗಿತು. ಜನರ ತಿರಸ್ಕಾರ-ತಾತ್ಸಾರದಿಂದ ಭಟ್ಕಳದಲ್ಲಿ ಅನಂತ್ಮಾಣಿಯ 'ಆಟ' ನಡೆಯದಾಯ್ತು. ಹಿಂದೂತ್ವವೂ ಸಾಕಾಯ್ತು; ಮಾಣಿ 'ಹಣತ್ವ'ದ ಹಿಂದೆ ಬಿದ್ದ. ಹಿಂದೂತ್ವದ ಮುಖವಾಡ ಹಾಕಿಕೊಂಡೇ ಹಣ ಮಾಡುವ ದಂಧೆ ಶುರು ಹಚ್ಚಿಕೊಂಡ. ಹಾಗಂತ ಸಾಬರ ಕಿಚಾಯಿಸಿ ಹುಂಬ ಹಿಂದೂಗಳ ಪ್ರಚೋದಿಸುವ ಹುಟ್ಟು ಚಾಳಿ ಮಾತ್ರ ಬಿಡಲೇ ಇಲ್ಲ.

ಈಗ ಮತ್ತೆ ಅನಂತ್ಮಾಣಿಯ ಕೆಟ್ಟ ಕಣ್ಣು ಭಟ್ಕಳದ ಮೇಲೆ ಬಿದ್ದಿದೆ. ಮೋದಿ ಮಾಮ ತನ್ನನ್ನು ಕೇಂದ್ರ ಮಂತ್ರಿ ಮಾಡೋದಿಲ್ಲ ಎಂಬುದು ಖಾತ್ರಿಯಾಗುತ್ತಲೇ ಮಾಣಿ ತಂತ್ರ ಬದಲಿಸಿದ್ದಾನೆ. ಜೀವನದ ಕೊನೆಯಾಸೆ ಈಡೇರಿಸಿಕೊಳ್ಳಲು ಅಡ್ಡಗಾಲು ಹಾಕುತ್ತಿರುವ ಜನಿವಾರ ಕುಲದ ಅನಂತಕುಮಾರ್ (ಶಾಸ್ತ್ರಿ), ಪ್ರಹ್ಲಾದ್ ಜೋಶಿಗಳ ಎದುರಾಳಿ ಯಡ್ಡಿಯ ಬಣದಲ್ಲಿ ಸಕ್ರಿಯನಾಗಿಬಿಟ್ಟಿದ್ದಾನೆ ಅನಂತ್ಮಾಣಿ. ಯಡ್ಡಿ ಹೊಸ ಶಿಷ್ಯನಿಗೆ ಶಿರಸಿಯಿಂದ ಶಾಸಕನಾಗು ಎಂದು ಉಪದೇಶ ಮಾಡಿದ್ದಾರೆ. ಆದರೆ ಸಂಘ ಪರಿವಾರದಲ್ಲಿ ತನಗಿಂತ ಬಲಶಾಲಿಯಾದ ಕಾಗೇರಿಯಿಂದ ಶಿರಸಿ ಕಸಿದುಕೊಳ್ಳುವ ಧೈರ್ಯ ಅನಂತ್ಮಾಣಿಗಿಲ್ಲ, ಹಾಗಾಗಿ ಆತ ಭಟ್ಕಳ ಅಥವಾ ಯಲ್ಲಾಪುರದಿಂದ ಎಮ್ಮೆಲ್ಲೆಯಾಗಿ ಯಡ್ಡಿಯ ಕನಸಿನ ಸರಕಾರದಲ್ಲಿ ಸಚಿವನಾಗುವ ಲೆಕ್ಕಾಚಾರದಲ್ಲಿದ್ದಾನೆ.


ಯಲ್ಲಾಪುರದ ಹಾಲಿ ಶಾಸಕ ಕಾಂಗ್ರೆಸ್‌ನ ಶಿವರಾಯ ಹೆಬ್ಬಾರ್ ಹಿಂದೆ ಬಿಜೆಪಿ ಜಿಲ್ಲಾಧ್ಯಕ್ಷನಾಗಿದ್ದಾಗ ಆತನ ಕೆನ್ನೆಗೆ ಬಾರಿಸಿ ಅನಂತ್ಮಾಣಿ ಓಡಿಸಿದ್ದ. ಈಗ ಅದೇ ಹೆಬ್ಬಾರ್ ಜತೆ 'ಅನೈತಿಕ' ಮೈತ್ರಿ ಮಾಡಿಕೊಂಡಿದ್ದಾನೆ. ಯಲ್ಲಾಪುರದ ಸ್ವಪಕ್ಷದ ಮಾಜಿ ಶಾಸಕ ವಿ.ಎಸ್. ಪಾಟೀಲ್ ಮತ್ತು ಕಡುವೈರಿ ಕಾಗೇರಿ ಹಣಿಯಲು ಮಾಣಿ ಹೆಬ್ಬಾರ್ ಸಖ್ಯ ಕುದುರಿಸಿಕೊಂಡಿದ್ದಾನೆ. ಹೀಗಾಗಿ ಅನಂತ್ಮಾಣಿಗೆ ಯಲ್ಲಾಪುರಕ್ಕಿಂತಲೂ ಭಟ್ಕಳವೇ ಶಾಸಕನಾಗುವ ತೆವಲಿಗೆ ತಕ್ಕ ಸ್ಥಳವಾಗಿ ಕಂಡಿದೆ. ಆದರೆ ಭಟ್ಕಳದಲ್ಲಿ ರಾಜಕಾರಣ ಮಾಡೋದು ಅಷ್ಟು ಸುಲಭವಲ್ಲ ಎಂಬುದು ಆತನಿಗೂ ಗೊತ್ತಿದೆ. ಸ್ಥಳೀಯ ಬಹುಸಂಖ್ಯಾತ ದೀವರ ಮುಂದಾಳಾಗಿದ್ದ ಮಾಜಿ ಸಚಿವ ಶಿವಾನಂದ ನಾಯ್ಕ್‌ನನ್ನು ಆಪೋಷನ ಪಡೆದಿರುವ ಮಾಣಿಗೆ ಆ ಸಮುದಾಯದ ಭಯವಿದೆ. ದೀವರನ್ನು ದಿಕ್ಕು ತಪ್ಪಿಸಿ ಭಟ್ಕಳಕ್ಕೆ ಲಗ್ಗೆ ಇಡಲು ಸಾಬರನ್ನು ಬೈದು, ಹೀಯಾಳಿಸೋದೊಂದೇ ಸುಲಭದ ದಾರಿಯೆಂಬ ತೀರ್ಮಾನಕ್ಕೆ ಮಾಣಿ ಬಂದಿದ್ದಾನೆ.

ಮುಸ್ಲಿಮರು ಅಥವಾ ಇಸ್ಲಾಮನ್ನು ಕಿಚಾಯಿಸಿದರೆ ಜಿಲ್ಲೆಯ ಎಲ್ಲಿಲ್ಲದಿದ್ದರೂ ಭಟ್ಕಳದಲ್ಲಿ ಒಂದಿಷ್ಟು ಟೆನ್ಶನ್ ಸೃಷ್ಟಿಯಾಗುತ್ತದೆಂಬುದು ಮಾಣಿಯ ಸ್ವಾನುಭವ. ಹಿಂದೆಲ್ಲಾ ಆತ ಭಟ್ಕಳದಲ್ಲಿ ಮತೀಯ ಮಸಲತ್ತು ಮಾಡಿದಾಗ ಸ್ಥಿತಿ-ಗತಿಯಿದು. ಇದೇ ತಂತ್ರ ಮೊನ್ನೆ ಮಾಣಿ ಮಾಡಿದ್ದಾನೆ. ಇಸ್ಲಾಮ್ ಜಗತ್ತಿನ ಶಾಂತಿಗೆ ಬಾಂಬ್ ಎಂದು ಬೊಬ್ಬಿರಿದಿದ್ದಾನೆ. ಆತನ ನಿರೀಕ್ಷೆಯಂತೆಯೇ ಭಟ್ಕಳದಲ್ಲಿ ಭಾನ್ಗಡಿಯಾಗಿದೆ. ಕಳೆದೈದು ತಿಂಗಳಿಂದ ತುಂಬ ನಾಜೂಕಾಗಿ ಭಟ್ಕಳದ ದೀವರ ಹುಂಬ ಹುಡುಗರನ್ನು ಸಾಬರ ಮೇಲೆ ಛೂಬಿಡುತ್ತ ಬಂದಿದ್ದ ಅನಂತ್ಮಾಣಿಯ ಹಿಡನ್ ಉದ್ದೇಶ ಈಡೇರಿದ್ದು ಮಾತ್ರ ಮೊನ್ನೆ ಆತ ಶಿರಸಿಯಲ್ಲೇ ಕುಂತು ಮುಸ್ಲಿಂರನ್ನು ಮೂದಲಿಸಿದಾಗ. ಭಟ್ಕಳದಲ್ಲಿ ಮೆರೆವ ಹಿಕಮತ್ತಿನಿಂದ ಅನಂತ್ಮಾಣಿ ಹೆಣೆದಿರುವ ತಂತ್ರಗಾರಿಕೆಯಿಂದ ಸ್ಥಳೀಯ ಸಂಘಪರಿವಾರ ಮೂರು ತುಂಡಾಗಿ ಹೋಗಿದೆ!

ಭಟ್ಕಳದ ಬಿಜೆಪಿ ಎಂದರೆ ಒಂದಿಷ್ಟು ದೀವರ ಉಂಡಾಡಿ ಪುಂಡಪೋರರ ಪಟಾಲಮ್ ಎಂಬಂತಾಗಿದೆ. ಅನಾರೋಗ್ಯ, ಬಿಜೆಪಿಯೊಳಗಿನ ಬ್ರಾಹ್ಮಣಶಾಹಿ ದೌರ್ಜನ್ಯದಿಂದ ಮಾಜಿ ಮಂತ್ರಿ ಶಿವಾನಂದ ನಾಯ್ಕ್ ಮೂಲೆಗುಂಪಾಗುತ್ತಿದ್ದಂತೆಯೇ ಅನಂತ್ಮಾಣಿಯೇ ಭಟ್ಕಳ ಬಿಜೆಪಿಗೆ ಬಾಸ್ ಆಗಿಹೋಗಿದ್ದಾನೆ. ಸ್ಥಳೀಯ ಚೆಡ್ಡಿ ಕಾವಿ ಪಾರ್ಟಿಯ ಪಾರುಪತ್ಯ ನಡೆಸಿರುವ ದೀವರ ಹುಡುಗರ ಒಡೆದಾಳುತ್ತಿರುವ ಮಾಣಿ ಮೂರೂ ತಂಡದ


ಈಶ್ವರ್ ನಾಯ್ಕ್


ಗೋವಿಂದ' ನಾಯ್ಕ್



ಸುನೀಲ್

ತುಂಡರಸನಿಗೂ ಎಂಎಲ್‌ಎ ಟಿಕೆಟ್ ಕೊಡಿಸುವ ಆಸೆ ತೋರಿಸಿ ಕೋಮುಕಲಹ ಎಬ್ಬಿಸಿ ಮುಂದಾಳಾಗುವ 'ಮಂತ್ರ' ಬೋಧಿಸಿದ್ದಾನೆ.

ಅನಂತ್ಮಾಣಿ ಹುಟ್ಟುಹಾಕಿರುವ ಮೂರು ದೀವರ ಧೀರರ ಬೆಟಾಲಿಯನ್‌ನಲ್ಲಿ ಒಂದಕ್ಕೆ ಹರಾಮಿ ಹಿಂದೂ ಮುಂದಾಳೆಂದೇ ಚಿರಪರಿಚಿತನಾಗಿರುವ ಗೋವಿಂದ ನಾಯ್ಕ್ ನೇತೃತ್ವವಾದರೆ, ಇನ್ನೊಂದಕ್ಕೆ ಈಚೆಗಷ್ಟೇ ಕಾಂಗ್ರೆಸ್ ಬಿಟ್ಟುಹೋಗಿರುವ ಸುನಿಲ್ ನಾಯ್ಕ್ ಎಂಬ ಗಡಿಬಿಡಿ ಗುಂಡ. ಮತ್ತೊಂದಕ್ಕೆ ಕಾಂಗ್ರೆಸ್‌ನಲ್ಲಿ ತನುವನಿಟ್ಟು ಬಿಜೆಪಿಯಲ್ಲಿ ಮನವಿಟ್ಟಿರುವ ಕಾಸ್ಕಾರ್ಡ್ ಬ್ಯಾಂಕ್‌ನ ಉಪಾಧ್ಯಕ್ಷ ಈಶ್ವರ ನಾಯ್ಕ್. ಒಬ್ಬೊಬ್ಬರ ಹಿಂದೂ ಒಂದೊಂದು ಅನಾಚಾರ-ಅವಾಂತರ-ಅಧಿಕಪ್ರಸಂಗದ ಇತಿಹಾಸ-ಭೂಗೋಳವಿದೆ. ಗೋವಿಂದನಾಯ್ಕ್ ಸಂಘ ಪರಿವಾರದ ಪಕ್ಕಾ ಪಂಟರ್. ನೈತಿಕತೆ-ದೇಶಭಕ್ತಿ ಬಗ್ಗೆ ಬಾಸ್ ಅನಂತ್ಮಾಣಿಯಷ್ಟೇ ರಸವತ್ತಾಗಿ ಮಾತಾಡಬಲ್ಲ ಗೋವಿಂದ ನಾಯ್ಕ್ ಯಾರದೋ ಹೆಂಡತಿಯನ್ನು ಲಾಡ್ಜೊಂದಕ್ಕೆ ಕರಕೊಂಡು ಹೋಗಿ ಸಿಕ್ಕಿಬಿದ್ದಿದ್ದ. ಈತ ಕಳೆದ ಬಾರಿ ಬಿಜೆಪಿಯ ಅಸೆಂಬ್ಲಿ ಕ್ಯಾಂಡಿಡೇಟಾಗಿ ಅಸಲನ್ನೇ ಕಳಕೊಂಡಾತ!

ಈಶ್ವರ ನಾಯ್ಕ್ ಪಕ್ಕಾ ಕಳಪೆ ಕಂಟ್ರಾಕ್ಟರ್. ಒಂದು ಕಾಲದಲ್ಲಿ ಒಪ್ಪೊತ್ತು ಗಂಜಿಗೆ ಪರದಾಡುತ್ತಿದ್ದ ಈತ ಈಗ ಕೋಟ್ಯಂತರ ರೂ. ಕ್ಲಾಸ್ ಒನ್ ಕಂಟ್ರಾಕ್ಟರ್. ಯಡ್ಡಿ ಪರ್ವದಲ್ಲಿ ಮಂತ್ರಿಯಾಗಿದ್ದ ಸ್ವ-ಜಾತಿ ಬಂಧು ಹಾಲಪ್ಪನ ಕೃಪಾಕಟಾಕ್ಷದಿಂದ ಈಶ್ವರ ನಾಯ್ಕ ಲೂಟಿ ಹೊಡೆದದ್ದಕ್ಕೆ ಲೆಕ್ಕವೇ ಇಲ್ಲ. ಮಾಜಿ ಶಾಸಕ ಜೆ.ಡಿ. ನಾಯ್ಕನ ಜತೆಗಿದ್ದೇ ಆತನಿಗೆ ಬತ್ತಿಯಿಟ್ಟ ಖ್ಯಾತಿ ಈತನದು. ಜಿಪಂ ಮಾಜಿ ಅಧ್ಯಕ್ಷನೂ-ದೀವರ ಧೀರನೂ ಆಗಿರುವ ದಾಮೋದರ ಗರ್ಡಿಕರ್‌ನ ಸೋದರಳಿಯನಾದ ಸುನಿಲ್ ನಾಯ್ಕ್‌ಗೆ ಅಪ್ಪ ಮಾಡಿಟ್ಟ ಹಣವೇ ಬಲ. ಭಟ್ಕಳ ಪಿಎಲ್‌ಡಿ ಬ್ಯಾಂಕ್ ಕುರ್ಚಿಗೇರಿರುವ ಸುನಿಲ್ ಈ ಪರಾಕ್ರಮದಿಂದ ಎಮ್ಮೆಲ್ಲೆಯಾಗುವ ತೆವಲಿಗೆ ಬಿದ್ದಿದ್ದಾನೆ. ಪಕ್ಷೇತರ ಶಾಸಕ ಮಂಕಾಳು ವೈದ್ಯ ಕಾಂಗ್ರೆಸ್‌ನಲ್ಲಿ ಲೀನವಾಗುತ್ತಲೇ ತನಗಿನ್ನು ಕಾಂಗ್ರೆಸ್ಸಲ್ಲಿ ಜಾಗವಿಲ್ಲವೆಂದು ಭಾವಿಸಿ ಬಿಜೆಪಿಗೆ ನೆಗೆದಿದ್ದಾನೆ ಸುನಿಲ್.

ಈ ಮೂವರ ಮೊಣಕೈಗೆ 'ಮಜ್ಜಿಗೆ ತಂಬುಳಿ' ಸವರಿ ನೆಕ್ಕುವ ಸ್ಪರ್ಧೆಗೊಡ್ಡಿದ್ದಾನೆ ಅನಂತ್ಮಾಣಿ. ಈ ದೀವರ ಪೋರರಿಗೆಲ್ಲ ಶಾಸಕ ಮಂಕಾಳು ವೈದ್ಯನೇ ವೈರಿ. ಭಟ್ಕಳ ಕ್ಷೇತ್ರ ಬಹುಸಂಖ್ಯಾತ ದೀವರ ಏಕಸಾಮ್ಯ ಮುರಿದ ಮೀನುಗಾರ ಸಂಕುಲದ ಮಂಕಾಳು ಕಂಡರೆ ಇಡೀ ಕ್ಷೇತ್ರದ ದೀವರಿಗೆ ಆಗದು. ದೀವರ ಲೀಡರ್‌ಗಳ ದಾದಾಗಿರಿಯಿಂದ ಬೇಸತ್ತಿದ್ದ ಇತರೆಲ್ಲ ಸಮುದಾಯವನ್ನು ಒಂದುಗೂಡಿಸಿ ಗೆದ್ದ ಮಂಕಾಳುನನ್ನು ಮುರಿಯಲು ಸಹಜವಾಗೇ ದೀವರ ದೊರೆಗಳು ಕತ್ತಿ ಮಸೆಯುತ್ತಿದ್ದಾರೆ. ಇದನ್ನು ಅರ್ಥಮಾಡಿಕೊಂಡಿರುವ ವಿಪ್ರೋತ್ತಮ ಅನಂತ್ಮಾಣಿ ದೀವರ ತರಾತುರಿಯ ಪುಂಡಪೋರರನ್ನು ಸಾಬರ ವಿರುದ್ಧ ಯುದ್ಧ ಸಾರುವಂತೆ ಪ್ರಚೋದಿಸುತ್ತಿದ್ದಾನೆ. ಶಾಸಕ ಮಂಕಾಳುನನ್ನು ಹಣಿಯಬೇಕೆಂದರೆ ಆತನ ಬೆನ್ನಿಗಿರುವ ಮುಸ್ಲಿಮರ ಸೊಂಟ ಮುರಿಯಬೇಕೆಂಬುದು ಮಾಣಿಯ ದುರ್ಬೋಧೆಯ ಸಾರ!


ಮಂಕಾಳು ವೈದ್ಯ

ಹಿಂದೂ-ಮುಸ್ಲಿಮರ ದಂಗೆಗಳಾದರೆ ಮಂಕಾಳು ವೈ... ಬೆಂಬಲಿಸುತ್ತಿರುವ ದೀವರೇತರ ಹಿಂದೂಗಳು ... ಮೇಲಿನ ಸಿಟ್ಟಿಂದ ಬಿಜೆಪಿಯೆಡೆ ವಾಲುತ್ತಾರೆ... ಮಾಣಿಯ ಸ್ಟ್ರೆಟಜಿ. ತನ್ಮೂಲಕ ಭಟ್ಕಳದ ಶಾಸಕನ... ತನ್ನ ಕನಸು ನನಸಾಗಿಸಿಕೊಳ್ಳುವ ಪ್ಲಾನು.

ಆದರೆ ಗೋವಿಂದ ನಾಯ್ಕ, ಈಶ್ವರ ನಾಯ್ಕ... ಸುನಿಲ್ ನಾಯ್ಕ್ ಮೂವರಿಗೂ ಬಿಜೆಪಿಯ ... ಟಿಕೆಟ್ ಕೊಡಿಸುವ ರಹಸ್ಯ ಭರವಸೆ ನೀಡಿದ್ದಾನೆ. ... ತಾವೇ ಕ್ಯಾಂಡಿಡೇಟೆಂದು ಈ ಮೂವರು ಶಾಸಕ ಮ... ವೈದ್ಯ ಮತ್ತು ಮುಸ್ಲಿಮರ ಮೇಲೆ ಕಾಲುಕೆರೆದು ... ಬೀಳುತ್ತಿದ್ದಾರೆ. ಈ ಮೂರು ಕಳ್ಳ ಕಾಸಿನ ಕುಬ... ತಂತಮ್ಮ ಪಟಾಲಮ್‌ಗೆ ಹಣ ಹರಿಸುತ್ತ ಭ... ಇಳಿಸುತ್ತಿದ್ದಾರೆ. ಕಳೆದ ನಾಲ್ಕೈದು ತಿಂಗಳಿಂದ ಈ ಮ... ಗ್ಯಾಂಗ್‌ಸ್ಟರ್‌ಗಳಿಗೆ ಸಾಬರ ಕಿಚಾಯಿಸಿ ಕೋಮು ಗ... ಸಂಚು ರೂಪಿಸೋದೇ ನಿತ್ಯಕರ್ಮದಂತಾಗಿದೆ; ವ್ಯಾಟ... ಮೂಲಕ ನವಾಯತ ಸಾಬರ ನಾಯಕರ ಅವ... ಮಾಡೋದು, ಅವರ ಧರ್ಮ-ಮಸೀದಿ ಬಗ್ಗೆ ... ವ್ಯಾಟ್ಸ್‌ಆ್ಯಪ್ ಬೈಗುಳ ಸುರಿಸೋದೇ ಕಸುಬಾಗಿದೆ. ... ಮಂಕಾಳು ವೈದ್ಯನ ಬೆನ್ನಿಗಿರುವ ಒಂದಿಷ್ಟು ಸ್ಥ... ದೀವರ ಹುಡುಗರಿಗೂ ವ್ಯಾಟ್ಸ್‌ಆ್ಯಪ್ ಮೂಲ... ಬಿಜೆಪಿ ಭಂಡರು ಕೆಣಕುತ್ತಲೇ ಇದ್ದರು. ಒಮ್ಮೆಯ... ಶಾಸಕ ಮಂಕಾಳು ವೈದ್ಯನ ಮೇಲೆ ಗೋವಿಂದ ನಾ... ಶಿಷ್ಯ ಖತಮ್ ಮಂಜು ಎಂಬ ಕುಡುಕ ಏರಿಹೋ... ಬ್ಲೂಫಿಲಂ ಕುಖ್ಯಾತಿಯ ಈ ಮಂಜು ನಾಯ್ಕ್ ... ಪ್ರಶಾಂತ ನಾಯಕನ ದಯೆಯಿಂದ ಬಚಾವಾಗಿದ್ದಾ...

ಈ ಹತಾಶ ಚೆಡ್ಡಿ ಚತುರರು ಅದೆಷ್ಟೇ ಹಾರಾಡಿ... ಭಟ್ಕಳದಲ್ಲಿ ಭಾನ್ಗಡಿ ಎಬ್ಬಿಸಲು ಸಾಧ್ಯವಾಗಲಿಲ್ಲ. ... ಅನಂತ್ಮಾಣಿ ಸಾಬರ ಬಗ್ಗೆ ಬಾಯಿಗೆ ಬಂದಂತೆ ಬೊಗ... ಭಟ್ಕಳದ ನವಾಯತರ ಸಮುದಾಯದಲ್ಲಿ ಒಂದಿಷ್ಟು ... ತಹತಹಗಳು ಎದ್ದಿದ್ದವು. ಸಾಬರು ಒಂಚೂರು ಕೆರಳಿ... ಭಟ್ಕಳಕ್ಕೆ ಬೆಂಕಿಯೇ ಬೀಳುತ್ತಿತ್ತು.

ಭಟ್ಕಳದ ನವಾಯತರಷ್ಟೇ ಅಲ್ಲ, ಇಡೀ ಜಿ... ಸಾಬರು ಸಂಯಮ ಮೀರಲಿಲ್ಲ, ಸಂಸದನಾಗಿ ಅನ... ಅಡದ ಮಾತಾಡಿದರೂ ಕೆರಳಲಿಲ್ಲ. ಜಿಲ್ಲಾ ಬಂದ್‌... ಕೊಟ್ಟು ಸಾಬರು ಸಾಂಕೇತಿಕವಾಗಿ ಶಾಂತಿಯುತ ಪ್ರತಿ... ತೋರಿಸಿದರು. ಭಟ್ಕಳ ಬಿಟ್ಟರೆ ಸಾಬರ ಬಂದ್ ... ಉಳಿದೆಡೆಯಲ್ಲಿ ಸ್ಪಂದನೆ ಸಿಗಲಿಲ್ಲ. ಭಟ್ಕಳದ ವಾ... ಕೇಂದ್ರಗಳಲ್ಲಿ ಹಿಡಿತ ಸಾಧಿಸಿರುವ ನವಾಯತರು ... ಅಂಗಡಿ-ವಾಣಿಜ್ಯ ಕೇಂದ್ರ-ಶೈಕ್ಷಣಿಕ ಸಂಸ್ಥೆ ಬ್ಯಾಂಕು... ಬಂದ್ ಮಾಡಿದ್ದರು. ಸಾಬರ ಒಡೆತನದ ವಾ... ಸಂಕೀರ್ಣದಲ್ಲಿ ಅಂಗಡಿ ಮಾಡಿಕೊಂಡಿದ್ದ ಹಿಂದೂ... ವ್ಯವಹಾರ ಸ್ಥಗಿತಗೊಳಿಸಿದ್ದರು.

ಹಿಂದೂ ಸಂಘಟನೆಯ ಸರದಾರರೂ ಅನಿವಾರ್ಯ... ಅಂಗಡಿ ಮುಚ್ಚಬೇಕಾಗಿ ಬಂದಿತ್ತು, ಭಾವಿ ಶಾಸ... ಹಗಲುಗನಸು ಕಾಣುತ್ತಿರುವ ಈಶ್ವರ ನಾಯ್ಕ್, ಗೋ... ನಾಯ್ಕ್ ಮತ್ತು ಸುನಿಲ್ ನಾಯ್ಕನ ಗ್ಯಾಂಗ್‌ಸ್ಟರ್... ಅನಿವಾರ್ಯವಾಗಿ ಅಂಗಡಿಯ ಶಟರ್ ಎಳೆದಿದ್ದರು. ... ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ವಿಠಲ ನಾಯ್ಕನ ಅ... ಬಂದಾಗಿದ್ದು ಮಾತ್ರ ಸಂಘಪರಿವಾರದ ಪುಂಡ... ಕಿಚಾಯಿಸಲು ಅಸ್ತ್ರವಾಗಿಬಿಟ್ಟಿತು. ಬಂದರು ರಸ್ತೆಯ... ಮುಸ್ಲಿಂ ಮಾಲಿಕತ್ವದ ಕಾಂಪ್ಲೆಕ್ಸ್‌ನಲ್ಲಿ ವಿಠಲ ನಾ... ಅಂಗಡಿಯಿತ್ತು. ಈ ಅಂಗಡಿಯ ಮುಚ್ಚಿದ ಬಾ... ಫೋಟೋ ತೆಗೆದ ಸಂಘಿ ಸೈತಾನರು ಅದನ್ನು ವ್ಯಾಟ್ಸ್‌ಆ... ಹಾಕಿ- 'ಸಾಬರಿಗೆ ಹುಟ್ಟಿದ ವಿಠಲ ನಾಯ್ಕನ ಬಂ... ಅಂಗಡಿ' ಎಂದೆಲ್ಲ ಕೊಳಕುಕೊಳಕಾಗಿ ಸಂದೇಶ ... ಹರಿಬಿಟ್ಟರು. ಹಿಂದೆ ಮುಸ್ಲಿಮರ ಪರಮೋಚ್ಚ ಧಾ... ಸಂಸ್ಥೆ 'ತಂಝೀಮ್' ಅಧ್ಯಕ್ಷ ಮುಜಾಮಿಲ್‌ನನ್ನು ...

ಸಿಪಿಐ ಶಕುನಿ!!


ಪ್ರಶಾಂತ್ ನಾಯ್ಕ್

ಕೋಮು ಸೂಕ್ಷ್ಮ ಭಟ್ಕಳದ ಪೊಲೀಸ್ ವ್ಯವಸ್ಥೆ ಸದಾ ಮೈಯೆಲ್ಲಾ ಕಣ್ಣಾಗಿರಬೇಕು. ಎಎಸ್ಪಿ, ಸಿಪಿಐ, ಎಸ್‌ಐನಂಥ ಖಾಕಿ ಕಲಿಗಳಂತೂ ಸದಾ ನಿಷ್ಠೂರ-ನಿಷ್ಪಕ್ಷಪಾತ ಆಗಿರಬೇಕಾದುದು ಭಟ್ಕಳದ ಶಾಂತಿ-ನೆಮ್ಮದಿ-ಸೌಹಾರ್ದಕ್ಕೆ ಅತೀ ಅನಿವಾರ್ಯ. ದುರಂತ ಎಂದರೆ, ಭಟ್ಕಳದ ಸಿಪಿಐ ಆಗಿರುವ ಪ್ರಶಾಂತ ನಾಯಕ್ ಒಂಥರಾ ಶಕುನಿ ಮಾಮ. ಸಂಘ ಪರಿವಾರದ ಹಿತೈಷಿಯಂತಿರುವ ನಾಯಕ್‌ಗೆ ಸಾಬರೆಂದರೆ ಅಷ್ಟಕ್ಕಷ್ಟೇ. ಸದಾ ಡಬ್ಬಲ್ ಗೇಮ್ ಆಡುವ ಈ ಸಿಪಿಐನ ಹೊಣೆಗೇಡಿತನದಿಂದಾಗಿ ಭಟ್ಕಳ ಕೋಮು ಕಲಹದ ಸಂಕಷ್ಟಕ್ಕೆ ಸಿಲುಕಿದೆ. ಈಗಾಗಿರುವ ವ್ಯಾಟ್ಸ್‌ಆ್ಯಪ್ ಭಾನ್ಗಡಿಗೆ ಸಿಪಿಐ ನಾಯಕನ ನಖರಾನೇ ಕಾರಣ!

ಸಂಘಿ ಸರದಾರರು ಫೋನಾಯಿಸಿದರೆ "ಹರಿ ಓಂ" ಎಂದು ಸನಾತನ ಭಾಷೆಯಲ್ಲೇ ಸಂಭಾಷಣೆ ಶುರು ಮಾಡುವ ಪ್ರಶಾಂತ ನಾಯಕ್ ಶಾಸಕ ಮಂಕಾಳು ವೈದ್ಯನಿಗೂ ಆಗಾಗ ಟಾಂಗ್ ಕೊಡುತ್ತಲೇ ಬಂದಿದ್ದಾನೆ. ಇತ್ತ "ಸರ್, ಬಿಜೆಪಿಯ ಗೋವಿಂದ ನಾಯ್ಕ್, ಸುನಿಲ್ ನಾಯ್ಕ್‌ಗೆ ಹೇಗೆ ಬೈದು ಬೆವರಿಳಿಸಿದ್ದೇನೆ ಗೊತ್ತಾ?.... ಇನ್ನು ನಿಮ್ಮ ತಂಟೆಗವರೆಂದೂ ಬರೋದಿಲ್ಲ ಬಿಡಿ... ಸಾರ್..." ಎಂದು ಪುಸಲಾಯಿಸುವ ಸಿಪಿಐ ಸಾಹೇಬರು ಅತ್ತ ಬಿಜೆಪಿ ಲೀಡರ್‌ಗಳಿಗೂ ಇದೇ ರೀತಿ ಪಂಪ್ ಹೊಡೆಯುತ್ತಾನೆ. "..... ಆ ಎಮ್ಮೆಲ್ಲೆಗೆ ಸರಿ ಕ್ಲಾಸ್ ತಗೊಂಡಿದ್ದೇನೆ... ಇನ್ನು ನಿಮಗೇನೂ ತೊಂದರೆ ಅವನ ಕೊಡೋಕೆ ಬರೋದಿಲ್ಲಾ... ಹರಿ ಓಂ...." ಎಂದು ಸಂಘಿಗಳಿಗೆ ಸಮಾಧಾನ ಮಾಡುತ್ತಾನೆ ಸಿಪಿಐ ನಾಯಕ. ಒಮ್ಮೆ ಶಾಸಕ ಮಂಕಾಳುನ ಹೊಡೆಯಲೆಂದು ಹೋಗಿದ್ದ ಖತಮ್ ಮಂಜು ಎಂಬ ಚೆಡ್ಡಿ ಕ್ರಿಮಿನಲ್‌ನನ್ನು ಬಂಧಿಸಿದ ನಾಟಕವಾಡಿದ್ದ ಸಿಪಿಐ ಆತನಿಗೆ ಅದ್ಯಾವುದೋ ಸಭಾಭವನಕ್ಕೊಯ್ದು ಬಿರಿಯಾನಿ ತಿನ್ನಿಸಿ ಕಳಿಸಿದ್ದಾನೆಂಬುದು ಬಿಜೆಪಿಗಳೇ ಹೇಳುವ ಜೋಕು.

ಸಿಪಿಐ ಪ್ರಶಾಂತ ನಾಯಕನ ಎಡಬಿಡಂಗಿತನದಿಂದಾಗಿ ಇವತ್ತು ಭಟ್ಕಳದ ಕೋಮು ಷಡ್ಯಂತ್ರಗಾರರು ಕೊಬ್ಬಿ ಹೋಗಿದ್ದಾರೆ. ಸಂಘಿಗಳಿಗಂತೂ ಕಾನೂನಿನ ಭಯವೇ ಇಲ್ಲದಂತಾಗಿದೆ. ಪೊಲೀಸ್ ಠಾಣೆಗೆ ಲಗ್ಗೆ ಹಾಕಿ ಪೊಲೀಸರೆದುರೇ ಹಲ್ಲೆ-ಹೊಡೆದಾಟಕ್ಕೆ ಬಿಜೆಪಿ ಭಂಡರು ಇಳಿಯುತ್ತಿದ್ದಾರೆ. ಇದು ಸಹಜವಾಗೇ ಮುಸ್ಲಿಮರನ್ನು ಹತಾಶರಾಗಿಸಿದೆ. ಶಾಸಕ ಮಂಕಾಳು ವೈದ್ಯನ ಮಾತಿಗೂ ಕಿಮ್ಮತ್ತಿಲ್ಲವಾಗಿದೆ. ಒಂದಂತೂ ಖರೆ. ಸಿಪಿಐ ಪ್ರಶಾಂತ ನಾಯಕ್ ಇರುವವರೆಗೂ ಭಟ್ಕಳಕ್ಕೆ ಗಂಡಾಂತರ ತಪ್ಪಿದ್ದಲ್ಲ, ಈ ಖಾಕಿವಾಲಾ ಹಿಂದೂ-ಮುಸ್ಲಿಮರನ್ನು ಬ್ಯಾಲೆನ್ಸ್ ಮಾಡುವ ರೀತಿಯೇ ಕೋಮುಗಲಭೆಗೆ ನೆಪವಾಗುವಂತಿದೆ. ಎಷ್ಟು ಬೇಗ ಸಿಪಿಐ ನಾಯಕ್‌ನನ್ನು ಭಟ್ಕಳದಿಂದ ಎತ್ತಂಗಡಿ ಮಾಡಲಾಗುತ್ತದೋ ಅಷ್ಟು ಬೇಗ ಭಟ್ಕಳ ಬಚಾವಾದಂತೆಯೇ!!

ರನ್ನೂ ಇದೇ ಥರ ವ್ಯಾಟ್ಸ್ಆ್ಯಪ್‌ನಲ್ಲಿ ಅವಹೇಳನ ದಲಾಗಿತ್ತು. ಆಗ ಎಷ್ಟುಸಲ ದೂರು ಒಯ್ದರೂ ಏನೂ ರಲಿಲ್ಲ. ಅಂದಿನ ಹಿಂದೂವಾದಿ ಎಸ್ಪಿ ಆರ್. ದಿಲೀಪ್ ವ್ಯಾಟ್ಸ್ಆ್ಯಪ್ ಅನಾಚಾರದ ಬಗ್ಗೆ ತಲೆಯೇ ಸಿಕೊಂಡಿರಲಿಲ್ಲ.

ಈ ಸಲವೂ ತಮ್ಮದೇ ಕೈಮೇಲಾಗುತ್ತದೆ ಅಥವಾ ೀಮು ಗಲಭೆಯಾಗಿ ಬಿಜೆಪಿಗೆ ಅನುಕೂಲವಾಗುತ್ತದೆಂಬ ೀಚನೆ ಸಂಘಿಗಳದಾಗಿತ್ತು. ಆದರೆ ಚೆಡ್ಡಿಗಳು ಸಿಕ್ಕಿಬಿದ್ದು ಸಾ ತಿನ್ನುವಂತಾಯ್ತು.

ವ್ಯಾಟ್ಸ್ಆ್ಯಪ್ ಅವಹೇಳನದಿಂದ ಕೆರಳಿ ಬ್ಲಾಕ್ ಕಾಂಗ್ರೆಸ್ ಕ್ಷ ವಿಠ್ಠಲ ನಾಯ್ಕ ತನ್ನಣ್ಣ ತಿರುಮಲನಾಯ್ಕನೊಂದಿಗೆ ರಿ ಅಸಹ್ಯ ಸಂದೇಶ ಕಂಡಕಂಡವರಿಗೆ ರವಾನಿಸಿದ್ದ ಳಸಿದಾಸ ನಾಯ್ಕನನ್ನು ಹಿಡಿದು ಸಮಾ ನಾಲ್ಕು ುಕಿದ್ದಾನೆ. ಅಷ್ಟೇ ಅಲ್ಲ, ದರದರನೆ ಎಳೆದು ರಿಕ್ಷಾಕ್ಕೆ ಂಬಿ ಸೀದಾ ಪೊಲೀಸ್ ಠಾಣೆಗೊಯ್ದಿದ್ದಾನೆ. ಇದು ಿದಿದ್ದೇ ತಡ, ಗೋವಿಂದ ನಾಯ್ಕ ಗೂಂಡಾ ಯರೊಂದಿಗೆ ಠಾಣೆಗೆ ನುಗ್ಗಿದ್ದಾನೆ. ಅಲ್ಲಿ ವಿಠ್ಠಲ ನಾಯ್ಕ ತ್ತವನ ಅಣ್ಣನ ಮೇಲೆ ಪೊಲೀಸರು, ಸಿಪಿಐ, ಪಿಎಸ್ಐ ುರೇ ಹಲ್ಲೆ ಮಾಡಿದ್ದಾನೆ. ಗೋವಿಂದನಾಯ್ಕನ ಸಹಚರರ ೊಡೆತಕ್ಕೆ ವಿಠ್ಠಲ ನಾಯ್ಕ ಸಹೋದರರು ಪತರುಗುಟ್ಟಿ ೋಗಿದ್ದಾರೆ!

ನೋಡು-ನೋಡುತ್ತಿದ್ದಂತೆಯೇ 10-20 ರಷ್ಟಿದ್ದ ಂದೂತ್ವವಾದಿ ಹರಾಮಿಗಳ ಗುಂಪು 500ರಷ್ಟಾಗಿ ೋಯಿತು! ಠಾಣೆಯಲ್ಲಿ ಲಾ ಅಂಡ್ ಆರ್ಡರ್ ಈ ಘಿ ಸೈತಾನರ ಕೈವಶವಾಗಿಹೋಯಿತು. ಆಡಳಿತಾರೂಢ ಂಗ್ರೆಸ್ ಪಕ್ಷದ ಬ್ಲಾಕ್ ಅಧ್ಯಕ್ಷನೂ ಶಾಸಕ ಮಂಕಾಳು ೈದ್ಯನ ಪರಮಾಪ್ತನೂ ಆದ ವಿಠ್ಠಲ ನಾಯ್ಕ ಮತ್ತವನ ಣ್ಣನ ಬಳಗದ ಪರಿಸ್ಥಿತಿ ಕರುಣಾಜನಕವಾಯ್ತು. ಇದಕ್ಕೆ ಮುಖ ಕಾರಣಕರ್ತರು ಸಿಪಿಐ ಪ್ರಶಾಂತ ನಾಯಕ್ ಂಬ ಹಿಂದೂತ್ವದ ಖಾಕಿ ಖಳ! ಈತ ಬಿಜೆಪಿ ಪರಿವಾರಕ್ಕೆ ಅನುಕೂಲವಾಗುವಂತೆಯೇ ನಡೆದುಕೊಂಡಿದ್ದಾನೆ. ಬಿಜೆಪಿ-ಂಘಿ ಗೂಂಡಾಗಳು ಗುಂಪು-ಗುಂಪಾಗಿ ಠಾಣೆಯತ್ತ ನುಗ್ಗಿ ುರುತ್ತಿದ್ದಾಗಲೂ ಈತ ಎಚ್ಚೆತ್ತುಕೊಳ್ಳಲಿಲ್ಲ. ಹಿಂದೂತ್ವದ ಾಕತ್ತು ಸಾಬರಿಗೆ ತೋರಿಸುವ ತುಡಿತ ಈತನದಾಗಿತ್ತು. ೀಗಾಗಿ ಆತ ಸೂರ್ಯ ಮುಳುಗಿ ಕತ್ತಲಾವರಿಸುವ ತನಕವೂ ಯಾವುದೇ ತಹಬಂಧಿ ಪ್ರಯತ್ನ ನಡೆಸಲೇ ಇಲ್ಲ. ಯಾವಾಗ 150 ಕಿ.ಮೀ. ದೂರದಿಂದ ಎಸ್ಪಿ ವಂಶಿಕೃಷ್ಣ ಬಂದರೋ ಆಗ ಲಾಠಿ ಚಾರ್ಜ್ ಮಾಡಿ ಸಂಘಿಗಳಿಗೆ 'ಹಚಾ' ಎಂದು ಓಡಿಸಿದರು. ಎಸ್ಪಿ ಬರದಿದ್ದರೆ ಅಂದು ಭಟ್ಕಳದ ಪೊಲೀಸ್ ಠಾಣೆ ಧ್ವಂಸವಾಗುವ ಸಾಧ್ಯತೆಯಿತ್ತು. ಈಗ ಎರಡೂ ಕಡೆಯ ದೀವರ ತಂಡದ ಮೇಲೆ ಕೇಸುಗಳಾಗಿವೆ. ಎಮ್ಮೆಲ್ಲೆ ಯಾಗುವ ದುರಾಸೆಯ ಧುರೀಣರು ಆರಾಮಾಗಿದ್ದಾರೆ!

ದೀವರೆಲ್ಲ ಬಿಜೆಪಿ ಬ್ಯಾನರಿನಡಿ ಒಂದಾಗಿ ಶಾಸಕ ಮಂಕಾಳು ವೈದ್ಯನಿಗೆ ಮದ್ದರೆಯುತ್ತಿರುವಾಗ ಈ ವಿಠ್ಠಲ ನಾಯ್ಕ 'ಕಾಫೀರ್' ಕೆಲಸ ಮಾಡುತ್ತಿದ್ದಾನೆಂಬುದು ಸಂಘಿಗಳ ಎಮ್ಮೆಲ್ಲೆ ಆಕಾಂಕ್ಷೆಯ 'ತ್ರಿಮೂರ್ತಿ' ತಂಡಗಳ ಸಿಟ್ಟಿಗೆ ಮೂಲ. ವಿಠ್ಠಲನಿಗೆ ಕಪಾಳಮೋಕ್ಷ ಮಾಡಿದರೆ ಸಾಕ್ಷಾತ್ ಶಾಸಕ ಮಂಕಾಳುಗೇ ಮಂಗಳಾರತಿ ಮಾಡಿದಂತೆಂಬ ಜಿದ್ದು!

ಒಟ್ಟಿನಲ್ಲಿ ಅನಾಹುತಕಾರಿ ಸಂಸದ ಅನಂತ್ಮಾಣಿ ಮತ್ತಾತನ ಮೂವರು ಎಮ್ಮೆಲ್ಲೆಗಿರಿ ಚಟದ ಹಿಂಬಾಲಕರ ಹುಚ್ಚಾಟದಿಂದ ಭಟ್ಕಳ ಜಾತಿಯತೆ-ಕೋಮು ವಿದ್ವೇಷದ ಮಡುವಿಗೆ ಬಿದ್ದು ಒದ್ದಾಡುವಂತಾಗಿದೆ. ದೀವರಿಗೆ ಶಾಸಕ ಮಂಕಾಳು ಮೇಲಿರುವ ರೋಷವನ್ನು ಅನಂತ್ಮಾಣಿ ತನಗೆ ಅನುಕೂಲಕರವಾಗಿ ಬಳಸಿಕೊಳ್ಳುತ್ತಿದ್ದಾನೆ. ದೀವರು v/s ಮಂಕಾಳು ಯುದ್ಧವನ್ನು ಹಿಂದೂ v/s ಸಾಬರು ಸಮರವಾಗಿ ಮಾರ್ಪಡಿಸಿ ಆ ಬೆಂಕಿಯಲ್ಲಿ ಮೈಕಾಯಿಸಿಕೊಳ್ಳಲು ಹವಣಿಸುತ್ತಿದ್ದಾನೆ. ದುರಂತವೆಂದರೆ, ಚಾಲಾಕಿ ಬ್ರಾಹ್ಮಣ ಅನಂತ್ಮಾಣಿ ರಕ್ತ ಪಿಪಾಸು ಟ್ರಿಕ್ಕುಗಳು ಅರ್ಥವಾಗದೇ ಪೆದ್ದು ಶೂದ್ರ ಸರದಾರರಾದ ಗೋವಿಂದ ನಾಯ್ಕ, ಈಶ್ವರ ನಾಯ್ಕ ಮತ್ತು ಸುನಿಲ್ ನಾಯ್ಕ್ ಹಳ್ಳಕ್ಕೆ ಬೀಳುತ್ತಿದ್ದಾರೆ. ಪಾಪದ ಸ್ವ-ಜಾತಿ ಜನರನ್ನು ಅನಂತ್ಮಾಣಿಯ ರಾಜಕೀಯ ದೇವಳಿಗೆ ಬಲಿ ಹಾಕುತ್ತಿದ್ದಾರೆ.

ಈಗ ತಕ್ಷಣ ಎಚ್ಚೆತ್ತುಕೊಳ್ಳಬೇಕಿರುವುದು ಸ್ಥಳೀಯ ದೀವರ ಧೀರರಾದ ಮಾಜಿ ಮಂತ್ರಿ ಶಿವಾನಂದ ನಾಯ್ಕ್, ಜಿಪಂ ಮಾಜಿ ಅಧ್ಯಕ್ಷ ದಾಮೋದರ ಗರ್ಡೀಕರ್ ಮತ್ತು ಮಾಜಿ ಶಾಸಕ ಜೆ.ಡಿ. ನಾಯ್ಕ್, ಅನಂತ್ಮಾಣಿಯ ಸ್ವಾರ್ಥದಿಂದ ದಿಕ್ಕು ತಪ್ಪಿರುವ ಸ್ವ-ಜಾತಿಯ ಯುವಕರನ್ನು ಈ ಲೀಡರ್‌ಗಳು ಹಳಿಗೆ ತರಬೇಕಿದೆ. ಬ್ರಾಹ್ಮಣಶಾಹಿ ಮೆರೆಸಲು ದೀವರ ಹುಡುಗರೇಕೆ ಕಾಲಾಳುಗಳಾಗಬೇಕೆಂದು ಬುದ್ಧಿ ಹೇಳಬೇಕಿದೆ! ಶಾಸಕ ಮಂಕಾಳು ಮೇಲಿನ ಸಿಟ್ಟಿಗೆ ಭಟ್ಕಳವನ್ನು ಕೋಮು ಸಂಘರ್ಷದ ರಣರಂಗ ಮಾಡುವುದು 'ಹಾವು ಹೊಡೆದು ಹದ್ದಿಗೆ ಹಾಕಿದಂತೆ' ಎಂಬ ಸರಳ ಸತ್ಯ ಅರ್ಥಮಾಡಿಕೊಳ್ಳಬೇಕಿದೆ. ಕೋಮುವಾದದ ಹಿಡನ್ ಅಜೆಂಡಾ ಬಿಟ್ಟು, ಸಾಬರನ್ನು ವಿಶ್ವಾಸಕ್ಕೆ ತೆಗೆದುಕೊಂಡೇ ರೌಡಿ ಶಾಸಕ ಮಂಕಾಳು ವೈದ್ಯನನ್ನು ಮಟ್ಟ ಹಾಕುವ ದೀವರ ವೀರನೊಬ್ಬ ಇವತ್ತಿನ ಭಟ್ಕಳದ ಜರೂರತ್ತು!!

■ ನಹುಷ

ಮಲ್ಯನ ಪಲ್ಯದಲ್ಲಿ ನಮ್ಮೆಲ್ಲರ ಪಾಲಿದೆಯಲ್ಲವೆ?

ಕನ್ನಯ್ಯ ಕುಮಾರನ ದನಿಗೆ ಬೆಚ್ಚಿಬಿದ್ದ ಪುರೋಹಿತಶಾಹಿಗಳು ಇನ್ನೊಂದು ವಾರದಲ್ಲಿ ಆತನ ವಿರುದ್ಧ ಯಾವುದಾದರೊಂದು ಆಪಾದನೆ ತಯಾರು ಮಾಡಿ ತಮ್ಮದೇ ಜಾಲಗಳಲ್ಲಿ ಹರಿಯಬಿಡುತ್ತಾರೆ, ಕಾದು ನೋಡಿ ಎಂದು ಚೆಡ್ಡಿಗಳ ಅಂತರಂಗವನ್ನರಿತವರು ಚರ್ಚಿಸುತ್ತಿರುವಾಗಲೇ ಅಂತಹದೊಂದು ಸುದ್ದಿ ಹೊರಬಿದ್ದೇ ಬಿಟ್ಟಿತಲ್ಲಾ. ಜೆಎನ್‌ಯು ಆವರಣದಲ್ಲಿ ಸದಾ ಚಟುವಟಿಕೆಯಿಂದಿರುವ ಕನ್ನಯ್ಯ ಮೂತ್ರ ಬಿಡಲು ಪುರುಸೊತ್ತಿಲ್ಲದೆ ಓಡಾಡುತ್ತಿದ್ದನಂತೆ. ಕಡೆಗೆ ಒತ್ತಡ ತಾಳಲಾರದೆ ಓಡಿಹೋಗಿ ಹುಯ್ದನಂತೆ. ಗಂಡಸರು ಮೂತ್ರ ಮಾಡುವ ಪ್ರದೇಶದ ಬಗ್ಗೆ ಕುತೂಹಲವಿಟ್ಟುಕೊಂಡ ಮಹಿಳೆಯೊಬ್ಬರು "ಅರೆ ಕ್ಯಾ ಕರ್ತ ಹೈ ಥೂ?" ಎಂದಳಂತೆ. ಅದಕ್ಕೆ ಕನ್ನಯ್ಯ "ಪಿಸಾಪ್ ಕರ್ತಾ ಹೈ" ಅಂದನಂತೆ. ಈ ವಾಗ್ವಾದ ನೋಡಿದ ಎಬಿವಿಪಿಗಳು ಮಹಿಳೆಯಿಂದ ದೂರು ಕೊಡಿಸಿ ಕನ್ನಯ್ಯನಿಗೆ ದಂಡ ಹಾಕಿಸಿದರಂತೆ. ಇದು ಕನ್ನಯ್ಯನ ಅಭಿಮಾನಿಗಳು ಹೇಳುವ ಮಾತು. ಇನ್ನ ಎಬಿವಿಪಿಗಳ ಕತೆ ಶ್ಯಾನೆ ಸ್ವಾರಸ್ಯವಾಗಿದೆ. ಜೆಎನ್‌ಯು ಆವರಣದಲ್ಲಿ ಗೌರವಾನ್ವಿತ ಮಹಿಳೆಯೊಬ್ಬರು ತರಾತುರಿಯಿಂದ ಹೋಗುತ್ತಿದ್ದಳಂತೆ. ಕನ್ನಯ್ಯ "ಎಲ್ಲಿಗೆ ಹೋಗುತ್ತಿ?" ಎಂದನಂತೆ. "ಮೂತ್ರ ಬಿಡಲು" ಎಂದಳಂತೆ. ಆಗ ಈ ಅನಾಗರಿಕ ಕನ್ನಯ್ಯ "ನನ್ನ ಮೂತ್ರವನ್ನೂ ಬಿಟ್ಟು ಬರ್ತಿಯಾ?" ಎಂದನಂತೆ. ಇಂತಹ ಮಾತಿನ ಅರ್ಥವೇನು? ಇದು ಅನಾಗರಿಕ ವರ್ತನೆಯಲ್ಲವೆ? ಪಾಪ ಆ ಮಹಿಳೆ ಅತ್ತು ಕರೆದು ಗೋಳಾಡುತ್ತಿರುವಾಗ ಎಬಿವಿಪಿಗಳು ಸಾಂತ್ವನ ಹೇಳಿ ಗೌರವವಾಗಿ ಮೂತ್ರ ಮಾಡಿಸಿ, ನಂತರ ದೂರು ಕೊಡಿಸಿ ಕಳುಹಿಸಿದರಂತೆ. "ಇಲ್ಲಿ ಭಾರತ ನಾರಿಯ ಮಾನ ಕಳೆದವರಾರು? ರಕ್ಷಿಸಿದವರಾರೆಂದು ನೀವೇ ತೀರ್ಮಾನಿಸಿ" ಎಂದು ಚೆಡ್ಡಿಯಿಂದ ಪ್ಯಾಂಟಿಗೆ ಭಡ್ತಿ ಪಡೆಯುತ್ತಿರುವವರ ವಾದವಾಗಿದೆಯಂತಲ್ಲಾ, ಥೂತ್ತೇರಿ!

* * *


ಅದೊಂದು ಕಾಲದಲ್ಲಿ ಸಂಘಪರಿವಾರದವರೆಂದರೆ ಅವರು ಲಂಚ ರುಶುವತ್ತು ಸಹಿಸದ, ಸತ್ಯಮಾರ್ಗಿಗಳು, ನ್ಯಾಯನೀತಿಧರ್ಮದ ಪ್ರತಿಪಾದಕರು, ಭಾರತದ ನಾರಿಯರ ವಿಷಯದಲ್ಲಂತೂ ಥೇಟ್ ಲಕ್ಷ್ಮಣನನ್ನು ಮೀರಿಸುವಂತಹವರು ಎಂಬ ಸುಳ್ಳು ಸುದ್ದಿ ದೇಶದಾದ್ಯಂತ ಹರಡಿದ್ದ ಕಾಲ. ಆಗವರು ತಮ್ಮ ಸಿದ್ಧಾಂತದ ವಿರೋಧಿಗಳ ತೇಜೋವಧೆ ಮಾಡಲು ಬಳಸುತ್ತಿದ್ದ ಏಕೈಕ ಅಸ್ತ್ರವೆಂದರೆ, "ಆತ ವ್ಯಭಿಚಾರಿ, ಹೆಣ್ಣುಮಕ್ಕಳ ವಿಷಯದಲ್ಲಿ ಲಂಪಟ. ನಿಮ್ಮ ಮನೆಗಳಿಗೆ ಕರೆಯಬೇಡಿ" ಎಂಬ ಮಾತುಗಳನ್ನು. ಚೆಡ್ಡಿಗಳ ಇಂತಹ ದುರುಳಾಸ್ತ್ರವನ್ನು ಕರ್ನಾಟಕದ ಮಟ್ಟಿಗೆ ಧ್ವಂಸ ಮಾಡಿದವರೆಂದರೆ ಅವರದೆ ಪಾರ್ಟಿಯ ಮಂತ್ರಿ, ಶಾಸಕರು ಮತ್ತು ಕೆಲ ಹರಕು ಚೆಡ್ಡಿಗಳು. ಆದ್ದರಿಂದ ತಮ್ಮ ವಿರೋಧಿಗಳ ವಿಷಯದಲ್ಲಿ ವ್ಯಭಿಚಾರದ ಅಸ್ತ್ರ ಬಿಟ್ಟಿದ್ದಾರೆ. ಅದು ತಿರುಗಿ ಚೆಡ್ಡಿಗಳ ಕಡೆಗೇ ಬರುವಂತಹ ಸ್ಥಿತಿಯೊಂದು ರಾಜ್ಯದಲ್ಲಿ ರೂಪುಗೊಂಡಿದೆ. ಇಂತಹ ಮಾರಕಾಸ್ತ್ರವನ್ನು ನಿಷ್ಕ್ರಿಯಗೊಳಿಸಿದ ಯಡಿಯೂರಪ್ಪ, ಈಶ್ವರಪ್ಪ, ರೇಣುಕಾಚಾರಿ, ಹಾಲಪ್ಪ, ಭಟ್ಟ, ರಾಮದಾಸರಿಗೆ ನಾಡಿನ ಜನಸ್ತೋಮ ಕೃತಜ್ಞತೆ ಸಲ್ಲಿಸುವುದು ಆದ್ಯ ಕರ್ತವ್ಯ. ಆದರೆ ಉತ್ತರ ಭಾರತದಲ್ಲಿ ಚೆಡ್ಡಿಗಳ ಈ ಅಸ್ತ್ರ ಇನ್ನೂ ಚಾಲ್ತಿಯಲ್ಲಿರಬಹುದು. ಆದರೂ ಕನ್ನಯ್ಯನ ವಿಷಯದಲ್ಲಿ ಅಂತಹ ಆರೋಪ ಮಾಡಲಾಗದೆ ಕೇವಲ ಮೂತ್ರ ವಿಸರ್ಜನಾ ಸ್ಥಳವನ್ನು ಧಾರ್ಮಿಕ ಅತಿಕ್ರಮಣದ ಪ್ರದೇಶವೆಂಬಂತೆ ಗುರುತಿಸಿ ಕಾಪಾಡಿಕೊಂಡು ಬಂದಿರುವುದೂ ಅಲ್ಲದೆ, ಮಹಿಳೆಯೊಬ್ಬರನ್ನು ಸಾಕ್ಷಿಯಾಗಿ ಕಾಯ್ದುಕೊಂಡು ಬಂದಿರುವುದಂತೂ ಅವುಗಳ ಕಿಡಿಗೇಡಿತನದ ಪರಮಾವಧಿಯೆಂದು ಅನ್ನಲೇಬೇಕಾಗಿದೆಯಲ್ಲಾ, ಥೂತ್ತೇರಿ!!

* * *

ಮೂಢನಂಬಿಕೆ ನಿಷೇಧದ ಕಾಯ್ದೆ ಸದನದ ಮುಂದೆ ಬರಲು ಕಾಯುತ್ತ ಕುಳಿತಿರಬೇಕಾದರೆ ತುಮಕೂರು ಜಿಲ್ಲೆಯ ಗುಡಿಯೊಂದರ ಮುಂದೆ ಕೊಂಡ ಹಾಯುವ ಆತುರದಲ್ಲಿ ಸುಮಾರು ಎಂಬತ್ತು ಜನ ಸುಟ್ಟುಕೊಂಡು ಆಸ್ಪತ್ರೆ ಸೇರಿದರಲ್ಲಾ, ಇಂತಹ ಘಟನೆಗಳಿಗಾಗಿಯೇ ಕಾಯ್ದುಕೊಂಡವನಂತಿರುವ ಸುರೇಶ್ ಗೌಡ ಎಂಬ ಮೂರ್ಖ ಶಾಸಕ ಜಿಲ್ಲಾ ಆಸ್ಪತ್ರೆ ವೈದ್ಯೆಯರು, ದಾದಿಯರನ್ನೆಲ್ಲಾ ಬೈಯುತ್ತ ಶುದ್ಧ ಹೊಣೆಗೇಡಿಯಂತೆ ವರ್ತಿಸಿರುವುದು ಖಂಡನೀಯ. ಜವಾಬ್ದಾರಿಯರಿತವನಾಗಿದ್ದರೆ ಗಾಯಾಳಿಗೆ ಸಾಂತ್ವನ ಹೇಳಿ, ಆಸ್ಪತ್ರೆಯಲ್ಲಿರುವ ಸೌಲಭ್ಯ ಸಿಬ್ಬಂದಿ ಜೊತೆ ಸೌಜನ್ಯದಿಂದ ವರ್ತಿಸಬೇಕಿತ್ತು, ಅಷ್ಟಕ್ಕೂ ಎಂಬತ್ತು ಜನ ಸುಟ್ಟುಕೊಂಡು ಬಂದರೆ ಔಷಧೋಪಚಾರ ಮಾಡಲು ಯಾವ ಆಸ್ಪತ್ರೆ ಸಿದ್ಧವಿರುತ್ತೆ? ಹೋಗಲಿ ಸದರಿ ಗಾಯಾಳುಗಳು ದೇಶರಕ್ಷಣೆ ಯುದ್ಧ ಭೂಮಿಯಿಂದ ಬಂದರೇ? ಈ ರಣಬೇಸಿಗೆಯಲ್ಲಿ ಬೆಂಕಿ ಮಾಡಿಕೊಂಡು ಅದರೊಳಕ್ಕೆ ಹೈ ಜಂಪ್, ಲಾಂಗ್‌ಜಂಪ್ ಮಾಡಿಕೊಂಡರೆ ಯಾರು ಹೊಣೆ? ಇಂತಹದೊಂದು ಕೆಂಡಾಚರಣೆ ನಿಲ್ಲಿಸಲಾಗಲ್ಲವೆ ಎಂದು ಕೇಳಿದರೆ ಬಿಜೆಪಿಗಿಂತಲೂ ಮೂಢಾಚರಣೆಯಲ್ಲಿ ಒಂದು ಹೆಜ್ಜೆ ಮುಂದಿರುವ ಕಾಂಗ್ರೆ ಶಾಸಕರು "ನೋಡಿ, ಈ ಕೆಂಡಾಚರಣೆ ಶೈವ ಪರಂಪರೆಯದು. ಬರಿ ಮೈಯಲ್ಲಿ ಬೆಂಕಿ ಕಾಯಿಸುತ್ತ ಅದನ್ನೇ ಯಜ್ಞಯಾಗವೆಂದು ಬೊಗಳುತ್ತ ಕುಳಿತ ಅಗ್ನಿ ಆರಾಧಕರನ್ನು ಮೆಟ್ಟಿ ನಿಲ್ಲುವುದೇ ಈ ಕೆಂಡಾಚರಣೆ. ಆದ್ದರಿಂದ, ಇದು ಮೂಢನಂಬಿಕೆ ನಿಷೇಧ ಕಾಯ್ದೆಗೆ ಒಳಪಡುವುದಿಲ್ಲ, ಪುರೋಹಿತಶಾಹಿಗಳ ಎದುರು ಬಳಸುತ್ತಿರುವ ಅಗ್ನಿ ಅಸ್ತ್ರವೇ ಕೆಂಡಾಚರಣೆ" ಎಂದವಲ್ಲಾ, ಥೂತ್ತೇರಿ!!

* * *

ನಮ್ಮೆಲ್ಲರ ಮೆಚ್ಚಿನ ಮದ್ಯದ ದೊರೆ ಮಲ್ಯ ಗಂಟುಮೂಟೆಯೊಡನೆ ನೂರಾರು ವರ್ಷ ನಮ್ಮನ್ನಾಳೀ ಆಳೀ ಬೇಸರಗೊಂಡು ಬಿಟ್ಟುಹೋದ ದೇಶಕ್ಕೆ ಪರಾರಿಯಾಗಿದ್ದಾರೆ. ಆದರೂ ಅವರ ಮದ್ಯಗಳು



ಥೂತ್ತೇರಿ

ಯಾಹೂ

ಎಂದಿನ ಬೆಲೆಗೆ ದೊರಕುತ್ತಲೇಯಿರುವುದು ಸಂತೋಷದ ಸಂಗತಿ. ಮಲ್ಯ ನಮ್ಮ ನಡುವಿನ ಗತಿಗೆಟ್ಟ ರಾಜಕಾರಣ ರೂಪಿಸಿದ್ದಂತಹ ವಿಲಕ್ಷಣ ವ್ಯಕ್ತಿ. ಕ್ರಿಕೆಟ್ ಪ್ರೇಮಿಗಳಿಗೆ ನಶೆ ಏರಿಸುವಂತಹ ವ್ಯಕ್ತಿ. ಕ್ರೀಡಾಪಟುಗಳಿಗೆ ಕೋಟ್ಯಾಂತರ ರೂಪಾಯಿಗಳನ್ನು ಸುರಿದವನು. ಹಾಗೆಯೇ ಮೂಢನಂಬಿಕೆಯ ಕೇಂದ್ರಸ್ಥಾನದಲ್ಲಿರುವ ಸುಬ್ರಹ್ಮಣ್ಯದ ಬ್ರಾಹ್ಮಣರಿಗೆ ಭಾಗ್ಯದ ನಿಧಿಯಿದ್ದಂತೆ. ಇನ್ನ ತಿರುಪತಿ ತಿಮ್ಮಪ್ಪನಿಗಂತೂ ಈತ ಗೆಳೆಯನಿದ್ದಂತೆ. ಕರ್ನಾಟಕದ ವಿಧಾನಸೌಧದ ಎದುರು ನಿಂತ ಭಿಕ್ಷುಕ ರಾಜಕಾರಣಿಗಳಿಗೆ ಕುಬೇರನಿದ್ದಂತೆ. ಎಲ್ಲಾ ಪಾರ್ಟಿಯ ಶಾಸಕರಿಗೂ ಕೇಳಿದಷ್ಟು ಹಣಕೊಟ್ಟ ದಣಿ. ಎಸ್ಸೆಂ ಕೃಷ್ಣರ ಕಾಲದಲ್ಲಿ ಜನತಾಪಕ್ಷದ ಚಿಹ್ನೆಕೊಂಡು, ಸಾಬರ ಓಟಿಗಾಗಿ ಟಿಪ್ಪು ಖಡ್ಗವನ್ನೇ ಕೊಂಡು, ಕ್ಯಾಂಡಿಡೇಟ್‌ಗಳ ತಿರುಗಾಟಕ್ಕೆಂದು ಹೆಲಿಕಾಪ್ಟರನ್ನೇ ತೆಗೆದುಕೊಟ್ಟಿದ್ದ ಆಧುನಿಕ ಹಾಜಿಮಸ್ತಾನ. ಆದರೇನು ಜನಸ್ತೋಮಕ್ಕೆ ಇದೆಲ್ಲಾ ನಿಮ್ಮ ದುಡ್ಡು ಎಂಬುದು ಅರಿವಿಗೇ ಬರಲಿಲ್ಲ. ಹೀಗಿರುವಾಗ ಸಂಬಳದ ನೌಕರರಾದ ಬ್ಯಾಂಕಿನ ಸಿಬ್ಬಂದಿಗೆ ಬರಲು ಸಾಧ್ಯವೆ? ನಮ್ಮ ಜೊತೆಗಾರನೊಬ್ಬ ನಿರಂತರವಾಗಿ ನಮ್ಮ ಬಾರ್ ಅಂಡ್ ರೆಸ್ಟೋರೆಂಟಿನ ಬಿಲ್ಲು ಕೊಡುತ್ತಾನೆಂದರೆ ನಾವು ತಲೆಕೆಡಿಸಿಕೊಳ್ಳಬೇಕು. ಆದರೆ, ಆತನ ಅಮಲಿನಲ್ಲಿದ್ದ ನಮಗೆ ತಕ್ಕ ಶಾಸ್ತಿಯಾಗಿದೆ. ಆದರೆ ಎಂದೂ ಕುಡಿಯದ ದೇವೇಗೌಡರು ಮಾತ್ರ "ಮಲ್ಯ ನಮ್ಮ ಮಣ್ಣಿನ ಮಗ" ಎಂದಿರುವುದು ಚರ್ಚಿಸಬೇಕಾದ ಸಂಗತಿಯೇ ಸರಿ, ಥೂತ್ತೇರಿ!!

* * *

ಇಬ್ಬರು ಶಾಸಕರು ನಮ್ಮನ್ನು ದಂಗುಬಡಿಸಿದ್ದಾರೆ. ದೂರದ ಡೆಹರಾಡೂನಿನಲ್ಲಿ ನಡೆಯುತ್ತಿದ್ದ ಪ್ರತಿಭಟನೆ ವೇಳೆ, ಬಿಜೆಪಿಯ ಗಣೇಶ್ ಜೋಶಿ ಎಂಬ ಶಾಸಕ ಪೊಲೀಸ್ ಕುಳಿತಿದ್ದ ಕುದುರೆಗೆ ಕಾಲು ಮುರಿಯುವಂತೆ ಹೊಡೆದಿದ್ದಾನೆ. ಇದು ಅನಾಗರಿಕತೆಯ ಪರಮಾವಧಿಯಾದರೂ ಮತೀಯವಾದದ ಮಲ ತುಂಬಿದ ತಲೆಗಳು ಆಗಾಗ್ಗೆ ಹೀಗೆ ವರ್ತಿಸುವುದು ಇತಿಹಾಸದಲ್ಲೇ ದಾಖಲಾಗಿದೆ. ಕುದುರೆಗೂ ಸಾಬರಿಗೂ ನಂಟು ಬಿಗಿಯುವ ನಡವಳಿಕೆಯೊಂದು ನಮ್ಮಲ್ಲಿದೆ. ಹಾಗೆಯೇ ಹಂದಿ ಕತ್ತೆಗಳೂ ಕೂಡ ಹೊರತಾಗಿಲ್ಲ, ಇಂತಲ್ಲಿ ಕುದುರೆ ಕಾಲು ಮುರಿದ ಗಣೇಶ ಜೋಶಿ ಹಿಂಸಾವಾದಿ ಚೆಡ್ಡಿಗಳ ಪ್ರತಿರೂಪ. ಎಲ್ಲಕ್ಕಿಂತ ಮಿಗಿಲಾಗಿ ಪ್ರೀತಿ, ವಿಶ್ವಾಸ ಮತ್ತು ಸನ್ನೆಗಳಿಂದಲೇ ತರಬೇತಿ ಪಡೆದ ಆ ಕುದುರೆಗೆ ಈ ಹಂತಕನ ಮುಖ ತೋರಿಸುವುದು ಒಳ್ಳೆಯದು. ಇಲ್ಲವಾದರೆ ಆ ಕುದುರೆ ಎಲ್ಲ ಜನಗಳ ಬಗ್ಗೆ ವಿಶ್ವಾಸ ಕಳೆದುಕೊಳ್ಳುವ ಅಪಾಯವುಂಟು. ಇಂತಹ ಶಾಸಕನಂತವರೇ ತುಂಬಿಹೋಗಿರುವ ಪುತ್ತೂರಿನಲ್ಲಿ ನಡೆವ ಜಾತ್ರಾ ಮಹೋತ್ಸವದ ಆಹ್ವಾನ ಪತ್ರಿಕೆಯಲ್ಲಿ ಮುಸ್ಲಿಂ ಜಿಲ್ಲಾಧಿಕಾರಿ ಹೆಸರು ತೆಗೆಸಿ ಹೊಸ ಆಹ್ವಾನ ಪತ್ರಿಕೆ ಮಾಡಲು ಹೇಳಿರುವ ಶಾಸಕರನ್ನು ಸಂವಿಧಾನ ವಿರೋಧಿ ಹೇಳಿಕೆ ಮೇಲೆ ಒದ್ದು ಓಡಿಸಬೇಕಿದೆ. ಮುಜೀಬ್ ಅಹಮದ್ ಎಂಬ ಅಧಿಕಾರಿ ದೇವಸ್ಥಾನ ಕಟ್ಟಿಸಿ ಪುರೋಹಿತ ಪಿಂಡಗಳಿಂದಲೇ ಉದ್ಘಾಟಿಸಿ ಕೊಟ್ಟ ದಾಖಲೆಯಿದೆ. ಪಾಳುಬಿದ್ದ ದೇಗುಲವನ್ನು ಧರ್ಮಸ್ಥಳದ ಸಹಕಾರದೊಂದಿಗೆ ಮಂಡ್ಯ ಜಿಲ್ಲೆಯ ಕಲೀಮುಲ್ಲ ಜೀರ್ಣೋದ್ಧಾರ ಮಾಡಿಸುತ್ತಿದ್ದಾರೆ. ಆದಿ ಚುಂಚನಗಿರಿ ಸ್ವಾಮಿ ಸಮಾಧಿ ನಿರ್ಮಾತೃ ಒಬ್ಬ ಮುಸ್ಲಿಂ. ಇಂತಹ ಕ್ರಿಯೆ ನಿರಂತರವಾಗಿ ನಡೆಯುತ್ತಿರುವಾಗ ಪುತ್ತೂರಿನ ಮತಾಂಧ ಕಾಕುಗಳ ಮಾತಿಗೆ ಬೆಲೆ ಕೊಟ್ಟ ಶಾಸಕರಿಗೆ ಯಾರಾದರೂ ಸಂವಿಧಾನಬದ್ಧ ನಾಗರಿಕ ನಡವಳಿಕೆ ಹೇಳಿಕೊಡಬೇಕಾಗಿದೆಯಲ್ಲಾ, ಥೂತ್ತೇರಿ!!! ■




ನಿಖಿತಾ





ಪವಿತ್ರಾಗೌಡ



ದುರಂತ ಸಾರಥಿ

ನಿನ್ನಮ್ಮನ್..... ಸೂ..... ನಾನು ಕಚಡಾ ನನ್‌ಮಗಾ ಗೊತ್ತಾ? ಎಷ್ಟ್ ಜನಕ್ಕೆ ಹುಟ್ಟಿರ್ ಮಗೂನೇ ಅದು? ನಿನ್ನ ಕಾಲೇಜ್ ಬಾಯ್‌ಫ್ರೆಂಡ್‌ಗಳಿಗೆ ಹುಟ್ಟಿದ್ದಾ ಅಥವಾ ಈಗಿರೋ ಲವರ್‌ಗೆ ಹುಟ್ಟಿದ್ದಾ? ಡಿಎನ್‌ಎ ಟೆಸ್ಟ್ ಮಾಡಿಸ್ತೀನಿ ಸತ್ಯ ಗೊತ್ತಾಗುತ್ತೆ? ಏನೇ ನನ್.... ಚೆನ್ನಾಗಿಲ್ವೇನೇ....? ಅವಂದೇ ಬೇಕಾ ನಿನಗೆ?..... ಮುಂಡೆ! ಸೂ....! ಎಷ್ಟು ಜನರ ಹತ್ರಾನೇ....! ಕರ್ನಾಟಕದ ಉದ್ದಗಲಕ್ಕೂ ಯಾರ್‍ಯಾರದೋ ವ್ಯಾಟ್ಸಪ್ಪುಗಳ ತುಂಬ ರಾರಾಜಿಸುತ್ತಿರುವ ಕೆಟ್ಟಾ ಕೊಳಕು ಬೈಗುಳದ, ಹೊಟ್ಟೆಗೆ ಅನ್ನ ತಿನ್ನುವವರ್‍ಯಾರೂ ಕೇಳುವುದಕ್ಕೂ ಅಸಹ್ಯ ಹುಟುಹುದಾದ ಇಂಥದೊಂದು ಡೈಲಾಗನ್ನು ಅದೆಂಥದೋ ಸ್ಟಾರ್ ದರ್ಶನ್ ತನ್ನ ಪತ್ನಿಯನ್ನುದ್ದೇಶಿಸಿ ಬೈದಿದ್ದಲ್ಲ ಎಂದೇ ಇಟ್ಟುಕೊಳ್ಳೋಣ ಅಥವಾ ಅದು ದರ್ಶನ್ ತನ್ನ ಪತ್ನಿ ವಿಜಯಲಕ್ಷ್ಮಿಯನ್ನುದ್ದೇಶಿಸಿ ಕಿಡಿಕಾರಿದರೆಂಬುದು ಸುಳ್ಳಾಗಿ ಹೋಗಲೆಂದೇ ಹಾರೈಸೋಣ-

ಏಕೆಂದರೆ ದರ್ಶನ್ ಕನ್ನಡದ ಬಾಕ್ಸ್ ಆಫೀಸ್ ಬಾದ್‌ಶಾಹ. ಕನ್ನಡಿಗರು ಯಾವತ್ತಿಗೂ ಗೌರವಿಸುವ ವಿಲನ್ ತೂಗುದೀಪ ಶ್ರೀನಿವಾಸ್‌ರ ಪುತ್ರ. ಲಕ್ಷ ಲಕ್ಷ ಪಡ್ಡೆ ಅಭಿಮಾನಿಗಳ ಪಾಳಿನ ಆರಾಧ್ಯ ದೈವ. ಬೆಳ್ಳಿ ಪರದೆಯ ಮೇಲೆ ಕನ್ನಾಪೀಡಕ ವಿಲನ್‌ಗಳ ರುಂಡ ಚೆಂಡಾಡುವ ರಣಧೀರ. ತನ್ನ ತಾಯಿಯನ್ನು ದೇವರಂತೆ ಅಕ್ಕನನ್ನು ಪ್ರಾಣದಂತೆ ಪ್ರೀತಿಸುವ ಆದರ್ಶ ಕನ್ನಡಿಗನ ಪಾತ್ರ ನಟಿಸುವ ದರ್ಶನ್ ತನ್ನ ಪತ್ನಿಯನ್ನು ಇಷ್ಟೊಂದು ಅಸಹ್ಯವಾಗಿ ಬೈದಿರಲಾರ ಎಂದೇ ನಂಬೋಣ. ಸ್ವತಃ ದರ್ಶನ್ ಪತ್ನಿ ವಿಜಯಲಕ್ಷ್ಮಿಯೇ ಮುಲಾಜಿಗೆ ಬಿದ್ದು ಹೇಳಿಕೊಂಡಂತೆ ಅದು ದರ್ಶನ್ ಬೈದಿದ್ದಲ್ಲ ಎಂಬುದನ್ನೂ ನಂಬೋಣ ಅಥವಾ ಖುದ್ದು ದರ್ಶನ್ ಯಾರೋ ತನ್ನ ಧ್ವನಿಯಲ್ಲಿ ತನ್ನದೇ ರೀತಿಯಲ್ಲಿ ಈ ರೀತಿ ಡೈಲಾಗ್ ಹೊಡೆದು ಅದನ್ನು ವ್ಯಾಟ್ಸಪ್ಪಿಗೆ ಬಿಟ್ಟು ತನ್ನನ್ನು ಮುಗಿಸಲು ಷಡ್ಯಂತ್ರ ಮಾಡುತ್ತಿದ್ದಾರೆಂಬುದನ್ನೇ ಸತ್ಯವೆಂದು ನಂಬೋಣ.

ಆದರೆ ಒಂದಂತೂ ಸತ್ಯ. ಹೀಗೆ ಯಾರೋ ಅನಾಗರಿಕನೊಬ್ಬ ತನ್ನ ಪತ್ನಿಗೆ ಇಷ್ಟೊಂದು ಮೃಗೀಯವಾಗಿ ಬೈದ ಬೈಗುಳದ ಧ್ವನಿಯಂತೂ ಥೇಟು ದರ್ಶನ್‌ನ ಧ್ವನಿಯನ್ನೇ ಹೋಲುತ್ತದೆ. ನಿಜಕ್ಕೂ ಅದು ಮಿಮಿಕ್ರಿ ಚತುರನೊಬ್ಬ ಇದೇ ಸಮಯ ಕಾದು ದರ್ಶನ್ ಹೆಸರು ಕೆಡಿಸಲೆಂದೇ ಮಾಡಿದ ಕುತಂತ್ರ ಎಂದೇ ಭಾವಿಸಿಕೊಂಡರೂ ಹಾಗೇ ಭಾವಿಸಿದ ಕಾರಣಕ್ಕೆ ಹತ್ತಾರು ಪ್ರಶ್ನೆಗಳು ಎದ್ದು ನಿಲ್ಲುತ್ತವೆ.

ಮಾರ್ಚ್ 9ರ ರಂಪ

ಈ ಪೈಕಿ ಮೊದಲ ಪ್ರಶ್ನೆಯೇ ದರ್ಶನ್ ಪತ್ನಿ ವಿಜಯಲಕ್ಷ್ಮಿ ಇದೇ 9ರ ಬುಧವಾರದಂದು ಚೆನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ತನ್ನ ಪತಿ ವಿರುದ್ಧ ನೀಡಿದ ದೂರು. ದೂರಿನಲ್ಲಿ ವಿಜಯಲಕ್ಷ್ಮಿ ಸ್ಪಷ್ಟವಾಗೇ ತನ್ನ ಗಂಡ ತಾನಿರುವ ಅಪಾರ್ಟ್‌ಮೆಂಟ್ ಬಳಿ ಬಂದು ಗಲಾಟೆ ಮಾಡುತ್ತಿದ್ದಾರೆ. ಕೆಳಗೆ ಸೆಲ್ಲಾರ್‌ನಲ್ಲಿ ನಿಲ್ಲಿಸಿದ್ದ ಆಡಿ ಕಾರ್‌ನ ಗಾಜನ್ನೂ ಒಡೆದು ಹಾಕಿದ್ದಾರೆ. ಅಪಾರ್ಟ್‌ಮೆಂಟಿನ ಕಾವಲುಗಾರ ದೇವರಾಜ್ ಮೇಲೂ ಹಲ್ಲೆ ನಡೆಸಿದ್ದಾರೆ. ನಾನೇನಾದರೂ ಕೈಗೆ ಸಿಕ್ಕಿದೆನೆಂದರೆ ಮತ್ತೆ ನನ್ನ ಕೈಕಾಲು ಮುರಿಯುವುದಂತೂ ನಿಶ್ಚಿತ. ದಯವಿಟ್ಟು ಗಲಾಟೆ ಮಾಡದಂತೆ ಕರೆದು ಬುದ್ಧಿ ಹೇಳಿ.

ಇದು ದರ್ಶನ್ ಪತ್ನಿ ಚೆನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸ್ ಠಾಣೆಗೆ ನೀಡಿದ ದೂರಿನ ಸಾರಾಂಶವಾದರೆ ಪ್ರೆಸ್ಟೀಜ್ ಸೌತ್ ರಿಟ್ಜ್ ಅಪಾರ್ಟ್‌ಮೆಂಟ್‌ನ ಸೆಕ್ಯೂರಿಟಿ ಗಾರ್ಡ್ ದೇವರಾಜ್ ತನ್ನ ಮೇಲೆ ದರ್ಶನ್ ಹಲ್ಲೆ ನಡೆಸಿದ್ದಾರೆಂದೇ ಪ್ರತ್ಯೇಕವಾಗಿ ದೂರು ಸಲ್ಲಿಸಿದ್ದಾನೆ. ಇದರರ್ಥ ಮಾರ್ಚ್ 9ರ ಬುಧವಾರ ಸಂಜೆ ದರ್ಶನ್ ಚೆನ್ನಮ್ಮನ ಕೆರೆ ಅಚ್ಚುಕಟ್ಟು ವ್ಯಾಪ್ತಿಯ ಪ್ರೆಸ್ಟೀಜ್ ಸೌತ್ ರಿಟ್ಜ್ ಅಪಾರ್ಟ್‌ಮೆಂಟಿಗೆ ಹೋಗಿ ಗಲಾಟೆ ಮಾಡಿರುವುದಂತೂ ಸತ್ಯ. ಹೀಗೆ ದರ್ಶನ್ ವಿರುದ್ಧ ಪತ್ನಿ ಸೇರಿದಂತೆ ಒಂದಲ್ಲ ಎರಡು ದೂರುಗಳು ದಾಖಲಾದ ಸುದ್ದಿ ಬಂದಿದ್ದೇ ರಾತ್ರೋರಾತ್ರಿ ಬೆಂಗಳೂರಿನಿಂದ ದರ್ಶನ್ ಪರಾರಿಯಾಗಿದ್ದಾನೆ. ಸೀದಾ ಮೈಸೂರಿನ ತನ್ನ ತೋಟದ ಮನೆ ಸೇರಿಕೊಂಡಿದ್ದಾನೆ. ಅಲ್ಲೇ ರಾತ್ರಿ ಕಳೆಯಬಹುದಿತ್ತಲ್ಲವೆ?

ಟಿವಿಗಳಲ್ಲೆಲ್ಲಾ ಆ ಹೊತ್ತಿಗೆ ದರ್ಶನ್ ವಿರುದ್ಧ ದೂರು ದಾಖಲಾದ ಸುದ್ದಿ ಬರುತ್ತಿತ್ತಲ್ಲ; ಇನ್ನೆಲ್ಲಿ ನಡುರಾತ್ರಿ ಪೊಲೀಸರು ತನ್ನ ತೋಟಕ್ಕೆ ನುಗ್ಗಿ ಎಳೆದೊಯ್ದು ಮಾನ ಕಳೆದಾರೋ ಅನ್ನಿಸಿ ರಾತ್ರೋರಾತ್ರಿ ಸಂದೇಶ್ ಪ್ರಿನ್ಸ್ ಹೋಟೇಲಿಗೆ ಬಂದಿದ್ದಾನೆ. ತಾನು ಬಂದ ಸಂಗತಿಯನ್ನು ರಹಸ್ಯವಾಗಿಡುವಂತೆ ಹೋಟೆಲ್ ಮಾಲಿಕ ಸಂದೇಶ್ ನಾಗರಾಜ್‌ಗೆ ಫೋನಾಯಿಸಿದ್ದಾನೆ. ಮರುದಿನ ಬೆಳಗ್ಗೆ ಅಲ್ಲಿಗೇ ವಕೀಲರನ್ನು ಕರೆಸಿಕೊಂಡು ಅಲ್ಲಿಂದಲೇ ಚೆನ್ನಮ್ಮನಕೆರೆ ಇನ್ಸ್‌ಪೆಕ್ಟರ್ ಮತ್ತು ಬೆಂಗಳೂರು ದಕ್ಷಿಣ ಡಿಸಿಪಿ ಲೋಕೇಶ್ ಕುಮಾರ್‌ಗೆ ಫೋನ್ ಮಾಡಿ 'ತನ್ನ ತಾಯಿಗೆ ಹುಷಾರಿಲ್ಲ ಅವರು ಆಸ್ಪತ್ರೆಗೆ ದಾಖಲಾಗಿದ್ದರಿಂದ ನಾನು ಶನಿವಾರ ವಿಚಾರಣೆಗೆ ಬರುತ್ತೇನೆ' ಎಂದಿದ್ದಾನೆ.

ಅಂಬಿಯ ಎಂಟ್ರಿ

ಹೀಗೆ ದರ್ಶನ್ ನೇರವಾಗಿ ಡಿಸಿಪಿಗೆ ಫೋನ್ ಮಾಡುವುದಕ್ಕೂ ಮುನ್ನ ಆಪತ್‌ಕಾಲಕ್ಕೊಂದು ಪ್ಯಾಚಪ್ಪೆಂಬಂತೆ ತನ್ನ ಸೋಕಾಲ್ಡ್ ಗಾಡ್‌ಫಾದರ್ ಅಂಬಿಗೆ ಫೋನಾಯಿಸಿದ್ದಾನೆ. "ನೋಡಣ್ಣಾ ಎಷ್ಟ್ ತೊಂದ್ರೆ ಕೊಡ್ತವ್ಳೆ. ಅವಳೇ ನನ್ನ ಪಾಲಿಗೆ ಶನಿಯಾಗಿ ಬಿಟ್ಟವ್ಳೆ...." ಎಂದೆಲ್ಲಾ ದಮ್ಮಯ್ಯ ಗುಡ್ಡೆ ಹಾಕಿದ್ದಾನೆ. ಇನ್ನು ಅಂಬಿ ಕೇಳಬೇಕೆ?



ಮುಚ್ಚಲು ಬಂದ ಅಂಬಿ

ಯಡವಟ್ಟಿಗೊಬ್ಬ ಬಡವಟ್ಟ ಎಂಬಂತೆ ಡಿಸಿಪಿ ಲೋಕೇಶ್‌ಕುಮಾರ್‌ಗೆ ಫೋನ್ ಮಾಡಿದ್ದೇ "ಗಂಡಹೆಂಡತಿ ಜಗಳ ಇದ್ದಿದ್ದೇ ಬಿಡಿ. ಈ ಟೀವಿಯವರಿಗೇನೋ ಮಾಡಕ್ಕೆ ಬೇರೆ ಕೆಲಸವಿಲ್ಲ; ಇಂಥದ್ದನ್ನೇ ಕಾಯ್ತಿರ್ತಾರೆ...." ಎಂದಿದ್ದೇ ಪ್ರಕರಣದಲ್ಲಿ ಸರ್ಕಾರದ ಹಿತಾಸಕ್ತಿಯ ಮೂಗು ತೂರಿಸಿದ್ದಾರೆ.

ಬಹುಶಃ ಡಿಸಿಪಿಗೇನಾದರೂ ಅಂಬಿಯ ಫೋನ್ ಹೋಗಿರದಿದ್ದರೆ ಈ ಹೊತ್ತಿಗೆ ದರ್ಶನ್ ಮತ್ತೆ ಜೈಲಿನಲ್ಲಿರಬೇಕಿತ್ತು. ಅತಿಕ್ರಮ ಪ್ರವೇಶ, ಪತ್ನಿಗೆ ಕಿರುಕುಳ, ಸೆಕ್ಯೂರಿಟಿ ಗಾರ್ಡ್ ಮೇಲೆ ಹಲ್ಲೆ, ಅವಾಚ್ಯ ಬೈಗುಳ, ಕಾರ್ ಜಖಂಗೊಳಿಸಿದ್ದು, ಕೊಲೆ ಬೆದರಿಕೆ ಇತ್ಯಾದಿ ಐಪಿಸಿ ಸೆಕ್ಷನ್ನಿನ ಆರಕ್ಕೂ ಅಧಿಕ ಪ್ರಕರಣಗಳ ಆಧಾರದ ಮೇಲೆ ದರ್ಶನ್ ವಿರುದ್ಧ ಒಂದಲ್ಲ ಎರಡು ಎಫ್‌ಐಆರ್ ದಾಖಲಿಸುವ ಸಕಲ ತಯಾರಿಯನ್ನೂ ಮಾಡಿಯಾಗಿತ್ತು. ಹಾಗೇನಾದರೂ ಎಫ್‌ಐಆರ್ ದಾಖಲಾಗಿದ್ದೇ ಆದ ಪಕ್ಷದಲ್ಲಿ ದರ್ಶನ್‌ಗೆ ಜಾಮೀನು ಸಿಗುವುದಂತೂ ದೂರದ ಮಾತೇ. ಮತ್ತೆ ಜೈಲು, ಬೇಲು, ಅರೆಸ್ಟು, ವಾರೆಂಟು ಇತ್ಯಾದಿ ಇತ್ಯಾದಿ.

ಸಾರಥಿ ಪಾರ್ಟ್-2 ದೃಶ್ಯಾವಳಿಗಳನ್ನೆಲ್ಲ ಕನ್ನಡ ಜನತೆ ಮತ್ತೊಮ್ಮೆ ಟೀವಿ ಪರದೆಗಳಲ್ಲಿ ನೋಡಬೇಕಿತ್ತು. ದರ್ಶನ್ ಮೊದಲ ಬಾರಿ ಜೈಲು ಪಾಲಾಗಿದ್ದು 2011ರ ಸೆಪ್ಟೆಂಬರ್ 9ರಂದು. ಪತ್ನಿ ವಿಜಯಲಕ್ಷ್ಮಿಗೆ ಆತ ಹೊಡೆದ ರೀತಿಯಿತ್ತಲ್ಲ; ಕೈಗೆ ಸುತ್ತಿದ ಬ್ಯಾಂಡೇಜಿನ ಸಮೇತ ವಿಜಯಲಕ್ಷ್ಮಿ ವಿಜಯನಗರ ಪೊಲೀಸ್ ಠಾಣೆಗೆ ಬಂದು ದೂರು ನೀಡಿದ್ದ ದೃಶ್ಯವನ್ನು ಟೀವಿಗಳಲ್ಲಿ ನೋಡಿದ್ದ ನ್ಯಾಯಾಧೀಶರೇ ದಂಗಾಗಿಹೋಗಿದ್ದರು. "ನೀನೊಬ್ಬ ಸ್ಟಾರ್. ಜನ ನಿನ್ನ ಸಿನಿಮಾ ನೋಡುತ್ತಾರೆ. ನಿನ್ನನ್ನು ಅನುಕರಿಸುತ್ತಾರೆ. ಇದರ ಪರಿವೆ ಕೂಡ ನಿನಗಿದ್ದಂತಿಲ್ಲ. ಮೃಗ ಪಿಶಾಚಿಗಳೂ ಇಷ್ಟೊಂದು ಕ್ರೂರವಾಗಿ ವರ್ತಿಸಲ್ಲ. ಪುಟ್ಟ ಮಗು ಅಂತಲೂ ಲೆಕ್ಕಿಸದೇ ಬಿಸಿ ಕ್ಯಾಂಡಲ್‌ನಿಂದ ಸುಟ್ಟಿದ್ದೀಯಲ್ಲ; ಜನ ಇದನ್ನೇ ಅನುಕರಿಸಬೇಕಾ...?" ಎಂದು ನೇರವಾಗಿಯೇ ಛೀಮಾರಿ ಹಾಕಿದ್ದರು. ಹೆಚ್ಚೂ ಕಮ್ಮಿ ಎರಡು ವಾರಗಳ



ಪತ್ನಿ ವಿಜಯಲಕ್ಷ್ಮಿ

(ದರ್ಶನ್)



ಯಾರು ಈ ಪವಿತ್ರ ಗೌಡ?





ಈ ಮಧ್ಯೆ ಪದೇಪದೇ ದರ್ಶನ್ ಮೈಸೂರಿಗೆ ಬರುವುದಕ್ಕೂ ತನ್ನ ರಾಜರಾಜೇಶ್ವರಿನಗರದ ಬಂಗಲೆಗಿಂತ ಹೆಚ್ಚಾಗಿ ಮೈಸೂರಿನ ತೋಟದಲ್ಲಿರುತ್ತೇನೆಂದು ಹೇಳಿಕೊಳ್ಳುವುದಕ್ಕೂ ಕಾರಣವೆಂದು ಪುಕಾರೆದ್ದ ಹೆಸರೆಂದರೆ ಅದು ಪವಿತ್ರಾಗೌಡ!

ಯಾರು ಈ ಪವಿತ್ರಾಗೌಡ ಎಂದು ಗಾಂಧಿನಗರಕ್ಕೆ ಗಾಂಧಿನಗರವೇ ತಲೆಕೆರೆದುಕೊಂಡದ್ದು ಕೂಡ ಆಕೆಯೊಡನೆ ಕೇಳಿಬಂದ ದರ್ಶನ್ ಹೆಸರಿಗೇ ಇತ್ತೀಚೆಗೆ ಝೀ ಕನ್ನಡದಲ್ಲಿ ಪ್ರಸಾರವಾದ 'ವೀಕೆಂಡ್ ವಿತ್ ರಮೇಶ್'ನಲ್ಲಿ ದರ್ಶನ್ ಕುರಿತ ಕಾರ್ಯಕ್ರಮದಲ್ಲಿ ಪ್ರತಿಯೊಬ್ಬರೂ ಗಮನಿಸಿದ್ದು ಆತನ ಪತ್ನಿಯ ಗೈರು ಹಾಜರಿಯನ್ನೇ. ಪತ್ನಿಹೀನನಾಗಿ ಏಕಾಂಗಿಯಾಗಿ ರಮೇಶ್‌ರನ್ನು ಎದುರಿಸಿದ ದರ್ಶನ್ ಎಲ್ಲಿಯೂ ತನ್ನ ಪತ್ನಿಯ ಪ್ರಸ್ತಾಪ ಮಾಡದ ಹಾಗೆ ಮೊದಲೇ ಷರತ್ತು ವಿಧಿಸಿದ್ದು ಕೂಡ ಗುಟ್ಟಾಗುಳಿಯಲಿಲ್ಲ. ಅದಕ್ಕೆ ಗಾಂಧಿನಗರ ಬೆಟ್ಟು ಮಾಡಿದ್ದು ಪವಿತ್ರಾ ಗೌಡಳನ್ನು!

ಎಸ್. ನಾರಾಯಣ್‌ರ 'ಛತ್ರಿಗಳು ಸಾರ್ ಛತ್ರಿಗಳು' ಚಿತ್ರದಲ್ಲಿ ಪವಿತ್ರಾ ಗೌಡ ಮೊದಲು ಮುಖ ತೋರಿಸಿದ್ದೇ ಕೊನೆ. ತದನಂತರ ಚಂದ್ರಶೇಖರ್ ಎಂಬ ಅಪರೂಪಿ ನಿರ್ಮಾಪಕನ 'ಬತಾಸು' ಎಂಬ ಚಿತ್ರಕ್ಕೆ ಹೀರೋಯಿನ್ನಾಗಿ ಆಯ್ಕೆಯಾದ ಸುದ್ದಿಯೇನೋ ಬಂತು. ಶ್ರೀನಿವಾಸ್ ತಿಮ್ಮಯ್ಯ ಎಂಬ ಪ್ರತಿಭಾವಂತನ ನಿರ್ದೇಶನವೂ ಬತಾಸಿಗಿತ್ತು. ಅದೇನಾಯಿತೋ 'ಬತಾಸು' ಅಂಗಡಿವರೆಗೂ ಬರಲೇ ಇಲ್ಲ. ಅಂದರೆ ಡಬ್ಬಾ ಬಿಟ್ಟು ಹೊರಬರಲೇ ಇಲ್ಲ. ಆದರೆ ಬತಾಸಿಗಿಂತಲೂ ಮಿಗಿಲಾಗಿ ಪವಿತ್ರಾ ಗೌಡಳ ಹೆಸರು ಕೇಳಿಬಂದದ್ದು ದರ್ಶನ್ ಜೊತೆಗೇ. ಈಕೆಯನ್ನು ಹೀರೋಯಿನ್ ಮಾಡದ ಕಾರಣಕ್ಕೆ ಬುಲೆಟ್ ಪ್ರಕಾಶ್ ವಿರುದ್ಧ ದರ್ಶನ್ ಮುನಿಸಿಕೊಂಡನೆ? ಮೈಸೂರಿನಲ್ಲಿ ಈಕೆಗೊಂದು ಮನೆಯನ್ನು ದರ್ಶನ್ ಮಾಡಿಕೊಟ್ಟಿದ್ದಾನೆಂಬುದು ನಿಜವೆ? ಮೈಸೂರಿನ ತೋಟಕ್ಕೊದು ಬಂದು ಸದ್ದಿಲ್ಲದೇ ಪವಿತ್ರಾ ಸೌಧ ಸೇರಿಕೊಳ್ಳುತ್ತಿದ್ದನೆ? ಇದು ಪತ್ನಿ ವಿಜಯಲಕ್ಷ್ಮಿಗೆ ಗೊತ್ತಾಗಿದ್ದೇ ಆಕೆ ಮಗು ಸಮೇತ ಮುನಿಸಿಕೊಳ್ಳಲು ಕಾರಣವೆ? ದರ್ಶನ್ ಪತ್ನಿಗೆ ಸೋಡಾಚೀಟಿ ನೀಡಿ ಪವಿತ್ರಾ ಪಾಲಾಗುತ್ತಾನೆಂಬುದು ಕೇವಲ ಊಹಾಪೋಹವೆ?


ಗೊತ್ತಾಗುತ್ತಿಲ್ಲ. ಇದು ವದಂತಿಯೂ ಇರಬಹುದು ಅಥವಾ ನಿಖಿತಾ ಮೋಹದ ಜಾಲಕ್ಕೆ ಸದ್ದಿಲ್ಲದೆ ಬಿದ್ದಿರಲಿಕ್ಕೂ ಸಾಕು. ಯಾವುದಕ್ಕೂ ಕಾಲವೇ ಉತ್ತರಿಸಬೇಕು.

ಜೈಲು ಸವೆಸಿದ ದರ್ಶನ್‌ಗೆ ಜಾಮೀನು ...ಾಗಲೂ "ಮತ್ತೊಮ್ಮೆ ಪತ್ನಿ ಮಗುವಿಗೆ ಹಿಂಸೆ ...ರದು. ಪ್ರೀತಿಯಿಂದ ನಡೆಸಿಕೊಳ್ಳಬೇಕು" ಎಂದೇ ವಿಧಿಸಿದ್ದರು.

ಮನೆ ಬಿಟ್ಟ ಮಡದಿ

...ಗ ಅಂದರೆ ಮೊನ್ನೆ ಮಾರ್ಚ್ 9ರ ಬುಧವಾರ ದರ್ಶನ್ ಮಾಡಿದ್ದು ಸ್ಪಷ್ಟ ಕೋರ್ಟ್ ಷರತ್ತಿನ ...ನೆ. ಚನ್ನಮ್ಮನ ಕೆರೆ ಅಚ್ಚುಕಟ್ಟು ಪೊಲೀಸರೇ ... ಮಂತ್ರಿ ಅಂಬಿಯ ಧಮಕಿಗೆ ತಲೆಬಾಗದೇ ...ದ್ದರೆ ಒಂದೋ ದರ್ಶನ್ ಈ ಹೊತ್ತಿಗೆ ಪರಾರಿಯಾಗಿ ... ಅಥವಾ ಜೈಲಲ್ಲಿ ಕಂಬಿ ಎಣಿಸಿಕೊಂಡಿರುತ್ತಿದ್ದ! ...ಟ್ಸಪ್ಪು, ಟೀವಿಗಳಲ್ಲಿ ಬಿತ್ತರಗೊಂಡ ದರ್ಶನ್ ...ವನ್ನು ಆತನದಲ್ಲ ಎಂಬ ವಾದವನ್ನೇ ಒಪ್ಪಿಕೊಂಡರೂ ... ದರ್ಶನ್‌ನ ದನಿಯಲ್ಲ ಎಂಬುದಕ್ಕೆ ಯಾವ ...ಗಳೂ ಕಾಣಿಸುತ್ತಿಲ್ಲ. ಪತ್ನಿ ವಿಜಯಲಕ್ಷ್ಮಿಯೇ ...ೂಂಡಂತೆ ಆಕೆ ರಾಜರಾಜೇಶ್ವರಿನಗರದ ದರ್ಶನ್ ...ಯನ್ನು ತೊರೆದು ಒಂದು ವರ್ಷದ ಮೇಲೆ ಏಳು ...ಗಿದೆ: ತನ್ನ ಪತ್ನಿಗೆ ಯಾರೋ ಲವರ್ ಇದ್ದಾನೆ. ... ಜೊತೆ ತನ್ನ ಆಡಿ ಕಾರಿನಲ್ಲಿ ಪತ್ನಿ ಸುತ್ತಾಡುತ್ತಿದ್ದಾಳೆ. ...ತಿ ಯಾರೊ ಲವರ್ ಜೊತೆ ಎಲ್ಲೆಲ್ಲೋ ಸುತ್ತಾಡಲು ... ಏನೇನೋ ರಂಪಕ್ಕೆ ಬಿದ್ದು ಕಾರಿನ ಹಿಂಬದಿಯ ... ಒಡೆದುಕೊಂಡಿದ್ದಾರೆ ಎಂಬುದು ದರ್ಶನ್ ತನ್ನ ...ಮೇಲೆ ಹಾಕುತ್ತಿರುವ ಆರೋಪ.

...ಬ್ಬ ಸ್ಟಾರ್ ನಟ ಕುಡಿಯದೆಯೇ ಈ ರೀತಿ ಬಹಿರಂಗ ... ಪತ್ನಿ ಮೇಲೆ ಆರೋಪ ಹೊರಿಸುತ್ತಿದ್ದಾನೆಂದರೆ ... ಮಟ್ಟ ಇನ್ನೆಂಥದ್ದಿರಬೇಕೆಂದು ಜನ ಲೆಕ್ಕ ಹಾಕದೇ ...ತ್ತಾರಾ ಎಂಬ ವಿವೇಕವೂ ಆತನಿಗಿದ್ದಂತಿಲ್ಲ. ಕಂಡಕಂಡ ...ೀಯಿನ್‌ಗಳ ಜೊತೆ ಸಿನಿಮಾದಲ್ಲಿ ... ಸುತ್ತುವ ಹೀರೋನ ಪತ್ನಿಯೇ ...ರನ್ನೋ ಲವ್ ಮಾಡುತ್ತಾಳೆಂದರೆ ... ಇನ್ನೆಂಥ ಗಂಡೆಂಬ ಪ್ರಶ್ನೆ ...ಜವಾಗಿಯೇ ಹುಟ್ಟಬೇಕಲ್ಲವೆ? ...ಪಕ್ಕೆ ತಲೆಕೊಟ್ಟು ದರ್ಶನ್ ತನ್ನ ... 'ಮೇಲೆ ಮಣ್ಣು ...ದುಕೊಳ್ಳುತ್ತಿರುವ ರೀತಿಯಿದು.





2011ರ ಸೆಪ್ಟೆಂಬರ್‌ನಲ್ಲಿ ಜಾಮೀನು ... ಜೈಲಿಂದ ಹೊರಬಂದ ದರ್ಶನ್ ... ಸಾರಥಿ ಚಿತ್ರದ ವಿಜಯಯಾತ್ರೆಗೆ ...ದರಲ್ಲಿ ಪತ್ನಿಯನ್ನು ಕರೆದೊಯ್ದಿದ್ದ. ...ಂತರದ ತನ್ನ ಹುಟ್ಟು ಹಬ್ಬವನ್ನೂ ಪತ್ನಿ ಮಗನ ...ತೆಗೇ ಆಚರಿಸಿಕೊಂಡು ಪೋಜು ಕೊಟ್ಟ. ಅಂಥದ್ದೇ ...ಡು ಕಾರ್ಯಕ್ರಮಗಳಲ್ಲಿ ಪತ್ನಿ ಸಮೇತ ಪೋ ಕೊಟ್ಟದ್ದೇ .... ಅದೇ ಹೊತ್ತಿಗೆ ಸುದೀಪ್‌ನ ಬಿಗ್‌ಬಾಸ್‌ನಲ್ಲಿ ...ಳ್ಳಿ ರಾಯಣ್ಣನ ಹೀರೋಯಿನ್ ನಿಖಿತಾ ತುಕ್ರಲ್ ...ಬಿಟ್ಟು ಮಿಂಚುತ್ತಿದ್ದಳು. ಅದು ಸುದೀಪ್ ಮತ್ತು ...ರ್ಶನ್ ಸ್ನೇಹದ ಪರಿಣಾಮವೆಂಬುದೂ ...ಟ್ಟಾಗುಳಿಯಲಿಲ್ಲ. ಅದೇ ಹೊತ್ತಿಗೆ ಶೃತಿ ನಾಯ್ದು ... ಧಾರಾವಾಹಿ ಐಟಮ್ಮನ ಜೊತೆ ಮೈಸೂರು-...ಗಳೂರು ರಸ್ತೆಯಲ್ಲಿ ದರ್ಶನ್ ಇನ್ನೇನೋ ರಾದ್ಧಾಂತ ...ಡಿಕೊಂಡ ಸುದ್ದಿ ಬಂತು. ಮತ್ತೊಂದೆಡೆ ಮುಂಬಯಿಯ ...ವುದೋ ಫ್ಲಾಟನಲ್ಲಿ ನಿಖಿತಾ-ದರ್ಶನ್ ಲಿವಿಂಗ್ ಟುಗೆದರ್ ವದಂತಿಗಳೂ ಬಂದವು.

ವೀಕೆಂಡ್ ವಿತ್

ಇದು ದರ್ಶನ್ ಐಲಾಟಗಳ ಕತೆಯಾದರೆ ಇದಕ್ಕೆ ತದ್ವಿರುದ್ಧವೆಂಬಂತೆ ಒಂದರ ಮೇಲೊಂದು ದರ್ಶನ್ ಚಿತ್ರಗಳು ತೋಪುಬಿದ್ದವು. 'ಬುಲ್‌ಬುಲ್'ನ ನಂತರದ 'ಬೃಂದಾವನ' ಇನ್ನಿಲ್ಲದಂತೆ ನೆಲಕಚ್ಚಿತು. ಇದರ ಬೆನ್ನಲ್ಲೇ 'ವಿರಾಟ್' ತೋಪಾಯಿತು. ಅದ್ದೂರಿ ಅರ್ಜುನ್‌ನ ಭಾರೀ ನಿರೀಕ್ಷೆಯ 'ಐರಾವತ' ಯಾವುದೇ ಕಾರಣಕ್ಕೂ ಫ್ಲಾಪಾಗಲಾರದೆಂಬ ನಿರೀಕ್ಷೆ ಗಾಂಧಿನಗರದ ಪಂಡಿತರಿಗಿತ್ತು. ಆದರೆ ಅಷ್ಟಮ ಶನಿ ಹೆಗಲಿಗೇರಿದಂತೆ ದರ್ಶನ್ ಅವನತಿಯ ಸರಣಿ ಐರಾವತಕ್ಕೂ ಮುಂದುವರಿದಿತ್ತು.

ಇದು ದರ್ಶನ್ ಅವಸಾನದ ಮೇಲ್ನೋಟ ಲಕ್ಷಣವಷ್ಟೆ. ಯಾರೇ ಯಶಸ್ವೀ ಪುರುಷನ ಹಿಂದೆ ಆತನ ಪತ್ನಿಯ ಸಂತೃಪ್ತಿ ಹಾರೈಕೆ, ಕಾಳಜಿಯಿದ್ದರಷ್ಟೇ ಬರಕತ್ತೆಂಬ ಲೋಕಾರೂಢಿ ದರ್ಶನ್ ಪಾಲಿಗೆ ಅಕ್ಷರಶಃ ಸಾಬೀತಾಗತೊಡಗಿತ್ತು. ಅಷ್ಟಕ್ಕೂ ಆತನನ್ನು ಕರೆದು ಬುದ್ಧಿ ಹೇಳುವ ಸ್ನೇಹಿತರಾಗಲಿ, ಹಿತೈಷಿಗಳಾಗಲಿ ಇದ್ದದ್ದಾದರೂ ಯಾರು? ಒಂದೋ ಸುದೀಪ್, ಅದಿಲ್ಲವೆಂದರೆ ಅಂಬಿ. ಸುದೀಪ್ ಕೂಡ ತನ್ನದೇ ಆದ ಅಂತರ್ ತಾಪತ್ರಯಗಳಿಗೆ ಸಿಲುಕಿಬಿದ್ದಿದ್ದ. ಅಂಬಿಯ ವ್ಯಕ್ತಿತ್ವಕ್ಕೆ ಸನ್ನಡತೆ, ಸಚ್ಚಾರಿತ್ರ್ಯವೇ ಒಗ್ಗದ ಮಾತು. ಆಗಾಗ ಕರೆದು ಯೋಗಕ್ಷೇಮ ವಿಚಾರಿಸಿಕೊಳ್ಳುತ್ತಿದ್ದ ಶಿವಣ್ಣನನ್ನೇ ಬುದ್ಧಿ ಹೇಳಿದ ತಪ್ಪಿಗೆ ದೂರ ಮಾಡಿಕೊಂಡಾಗಿತ್ತು.

ಪ್ರತಿ ರಾತ್ರಿ ಕುಡಿತ. ಹೊತ್ತಲ್ಲದ ಹೊತ್ತಲ್ಲಿ ಮನೆ ಪ್ರವೇಶ, ಶೂಟಿಂಗ್ ನೆಪದಲ್ಲಿ ಫಾರಿನ್ ಪಿಕ್ನಿಕ್ಕು. ಜೊತೆಗೆ ಯಾರ್‍ಯಾರೋ ಹೀರೋಯಿನ್ನುಗಳು. ಏನೇನೋ ಪುಕಾರು. ಇನ್ನೆಂಥದ್ದೋ ರೂಮರು. ಇದೆಲ್ಲ ತನ್ನ ಪತ್ನಿಗೆ ಗೊತ್ತಾಗುವುದಿಲ್ಲವೆಂದೇ ದರ್ಶನ್ ಲೆಕ್ಕ ಹಾಕಿದ್ದ. ಆದರೆ ಆತನ ಎಲ್ಲಾ ಚಾಲಾಕಿತನ, ಕಳ್ಳಾಟ, ತಂತ್ರಗಾರಿಕೆಯನ್ನೂ ಮೀರಿದ ಅಗೋಚರ ಅಂದಾಜು, ಮನೆಯಲ್ಲಿ ಕೂತ ಹೆಂಗಸರಿಗಿರುತ್ತದೆ. ಗಂಡನ ಪ್ರತಿ ಕದಲಿಕೆಯೂ ಪತ್ನಿಯಾದವಳ ಅಗೋಚರ ಅಂದಾಜಿಗೆ ನಾಟುತ್ತದೆ. ತನಗಿಂತ ತನ್ನ ಹೆಸರಲ್ಲಿರುವ ಆತನ ಆಸ್ತಿಗಾಗೇ ದರ್ಶನ್ ಗಂಡನ ನಟನೆ ನಟಿಸುತ್ತಿದ್ದಾನೆಂಬುದು ಮನದಟ್ಟಾದ ನಂತರವೇ ವಿಜಯಲಕ್ಷ್ಮಿ ಪ್ರತ್ಯೇಕ ವಾಸದ ನಿರ್ಧಾರಕ್ಕೆ ಬಂದಿದ್ದಾಳೆ. ಅದು ಮಗನ ಸಮೇತ!

ಪ್ರತಿನಿತ್ಯ ಕಿರಿಕಿರಿ, ಜಗಳ, ಮನಸ್ತಾಪ ಮಾಮೂಲಾಗಿದೆ. ಇನ್ನಲ್ಲಿ ಮತ್ತೆ ಪತ್ನಿ ಪೊಲೀಸ್ ಠಾಣೆ ಮೆಟ್ಟಲು ಹತ್ತಿಬಿಟ್ಟಾಳೆಂಬ ಅಳುಕಿಗೆ ಬಿದ್ದ ದರ್ಶನ್ ಬನಶಂಕರಿಯಲ್ಲಿ ಪ್ರೆಸ್ಟೀಜ್ ಸೌತ್ ರಿಟ್ಜ್ ಅಪಾರ್ಟ್‌ಮೆಂಟ್ ಹಿಡಿದಿದ್ದಾನೆ. ಅಲ್ಲಿಗೆ ಪತ್ನಿ ಮಗನನ್ನು ಕರೆದೊಯ್ದ ಆಘಾತಕ್ಕೂ ಬಿದ್ದಿದ್ದಾನೆ. ಹೀಗೆ ಒಂದೂಮುಕ್ಕಾಲು ವರ್ಷ ಕಳೆದುಹೋಗಿದೆ. ದಿನಕಳೆದಂತೆ ದೇಹಗಳು ದೂರಾದಂತೆ ಮನಸ್ಸುಗಳ ನಡುವಿನ ಅಂತರವೂ ಹೆಚ್ಚಾಗಿದೆ. ಗಂಡಹೆಂಡಿರ ಸಂಬಂಧವೇನಿದ್ದರೂ ಔಪಚಾರಿಕವೆಂಬಂತಾಗಿದೆ. ಇದ್ದ ಸಂಬಂಧ ಕೇವಲ ಆಸ್ತಿಯದ್ದು.

ರಾಜರಾಜೇಶ್ವರಿನಗರದ ಬಂಗಲೆ, ರಾಜಾಜಿನಗರದ ಕಾಂಪ್ಲೆಕ್ಸ್, ಜೆಪಿ ನಗರದ ಸೈಟು, ಬನಶಂಕರಿಯ ಮತ್ತೊಂದು ಫ್ಲಾಟು ಮತ್ತು ಮೈಸೂರಿನ ಫಾರ್ಮ್ ಹೌಸ್ ಇದ್ದದ್ದು ಪತ್ನಿ ವಿಜಯಲಕ್ಷ್ಮಿಯ ಹೆಸರಲ್ಲೇ. ದರ್ಶನ್‌ನ ಕಣ್ಣೇನಿದ್ದರೂ ಅದು ಪತ್ನಿ ಅಥವಾ ಮಗನ ಮೇಲಲ್ಲ ಕೇವಲ ಪತ್ನಿ ಹೆಸರಿಗಿದ್ದ ಆಸ್ತಿಯ ಮೇಲೆಂಬುದು ಪತ್ನಿ ವಿಜಯಲಕ್ಷ್ಮಿಗೆ ಚೆನ್ನಾಗೇ ಗೊತ್ತಾಗಿದೆ. ಮುರಿದ ಮನಸ್ಸು, ಮುಚ್ಚಿದ ಬಾಗಿಲು, ಹರಿದ ಸಂಬಂಧ, ಪರಸ್ಪರ ದೂರವಾಗುವ ಹಂಬಲ. ದೂರಾದ ವಂತರದ ಬದುಕು ಕಟ್ಟಿಕೊಳ್ಳುವ ತವಕ. ಗಾಯ ಹುಣ್ಣಾಗಲೇಬೇಕು. ಕೀವು ಒಡೆಯಲೇಬೇಕು. ಸ್ಫೋಟಗೊಂಡಂತೆ ಮಾರ್ಚ್ 9ರ ಬುಧವಾರ ಏನಾಗಬಾರದಿತ್ತೋ ಅದು ನಡೆದುಹೋಗಿದೆ.

ಕೀರ್ತಿಶನಿ, ಖ್ಯಾತಿಯ ಮದ ನೆತ್ತಿಗೇರಿತೆಂದರೆ ಮನುಷ್ಯ ತನ್ನದೇ ಗೋರಿಗೆ ಗುಂಡಿ ತೋಡಿಕೊಳ್ಳುತ್ತಾನಂತೆ. ದರ್ಶನ್ ತೋಡಿಕೊಂಡ ಗೋರಿಗೆ ಸದ್ಯ ಮೇಲಷ್ಟೇ ಮಣ್ಣು. ಯಾರಿಗೋ ಹುಟ್ಟಿದ ಮಗುವಾಗಿದ್ದೇ ಆಗಿದ್ದರೆ ಮಗನನ್ನು ದೂರ ಮಾಡುತ್ತಿದ್ದಾಳೆಂಬ ಕಣ್ಣೀರಿಗೆ ಅರ್ಥವೇನಿದೆ? ಯಾರೊ ಲವರ್ ಇದ್ದಾನೆಂದರೆ ಅದನ್ನು ಪತ್ತೆ ಹಚ್ಚಲು ತಡೆಯೇನಿದೆ? ದರ್ಶನ್‌ನ ದರ್ಪ, ದೌಲತ್ತಿಗೆ, ನೆತ್ತಿಗೇರಿದ ಅಹಂ ಪಿತ್ಥಕ್ಕೆ ಮದ್ದಾದರೂ ಎಲ್ಲಿದೆ?

■ ರಾ. ಸೋಮನಾಥ್










ಮಡಿಲು ಬರಿದಾಯಿತು



"ಬಾಳ ಕಡಲಿಗೆ ಅಲೆಗಳು ನೂರು

ನನ್ನ ಜನರಿಗೆ ನೋವುಗಳು ನೂರು

ಅಳುವ ಕಣ್ಣಲಿ ಕೆಂಪು ಕಣ್ಣೀರು

ನನ್ನ ಮನದಲಿ ನೊಂದ ನಿಟ್ಟುಸಿರು"

ಎನ್ನುತ್ತಾ ಚಳವಳಿಯ ಸಂಗಾತಿಯಾಗಿದ್ದ ಫಾದರ್ ಚಸರಾ ಇನ್ನಿಲ್ಲ ಎಂಬ ಮಾತನ್ನು ಅರಗಿಸಿಕೊಳ್ಳಲು ತೀರಾ ಕಷ್ಟ ಮತ್ತು ಒಪ್ಪಲು ಸಾಧ್ಯವಿಲ್ಲದ್ದು. ಹದಿನೈದು ದಿನಗಳ ಹಿಂದೆಯೂ ದೂರವಾಣಿಯಲ್ಲಿ ನನ್ನೊಡನೆ ಮಾತಾಡಿದ್ದ ಅವರು ಇದೇ ಶನಿವಾರ ಹೊಟ್ಟೆನೋವಿನಿಂದ ಆಸ್ಪತ್ರೆ ಸೇರಿದ್ದು, ಮೇದೋಜೀರಕ ಗ್ರಂಥಿಯ ವೈಫಲ್ಯದಿಂದ 16.03.2016 ಬೆಳಗಿನಜಾವ ಸುಮಾರು ಮೂರುವರೆ-ನಾಲ್ಕು ಗಂಟೆಗೆ ಸೇಂಟ್ ಫಿಲೋಮಿನಾ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಮೂರು ದಶಕಗಳಿಂದ ಕನ್ನಡಪರ ಹೋರಾಟಗಳಲ್ಲಿ ಗುರುತಿಸಿಕೊಂಡಿದ್ದ ಚಸರಾ ಕನ್ನಡ ಕ್ರೈಸ್ತ ಹೋರಾಟದ ಮುಂಚೂಣಿಯಲ್ಲಿದ್ದರು. ಅಲ್ಲದೇ ಕರ್ನಾಟಕದ ಚರ್ಚುಗಳಲ್ಲಿ ಧಾರ್ಮಿಕವಿಧಿಗಳು, ಪ್ರಾರ್ಥನೆಗಳು ಕನ್ನಡದಲ್ಲೇ ಆಗಬೇಕು ಎಂದು ಸಂಘಟಿತ ಹೋರಾಟಗಳನ್ನು ನಡೆಸಿದ್ದರು. ಗೋಕಾಕ್ ಚಳವಳಿಯಲ್ಲಿಯೂ ಭಾಗವಹಿಸಿದ್ದ ಚಸರಾ ಅನೇಕ ಕೃತಿಗಳನ್ನು ರಚಿಸಿದ್ದರು. 'ಅದುಮಿಟ್ಟ ನೆನಪಿನ ಪುಟಗಳು', 'ಜೊತೆಜೊತೆಯಲಿ', 'ಮತಾಂತರ ಸತ್ಯಾನ್ವೇಷಣೆ' ಇತ್ಯಾದಿ ಪುಸ್ತಕಗಳ ಜೊತೆಗೆ ಚರ್ಚುಗಳ ಇತಿಹಾಸಕ್ಕೆ ಸಂಬಂಧಿಸಿದ ಪುಸ್ತಕವನ್ನೂ ಹೊರತಂದಿದ್ದು ಬೈಬಲ್ಲನ್ನು ಕನ್ನಡೀಕರಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಾಹಿತ್ಯಕ ಮತ್ತು ಸಾಂಸ್ಕೃತಿಕ ಪತ್ರಿಕೆ 'ಮಾತುಕತೆ'ಯ ಬೆನ್ನೆಲುಬಾಗಿದ್ದ ಚಸರಾ ನಿರ್ಭೀತಿಯಿಂದ ಧರ್ಮಾಧ್ಯಕ್ಷರುಗಳ ಕೊಳಕು ರಾಜಕೀಯಗಳನ್ನು, ಧರ್ಮದ ಹೆಸರುಗಳಲ್ಲಿ ನಡೆಯುತ್ತಿದ್ದ ಅನ್ಯಾಯಗಳನ್ನು ಹೊರಗೆಳೆಯುತ್ತಿದ್ದರಲ್ಲದೇ ಇದೇ ಕಾರಣಕ್ಕೆ ಕ್ರೈಸ್ತ ಧಾರ್ಮಿಕ ಮುಖಂಡರ ಕೆಂಗಣ್ಣಿಗೂ ಗುರಿಯಾಗಿದ್ದರು. ಸಂಚಿಗೂ ಬಲಿಯಾಗಿದ್ದರು. ಫಾದರ್ ಜಾರ್ಜ್ ಕೊಲೆ ಪ್ರಕರಣದಲ್ಲಿ ಅನೇಕರೊಂದಿಗೆ ಇವರನ್ನೂ ಆರೋಪಿಸಿದ್ದ ಸಂಚಿನಲ್ಲಿ ಸಿಕ್ಕಿದ್ದ ಚಸರಾ ಎದೆಗುಂದಿರಲಿಲ್ಲ. ಬದಲಿಗೆ ಸತ್ಯಕ್ಕೆ ಜಯವಿದೆ ಎಂದು ತಮ್ಮ ಹೋರಾಟವನ್ನೆಂದೂ ಮುಕ್ತಾಗಿಸಿಕೊಂಡಿರಲಿಲ್ಲ. ಕೇಡುಗಳೊಂದಿಗೆ ರಾಜಿ ಮಾಡಿಕೊಂಡಿರಲಿಲ್ಲ.

ಕಡು ಕಷ್ಟ ಬರಲಿ, ಕಣ್ಣೀರು ಇರಲಿ, ನೀನಿರಲು ಭಯವೇನಿದೆ,

ಎದುರಾಳಿ ಬಂದು ಈ ಜೀವ ಕೊಂದು ಕೊನೆಯೆಂದರೂ ಭಯವೇನಿದೆ,

ನನ್ನ ಜೀವದ ಚಲುಮೆ ನೀನು ಈ ಜೀವ ನಿನದಲ್ಲವೇ?

ಇದಕ್ಕಿನ್ನು ಕೊನೆಯೆಲ್ಲಿದೆ?

ಕ್ರಿಸ್ತ ಎನ್ನುವ ಚೈತನ್ಯವನ್ನೂ ಸತ್ಯ ಎಂಬುವ ವಾಸ್ತವವನ್ನೂ ತಮ್ಮ ಜೀವನ 'ಪ್ರೇಮ'ದಲ್ಲಿ ಸಮಾನಾರ್ಥಕವಾಗಿ ಕಾಣುತ್ತಿದ್ದ ಚಸರಾ ಅದನ್ನೇ ತಮ್ಮ ಕಾವ್ಯಗಳಲ್ಲೂ ಧ್ವನಿಸಿದ್ದರು. ಪ್ರಗತಿಪರ ಚಿಂತಕರಷ್ಟೇ ಅಲ್ಲದ ಚಸರಾ ಕ್ರೈಸ್ತ ಭಕ್ತಿಗೀತೆಗಳಿಗೆ ನೀಡಿದ ಕಾಣಿಕೆ ಅಪಾರ, ಅನುಪಮ. ಕ್ರೈಸ್ತ ಬಲಿಪೂಜೆಗಳಲ್ಲಿ ಕನ್ನಡದ ಗೀತೆಗಳನ್ನು ಇಂಗ್ಲಿಷ್‌ನಂತೆ ಹಾಡುತ್ತಾ ಕಿರಿಕಿರಿಯಾಗುತ್ತಿದ್ದ ಕಾಲವದು. ಇನ್ನು ಸಾಹಿತ್ಯವೂ ಕೂಡ ಪದಾನುವಾದ ಶಬ್ದಗಳ ಜೋಡಣೆಯಂತಿದ್ದು ಸುಗಮವಾಗಿರದಿದ್ದ ಸಮಯದಲ್ಲಿ ಕ್ರೈಸ್ತ ಭಕ್ತಿಗೀತೆಗಳನ್ನು ತಾವೇ ರಚಿಸಿ, ಸಂಗೀತ ನಿರ್ದೇಶಿಸಿದ್ದರು. ಮಾನುಷ ಸಂಬಂಧಗಳ ರೂಪಕದಿಂದಲೇ ದೈವತ್ವವನ್ನು, ಧರ್ಮವನ್ನು, ಕ್ರಿಸ್ತನನ್ನು ಕಾಣುವಂತಹ ಅಪ್ರತಿಮ ಗೀತೆಗಳಾದವು ಅವು. ಸಂಚಲನ ಪ್ರಕಾಶನದಿಂದ ಧ್ವನಿ ಸುರುಳಿಗಳೂ, ಪುಸ್ತಕಗಳೂ ಪ್ರಕಟಗೊಂಡಿದ್ದಲ್ಲದೇ ಕ್ರೈಸ್ತ ಭಕ್ತಿಗೀತೆಗಳಲ್ಲಿ ಒಂದು ಹೊಸ ಆಯಾಮವನ್ನೇ ಸೃಷ್ಟಿಸಿತು.

ನಮ್ಮಿಬ್ಬರಾ ಸ್ನೇಹ ಬಲುದೂರದಾ ಮುಗಿಲು

ಮುಗಿಲಾಚೆಗೆ ಇರುವಾ, ನಕ್ಷತ್ರದ ಸಾಲು

ಮುಂಜಾನೆ ಹಸಿರು ತಂಗಾಳೀ ಉಸಿರು

ಬೆಳದಿಂಗಳಾ ಹೊನಲು

ಮಾನುಷ ಸಖ್ಯವೂ ದೈವೀ ಸಂಬಂಧವೂ ಒಂದಾಗಿ ತೋರುವ ಚಸರಾ ಕಾವ್ಯಗಳಲ್ಲಿ ಪ್ರಾಮಾಣಿಕತೆಯೇ ಪಾವಿತ್ರ್ಯತೆ.

ನೀ ಹೇಳಿದ ಸ್ನೇಹ, ಈ ಬಾಳಿನ ಕನಸು

ಆ ಕನಸು ನನಸಾಗಲು

ನೀ ಬೇಗ ಬಾ ಯೇಸು,

ನೀ ಬಂದು ನುಡಿಸು ಈ ಕನಸ ಕೊಳಲು

ಈ ಬಾಳ ನೀ ನಡೆಸು

ಎಷ್ಟೋ ಮಕ್ಕಳಿಗೆ ದಿಕ್ಕಾಗಿದ್ದ ಚಸರಾ ಗ್ರಾಮಾಂತರ ಪ್ರದೇಶಗಳಲ್ಲಿ ಶಾಲೆಗಳನ್ನು ಸ್ಥಾಪಿಸಿದ್ದರು. ಕನ್ನಡದ ಅನೇಕ ಸಾಹಿತಿಗಳು, ಪ್ರಗತಿಪರ ಚಿಂತಕರೊಂದಿಗೆ ನಿಕಟಸಂಪರ್ಕ ಹೊಂದಿದ್ದ ಇವರು ಮೂಲತಃ ಬೆಂಗಳೂರಿನವರೇ. ಲಿಂಗರಾಜಪುರಂನಲ್ಲಿ (5.11.1955) ಜನನ. ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಎಂಎ ಮಾಡಿದ್ದರು. ರಾಜ್ಯದ ನಾನಾಭಾಗಗಳ ಧರ್ಮಸಭೆಗಳಲ್ಲಿ ವಿಚಾರಣಾ ಧರ್ಮಗುರುವಾಗಿ ಸೇವೆ ಸಲ್ಲಿಸಿದ್ದ ಅವರು ಕೊನೆಯದಾಗಿ ಬೆಂಗಳೂರಿನ ಚಾಮರಾಜಪೇಟೆಯ ಸಂತ ಜೋಸೆಫ್ ಚರ್ಚಿನ ಧರ್ಮಗುರುವಾಗಿದ್ದರು.

ನನ್ನ ಮೌನದ ಭಾವದಲಿ ನಿನ್ನ ಗೀತೆಯ ಹಾಡುವೆನು

ನಿನ್ನ ನುಡಿಗಳ ನೆನಪಿನಲಿ ನನ್ನ ಬಾಳನು ನಡೆಸುವೆನು

ಹೀಗೆಂದು ಚಸರಾ ಕ್ರಿಸ್ತನಿಗೆ ಹಾಡಿದ್ದರೆ, ಇಂದು ನಮ್ಮನ್ನಗಲಿದ ಚಸರಾ ಈ ಗೀತೆಗಳ ಭಾವದಲ್ಲಿ ನಮ್ಮನ್ನು ತೋಯಿಸುತ್ತಾರೆ.

ಪ್ರೀತಿ ಮಡಿಲು ಪ್ರೇಮದೊಡಲು ನಿನ್ನದಾಗಿದೆ

ನನ್ನ ಹೆಸರು ನನ್ನ ಉಸಿರು ನಿನ್ನದಾಗಿದೆ

ನನ್ನ ಮನದ ನೋವು ಬೇವು ನಿನ್ನದಾಗಿದೆ

ನಿನ್ನ ಪ್ರೀತಿ ಪಡೆದ ಬಾಳು ನಿನ್ನದಾಗಿದೆ

ಸದಾ ಪ್ರೀತಿ, ಕರುಣೆ ಮತ್ತು ಮಾನವೀ... ಕಾಳಜಿಗಳಿಂದಲೇ ಧರ್ಮವನ್ನು ನೋಡುತ್ತಿದ್ದ ಚ... ಯಾವ ಗೊಡ್ಡು ಸಂಪ್ರದಾಯದ ಚೌಕಟ್ಟುಗಳ ಜೊ... ರಾಜಿಯಾಗದೇ ಇದ್ದದ್ದು ಅವರ ಪ್ರೀತಿಯೂ ಹೌ... ಧೈರ್ಯವೂ ಹೌದು.

ಬರಿದಾದ ಮಡಿಲಲ್ಲಿ ಮಗುವಾಗಿ ಮನೆ ಮಾ... ನನ್ನೊಡನೆ ಮಾತಾಡು

ಹಗಲಿರುಳು ಒಂದಾಗಿ ನೋವೆಲ್ಲಾ ನಲಿವಾಗಿ ಬಾಳು ಹಿತವಾಗಲಿ

ಅವರು ಕವನಿಸಿದಂತೆ ಅವರ ಕೊನೆಯ ದಿ... ಬಾಳು ಹಿತವಾಗಲೇ ಇಲ್ಲ, ಅವರ ನಿಷ್ಪಕ್ಷಪಾತ ಹೋರಾ... ನಾನಾ ದಿಕ್ಕುಗಳಿಂದ ಬರುತ್ತಿದ್ದ ಅಡ್ಡಿ ಆತಂಕಗ... ತೊಡರುಗಾಲುಗಳನ್ನು ಒಡ್ಡುತ್ತಲೇ ಇದ್ದವು. ಆದ... ಸಿಕ್ಕಾಗೆಲ್ಲಾ ನಗುತ್ತಿದ್ದರು. ನಗುತ್ತಾ ಮಾತಾಡುತ್ತಿದ್ದ... ಪುರಾಣದ ಹೂರಣದಲ್ಲಿ ಪ್ರಸ್ತಾಪವಾದ ವಿಷಯಗಳ... ಪ್ರಶಂಸಿಸಿ, ಅವನ್ನು ಅಲ್ಲಲ್ಲಿ ಉಲ್ಲೇಖಿಸುತ್ತಿದ್ದೆ ಎಂ... ಹೇಳುತ್ತಿದ್ದರು.

ಹೊಸ ನೀರು ಹರಿದು ಹೊಸ ರಾಗ ಮೂಡಿ, ... ನೆನಪು ಮರೆಯಾಗಲು

ಹೊಸ ನೀರಲ್ಲೂ ಹೊಸ ರಾಗದಲ್ಲಿ ನೀ ಮಾ... ಸ್ಥಿರವಾಗಿರು

ನನ್ನೊಳಗೆ ಹರಿವ ಚಲುಮೆಯಾಗು, ಜೀವ... ನದಿಯಾಗು

ಹೊಸ ಜೀವ ನೀ ಹರಿಸು

ಇದೇ ಚಸರಾರವರ ಪ್ರಾರ್ಥನೆಯಾಗಿತ್ತು... ತುಡಿತವಾಗಿತ್ತು, ಅವರ ಜೊತೆ ಕಳೆದ ಸಮಯಗಳೇ... ಈಗ ಬರೀ ಗೀತೆಗಳಾಗಿ ಕಿವಿಗಳಲ್ಲಿ ಗುಯ್‌ಗುಡುತ್ತಿ...

ಕಡು ಕಷ್ಟ ಬರಲಿ, ಕಣ್ಣೀರು ಇರಲಿ, ನೀನಿರ... ಭಯವೇನಿದೆ,

ಎದುರಾಳಿ ಬಂದು ಈ ಜೀವ ಕೊಂದ... ಕೊನೆಯೆಂದರೂ ಭಯವೇನಿದೆ,

ನನ್ನ ಜೀವದ ಚಲುಮೆ ನೀನು ಈ ಜೀವ ನಿನದಲ್ಲವೇ...

ಇದಕ್ಕಿನ್ನು ಕೊನೆಯೆಲ್ಲಿದೆ?

ಹೀಗೆಂದು ಹಾಡಿದ ಚಸರಾ ಕ್ರಿಸ್ತ ಮತ್ತು ಸತ್ಯ ಎಂ... ಸಮಾನಾರ್ಥಕ ಚೈತನ್ಯಗಳೊಡನೆ ವಿಲೀನವಾಗಿ... ಭರಿಸಲಾಗದ ನೋವು. ಆದರೆ ಅವರಿಗೆ ಅಲ್ಲಿ ಪರ... ಶಾಂತಿ. ಪ್ರೇಮದ, ಸತ್ಯಾನ್ವೇಷಣೆಯ, ಶೋಷಣೆ ಮತ್ತು... ಅನ್ಯಾಯದ ವಿರುದ್ಧದ ಒಂದು ಪ್ರಬಲ ಮತ್ತು ಪ್ರಾಮಾಣಿ... ದನಿಯು ಇದ್ದಕ್ಕಿದ್ದಂತೆ ಇಲ್ಲವಾಗಿದ್ದು ಒಂದು ನಷ್ಟ ಮತ್ತು... ಸಂಕಟ.

■ಯೋಗೇಶ್ ಮಾಸ್ಟರ್

ಪಾಪಿಗಳು ಸೈನಿಕರಿಗಿಂತ ಸಾಹಸಿಗಳಾ ಮೋದಿಜಿ?

ಮೋದಿ ಸರಕಾರದಲ್ಲಿ ಗುಪ್ತಗಾಮಿನಿಯಾಗಿ ಹರಿಯುತ್ತಿರುವ ಮುಸ್ಲಿಂ ವಿರೋಧಿ ಭಾವನೆ ಈಗ ಬಹಿರಂಗವಾಗಿ ಯಾವ ಹೀನಮಟ್ಟಕ್ಕೆ ಮುಟ್ಟಿದೆಯೆಂದರೆ ಕೆಳಗಿನ ಸುದ್ದಿ ಓದಿದರೆ ಈ ಬಿಜೆಪಿ ಸರಕಾರದ ಗುಪ್ತ ಕಾರ್ಯಸೂಚಿ ಎಷ್ಟೊಂದು ಅನಾಹುತಕಾರಿಯಾಗಿದೆ ಎಂಬ ಅಂದಾಜು ಸಿಗುತ್ತದೆ. ಕಳೆದ ವಾರ ಮುಂಬಯಿಯ ಪ್ರಮುಖ ಇಂಗ್ಲಿಷ್ ಪತ್ರಿಕೆಯಲ್ಲಿ ಪ್ರಕಟವಾದ ಸುದ್ದಿ ಹೀಗಿದೆ:



"ಬಿಜೆಪಿ ನೇತೃತ್ವದ ಈಗಿನ ಕೇಂದ್ರ ಸರಕಾರ ಹಿಂದೂಗಳಲ್ಲಿ ತನ್ನ ಜನಪ್ರಿಯತೆ ಹೆಚ್ಚಿಸಿಕೊಳ್ಳಲು ಇನ್ನೊಂದು ವಿವಾದ ಬೇಕೆಂದೇ ಹುಟ್ಟು ಹಾಕಿದೆ. ಆಯುಶ್ ಸಚಿವಾಲಯ ಮುಸ್ಲಿಮರನ್ನು ಉದ್ದೇಶಪೂರ್ವಕವಾಗಿ ನೌಕರಿಗಾಗಿ ನೇಮಿಸುತ್ತಿಲ್ಲ ಎಂದು ಒಂದು ಆರ್‌ಟಿಐ ಅರ್ಜಿಗೆ ಉತ್ತರವಾಗಿ ಸ್ವತಃ ಅದೇ ಆಯುಶ್ ಸಚಿವಾಲಯ ಲಿಖಿತ ಉತ್ತರ ಕೊಟ್ಟಿದೆ. ತಮ್ಮ ಎನ್‌ಡಿಎ ಸರಕಾರದ ಪಾಲಿಸಿಯಂತೆ ಯಾವುದೇ ಮುಸ್ಲಿಂ ಅಭ್ಯರ್ಥಿಯನ್ನು ಆಯುಶ್ ತರಬೇತುಗಾರನಾಗಿ ನಿಯಮಿಸಲಾಗುವುದಿಲ್ಲ ಅಥವಾ ವಿದೇಶಕ್ಕೆ ನಿಯುಕ್ತಿಗೊಳಿಸಲಾಗುವುದಿಲ್ಲ, ಹಾಗೂ ಇಷ್ಟರವರೆಗೆ 3841 ಮುಸ್ಲಿಂ ಅಭ್ಯರ್ಥಿಗಳಿಂದ ಆಯುಶ್ ತರಬೇತಿದಾರರಾಗಿ ನಿಯುಕ್ತಿಗೊಳ್ಳಲು ಅರ್ಜಿಗಳು ಬಂದಿದ್ದು ಅದರಲ್ಲಿ ಒಬ್ಬನೇ ಮುಸ್ಲಿಮನಿಗೆ ಈವರೆಗೆ ನೌಕರಿ ಕೊಡಲು ಸಾಧ್ಯವಾಗಿಲ್ಲವೆಂದು ಆಯುಶ್ ಸಚಿವಾಲಯವೇ ತನ್ನ ಲಿಖಿತ ಉತ್ತರದಲ್ಲಿ ಹೇಳಿಕೊಂಡಿದೆ (ಇದರ ವರದಿ ಇಂಟರ್ನೆಟ್‌ನಲ್ಲಿ ಲಭ್ಯವಿದೆ).

ಅಷ್ಟೇ ಅಲ್ಲ, "ಮೋದಿ ಸರಕಾರದ ನೇಮಕಾತಿ ಪಾಲಿಸಿಯಂತೆ ಕೇವಲ ಆಯುಶ್ ಇಲಾಖೆ ಮಾತ್ರವಲ್ಲ, ಕೇಂದ್ರ ಸರಕಾರದ ಎಲ್ಲಾ ಇಲಾಖೆಗಳ ನೌಕರಿಗಾಗಿ ಮುಸ್ಲಿಮರನ್ನು ಸದ್ಯ ನೇಮಿಸಬಾರದೆಂದು ಮಾನವ ಸಂಪನ್ಮೂಲ ಸಚಿವಾಲಯ ನಿರ್ಧರಿಸಿದೆ" ಎಂದು ನಿರ್ಲಜ್ಜವಾಗಿ ಆರ್‌ಟಿಐ ಅರ್ಜಿಗೆ ಕೇಂದ್ರ ಸರಕಾರದ ಮಾನವ ಸಂಪನ್ಮೂಲ ಸಚಿವಾಲಯವೇ ಉತ್ತರಿಸಿದೆಯಂತೆ. ನಮ್ಮ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕಾಗಿನಿಂದ ಇಷ್ಟೊಂದು ನಿರ್ಲಜ್ಜವಾಗಿ ಯಾವುದೇ ಹಿಂದಿನ ಸರಕಾರ ಮುಸ್ಲಿಮರಿಗೆ ಸರಕಾರಿ ನೌಕರಿ ಕೊಡಬಾರದೆಂದು ತನ್ನ ಪಾಲಿಸಿಯಾಗಿದೆ ಎಂದು ಲಿಖಿತವಾಗಿ ಉತ್ತರಿಸುವ ಧಾರ್ಷ್ಟ್ಯ ತೋರಿರಲಿಲ್ಲ. ಕೇಂದ್ರ ಸರಕಾರವೇ ಹೀಗೆ ಬಹಿರಂಗ ಪಕ್ಷಪಾತ ತೋರಿದ ಮೇಲೆ ಸರಕಾರದ ಕೃಪಾಪೋಷಿತ ಖಾಸಗಿ ಉದ್ಯಮಿಗಳು ಮತ್ತು ಸಾರ್ವಜನಿಕರಂಗದ ಉದ್ಯಮಗಳು ಇದೇ ಮುಸ್ಲಿಂ ವಿರೋಧಿ ಪಾಲಿಸಿ ಅನುಸರಿಸದೇ ಇರುತ್ತವೆಯೇ?

ಮೇಲಾಗಿ ಮುಂದಿನ ತಿಂಗಳು ನಡೆಯಲಿರುವ ಐದು ರಾಜ್ಯಗಳ ಚುನಾವಣೆ ಮುಗಿಯುವವರೆಗೆ ಹೆಜ್ಜೆಹೆಜ್ಜೆಗೆ ಮುಸ್ಲಿಮರ ವಿರುದ್ಧ ಬಹಿರಂಗವಾಗಿ ಕತ್ತಿ ಮಸೆದು ದ್ವೇಷಪೂರ್ಣ ವಾತಾವರಣ ಸೃಷ್ಟಿಸುತ್ತಲೇ ಇರಬೇಕೆಂದು ಅಮಿತ್ ಶಹಾ ಕೊಟ್ಟ ಗುಪ್ತ ಕಾರ್ಯಸೂಚಿಯಂತೆಯೇ ದೇಶದೆಲ್ಲೆಡೆ ಬಿಜೆಪಿ ಸಂಸದರು ಮತ್ತು ನೇತಾರರು ಸ್ಥಳೀಯ ಸಂದರ್ಭಕ್ಕೆ ಅನುಗುಣವಾಗಿ ಹೊಸ ಹೊಸ ವಿವಾದ ಹುಟ್ಟುಹಾಕಿ ಮುಸ್ಲಿಮರ ವಿರುದ್ಧ ಸಮಾಜದಲ್ಲಿ ದ್ವೇಷ ಹುಟ್ಟಿಸಿ ಹಿಂದೂಗಳನ್ನು ತಮ್ಮ ಕಡೆ ಒಲಿಸಿಕೊಳ್ಳಬೇಕೆಂಬ ಗುಪ್ತ ಅಜೆಂಡಾ ಕಾರ್ಯಗತವಾಗುತ್ತಿದೆ ಎಂಬುದಕ್ಕೆ ತಾಜಾ ಸಾಕ್ಷಿಯೆಂದರೆ– ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತಿಹಾಸ ಪ್ರಸಿದ್ಧ ಪುತ್ತೂರು ಮಹಾಲಿಂಗೇಶ್ವರ ವಾರ್ಷಿಕ ಜಾತ್ರೆಯ ಆಹ್ವಾನ ಪತ್ರಿಕೆಯಲ್ಲಿ ಜಿಲ್ಲಾಧಿಕಾರಿ ಇಬ್ರಾಹಿಂರ ಹೆಸರು ಇದೆ ಎಂಬ ಮಾತ್ರಕ್ಕೆ ಅದರಿಂದ ಹಿಂದೂಗಳ ಧಾರ್ಮಿಕ ಭಾವನೆಗಳಿಗೆ ನೋವಾಗಿದೆ ಎಂದು ಒಬ್ಬ ಕೇಸರಿ ಜೈನ ಹುಯಿಲೆಬ್ಬಿಸಿದ್ದಾನೆ. ಹಿಂದಿನ ವರ್ಷವೂ ಇದೇ ಮುಸ್ಲಿಂ ಜಿಲ್ಲಾಧಿಕಾರಿಯ ಹೆಸರು ಆಹ್ವಾನ ಪತ್ರಿಕೆಯಲ್ಲಿ ಇದ್ದರೂ ಆಗ ಯಾರೂ ಆಕ್ಷೇಪ ಎತ್ತಿರಲಿಲ್ಲ. ಆದರೆ ಈ ವರ್ಷ ಇಲ್ಲಿಯ ಒಬ್ಬ ಕೇಸರಿ ಜೈನನೇ ಆಕ್ಷೇಪ ಎತ್ತಿದ್ದಾನೆ ಎಂದರೆ ಇದು ಜೈನ ಅಮಿತ್‌ಶಾನ ಗುಪ್ತ ಕಾರ್ಯಸೂಚಿಯ ಅನುಷ್ಠಾನ ಎನ್ನುವುದು ಸ್ಪಷ್ಟ.

ವೈದಿಕ ಧರ್ಮದ ವಿರುದ್ಧ ಮೊಟ್ಟ ಮೊದಲು ಬಂಡೆದ್ದು ಹುಟ್ಟಿದ ನಿರೀಶ್ವರವಾದಿ ಧರ್ಮವೇ ಜೈನ ಧರ್ಮ. ಆದ... ಈಗ ವೈದಿಕ ಧರ್ಮದ ಬಗ್ಗೆ ಅತಿಹೆಚ್ಚು ದುರಭಿಮಾ... ತೋರಿಸಿ ಅಡಿಗಡಿಗೆ ಮುಸ್ಲಿಂ-ಕ್ರೈಸ್ತರ ವಿರುದ್ಧ ಸಮಾಜದ... ದ್ವೇಷ ಹುಟ್ಟು ಹಾಕುತ್ತಿರುವವರೂ ಈ ಜೈನರೇ ಆಗಿರುವುದು ವಿಪರ್ಯಾಸ.

ಪುತ್ತೂರು ಮಹಾಲಿಂಗೇಶ್ವರ ಜಾತ್ರೆಯ ಆಮಂತ್ರಣ ಪತ್ರಿಕೆಯಲ್ಲಿ ಮುಸ್ಲಿಂ ಜಿಲ್ಲಾಧಿಕಾರಿಯ ಹೆಸರು ಕೇಸರಿಗಳಿಗೆ ವರ್ಜ್ಯವಂತೆ, ಆದರೆ ಇದೇ ಊರಿನ ಒಬ್ಬ ಭೂಗತ ದೊರೆ ಕಳೆದ ವರ್ಷ ಇದೇ ದೇವಸ್ಥಾನಕ್ಕೆ ಮಾನವ ರಕ್ತ ಮೆತ್ತಿದ ತನ್ನ ಪಾಪದ ಹಣದಿಂದ ಹೊಸ ರಥ ಮಾಡಿಸಿ ಕೊಟ್ಟಾಗ ಅದನ್ನು ಸ್ವೀಕರಿಸಿದ ಕೇಸರಿ ಪಡೆಗಳು ಅವನನ್ನು ಹೆಗಲ ಮೇಲೆ ಹೊತ್ತು ಊರೆಲ್ಲಾ ಮೆರವಣಿಗೆ ಮಾಡಿದ್ದು ಮತ್ತು ಬ್ರಾಹ್ಮಣ ಅರ್ಚಕರೂ ಅವನ ಕಾಲುಮುಟ್ಟಿ ನಮಸ್ಕರಿಸಿದ್ದು ಮಾತ್ರ ಹಿಂದೂ ಧರ್ಮದ ದೊಡ್ಡ ವಿಡಂಬನೆಯಾಗಿತ್ತು, ಆಗ ಇಲ್ಲಿ ನರೇಂದ್ರ ಮೋದಿ ಇದ್ದಿದ್ದರೆ ಅವರು "ಅಂಡರ್‌ವರ್ಲ್ಡ್‌ನವರು ಗಡಿ ಕಾಯುವ ಸೈನಿಕರಿಗಿಂತ ಹೆಚ್ಚು ಸಾಹಸಿಗಳು" ಎಂದು ಭೂಗತ ದೊರೆಗಳನ್ನು ಖಂಡಿತ ಹೊಗಳದೇ ಇರುತ್ತಿರಲಿಲ್ಲ.

ಫೆಬ್ರವರಿ 2014 ರಲ್ಲಿ ಪ್ರಧಾನಿ ಅಭ್ಯರ್ಥಿಯಾಗಿ ಆಯ್ಕೆಗೊಂಡು ಮೋದಿ ದಿಲ್ಲಿಗೆ ಹೋದಾಗ ಅಲ್ಲಿ ಒಂದು ವ್ಯಾಪಾರಿಗಳ ಸಭೆಯಲ್ಲಿ ಇದೇ ಮೋದಿ ಹೇಳಿದ್ದೇನು ಗೊತ್ತೇ? "ವ್ಯಾಪಾರಿಗಳು ದೇಶ ಕಾಯುವ ಸೈನಿಕರಿಗಿಂತ ಹೆಚ್ಚು ಸಾಹಸಿಗಳು" ಎಂಬುದಾಗಿ. (27 ಫೆಬ್ರವರಿ 2014ರ ಈ ವಿಡಿಯೋ ಯೂಟ್ಯೂಬಿನಲ್ಲಿ ಈಗಲೂ ಇದೇ). ಇದುವೇ ಮೋದಿಗೆ ಇರುವ (ನಕಲಿ) ದೇಶಭಕ್ತಿ ಮತ್ತು ನಮ್ಮ ವೀರ ಸೈನಿಕರ ಬಗ್ಗೆ ಇರುವ (ಅ)ಗೌರವ.

■ಆರ್.ಬಿ.ಶೇಣವ, ಮಂಗಳೂರು

ಸಾವಿನ ಸುತ್ತ ತಾಯ್ತನದ ಕವಚ ಬ್ಯೂನಸ್ ಐರಿಸ್‌ನ ಪ್ಲಾಜಾ ಡಿ ಮೆಯೊ

ಕಳೆದ ತಿಂಗಳು ಅರ್ಜೆಂಟೈನಾದ ಬ್ಯೂನಸ್ ಐರಿಸ್‌ನಲ್ಲಿ ಸುತ್ತಾಡುವಾಗ ಓವರ್ ಬ್ರಿಡ್ಜ್‌ಗಳ ತಳಭಾಗದಲ್ಲಿ ಸಾವಿರಾರು ಭಾವಚಿತ್ರಗಳು ಅಂಟಿಸಲ್ಪಟ್ಟಿದ್ದು ಗಮನಕ್ಕೆ ಬಂತು. ಮುಖ್ಯ ಚೌಕ ಪ್ಲಾಜಾ ಡಿ ಮೆಯೊ ಬಳಿ ಕುತೂಹಲಕರ ಸಂಗತಿಯೊಂದು ಎದುರಾಯಿತು. ಪ್ರತಿ ಗುರುವಾರ ಮಧ್ಯಾಹ್ನ 3.30ಕ್ಕೆ ಅಮ್ಮಂದಿರು ಅಲ್ಲಿ ಸೇರುತ್ತಾರೆ; ವಿಶ್ವಾದ್ಯಂತ ನಡೆವ ಮಾನವ ಹಕ್ಕು ಉಲ್ಲಂಘನೆಗಳನ್ನು ಪ್ರತಿಭಟಿಸುತ್ತಾರೆ; ಕಳೆದ 40 ವರ್ಷಗಳಿಂದ ಇದು ನಡೆಯುತ್ತಿರುವುದರಿಂದ ಚೌಕಕ್ಕೆ 'ಅಮ್ಮಂದಿರ ಚೌಕ' ಎಂಬ ಹೆಸರು ಬಂದಿದೆ ಎಂದು ಗೈಡ್ ಚುಟುಕಾಗಿ ಹೇಳಿದಳು. ತಮ್ಮ ಹೆಮ್ಮೆಯ ಸ್ಮಾರಕಗಳ ತೋರಿಸುತ್ತಿದ್ದವಳಿಗೆ ಇದು ಕಿರುಂಗುಳಿಗೆಯಂತೆ ಕಂಡಿರಬೇಕು, ನನ್ನ ಪ್ರಶ್ನೆಗಳಿಗೆ ಉತ್ತರಿಸುತ್ತ ಅವಳ ಪ್ರಸನ್ನತೆ ಮಾಯವಾಯಿತು. ಆ ಕಡೆಯಿಂದ ಟುಪಾಕ್ ಅಮಾರು ಸಂಘಟನೆಯ ಬುಡಕಟ್ಟು ಮಹಿಳೆ ಮಿಲಾಗ್ರಿಸ್ ಸಾಲಾ ಬಿಡುಗಡೆಗಾಗಿ ಆಗ್ರಹ ಕೇಳಿಬರತೊಡಗಿತ್ತು.

'ಮದರ್ಸ್ ಆಫ್ ಪ್ಲಾಜಾ ಡಿ ಮೆಯೊ' ಅಹಿಂಸಾತ್ಮಕ ಹಾಗೂ ಪರ್ಯಾಯ ಹೋರಾಟದ ಮಾದರಿ ಸಂಘಟನೆ. ಅದು ಸಾವಿನ ಸುತ್ತ ಹೆಣೆಯಲಾದ ತಾಯ್ತನದ ವರ್ತುಲ. ಅಧ್ಯಕ್ಷೀಯ ಭವನ 'ಕಾಸಾ ರೋಸಾಡಾ' (ಪಿಂಕ್ ಹೌಸ್) ಎದುರು ಪ್ರತಿವಾರ ಮಹಿಳೆಯರು ಕಲೆತು ಆಳುವವರ ಹಿಂಸಾತ್ಮಕ ನಡೆಗಳನ್ನು ಪ್ರಶ್ನಿಸುವ ಜಾಗ. ತಾಯ್ತನಕ್ಕೆ ಹೊಸ ವ್ಯಾಖ್ಯೆ ಬರೆದ ಸ್ಥಳ.

ಸಾಂಪ್ರದಾಯಿಕ ನೈತಿಕ-ಧಾರ್ಮಿಕ-ನ್ಯಾಯಿಕ ವ್ಯವಸ್ಥೆಯಿಂದಾಗಲೀ, ಆಳುವ ಪ್ರಭುತ್ವದಿಂದಾಗಲೀ ತಮಗೆ ಸಿಗಬೇಕಾದ ನ್ಯಾಯ ಸಿಗುವುದಿಲ್ಲ ಎನಿಸಿದಾಗಲೆಲ್ಲ ಮಹಿಳೆಯರು ತಮ್ಮದೇ ನ್ಯಾಯವ್ಯವಸ್ಥೆಯನ್ನು ಅನ್ವೇಷಿಸಿಕೊಂಡಿದ್ದಾರೆ. ಅಂಥ ನ್ಯಾಯಹೋರಾಟಕ್ಕಾಗಿ ಅಮಾಯಕ ತಾಯಂದಿರ ದುಃಖಾರ್ತ ಘಳಿಗೆಯಲ್ಲಿ 'ಮದರ್ಸ್ ಆಫ್ ಪ್ಲಾಜಾ ಡಿ ಮೆಯೊ' ರೂಪುಗೊಂಡಿತು. ಅರ್ಜೆಂಟೀನಾ ಚರಿತ್ರೆಯಲ್ಲಿ 1976ರಿಂದ 1983ರವರೆಗಿನ ಏಳೆಂಟು ವರ್ಷಗಳ ಅರಾಜಕತೆ 'ಡರ್ಟಿ ವಾರ್' ಎಂದು ಗುರುತಿಸಲ್ಪಡುತ್ತದೆ. ಜೀವಗಳು ಹರಣವಾದ; ಕುಟುಂಬಗಳು ಛಿದ್ರಗೊಂಡ, ಮಾನವೀಯತೆ ಕ್ಷೀಣಿಸಿದ ಅವಧಿ ಅದು. ಆಗ 'ರಾಷ್ಟ್ರೀಯ ಪುನರ್ನಿರ್ಮಾಣ ಪ್ರಕ್ರಿಯೆ'ಯನ್ನು ಶುರುಮಾಡಿದ ಸೇನಾಡಳಿತ ದಿಟ್ಟ ದನಿಗಳನ್ನು ಶಾಶ್ವತವಾಗಿ ಇಲ್ಲವಾಗಿಸಿತು. ಒಂದು ವರ್ಷದಲ್ಲಿ ಹಲವಾರು ಕಾರ್ಯಕರ್ತರು, ಅದರಲ್ಲೂ ಸಮಾಜವಾದಿ ಒಲವಿದ್ದ ವೈದ್ಯ, ವಕೀಲ, ವಿದ್ಯಾರ್ಥಿ, ನಾಗರಿಕರು ಇದ್ದಕ್ಕಿದ್ದಂತೆ ಕಾಣೆಯಾದರು. ದುಃಖತಪ್ತ ತಾಯಂದಿರು ತಮ್ಮ ಮಕ್ಕಳು ಎಲ್ಲಿ ಹೋದರೆಂದು, ಯಾರನ್ನು ಕೇಳುವುದೆಂದು ತಿಳಿಯದೇ ಕಂಗೆಟ್ಟರು.

ಆಗ ಮಗ-ಸೊಸೆಯನ್ನು ಕಳೆದುಕೊಂಡ ಅಜುಸೆನಾ ವಿಲ್ಲೆಂಟ ಎಂಬಾಕೆ ಹತ್ತಾರು ತಾಯಂದಿರೊಂದಿಗೆ ಮೇ ಸ್ಕ್ವೇರ್ ಕಡೆ ಹೊರಟರು. ಭಿನ್ನ ಹಿನ್ನೆಲೆಗಳ ಅವರೆಲ್ಲ ದುಃಖವನ್ನು ಸಾಮೂಹಿಕವಾಗಿ ಹಂಚಿಕೊಳ್ಳಲು, ಪರಸ್ಪರ ಚರ್ಚಿಸಲು ಒಗ್ಗೂಡಿದರು. ಏನಾಗುತ್ತಿದೆ ಎನ್ನುವುದರ ಸ್ಪಷ್ಟ ಅರಿವು ಆಗಲೇ ಅವರಿಗೆ ದೊರೆತದ್ದು. ಪೊಲೀಸರೇ ಕಾರ್ಯಕರ್ತರನ್ನು ಗುರುತಿಸಿ, ಅಪಹರಿಸಿ ಅನಾಮಿಕ ಸ್ಥಳಗಳಿಗೆ ಒಯ್ದಿದ್ದರು. ಭಯಾನಕ ಹಿಂಸೆ ನೀಡಿ, ಕೊಂದು ದೂರದ ಗ್ರಾಮೀಣ ಪ್ರದೇಶಗಳಲ್ಲಿ, ಗುರುತಿಲ್ಲದ ಸಾಮೂಹಿಕ ಗೋರಿಗಳಲ್ಲಿ ಹುಗಿದಿದ್ದರು. ನಾಪತ್ತೆಯಾದ ಗರ್ಭಿಣಿ ಹೆಂಗಸರು ಹಿಂಸಾಕೇಂದ್ರಗಳಲ್ಲಿ ಹೆತ್ತ ಮಕ್ಕಳನ್ನು ಯಾರ್‍ಯಾರಿಗೋ ದತ್ತು ಕೊಟ್ಟು, ಬಾಣಂತಿಯರನ್ನೂ ಕೊಲ್ಲಲಾಗಿತ್ತು. ದತ್ತು ಕೊಟ್ಟ 256 ಎಳೆಗೂಸುಗಳು ನಾಪತ್ತೆಯಾಗಿದ್ದವು.

ಕರಳು ಕತ್ತರಿಸುವ ದುಃಖ, ಒತ್ತರಿಸಿ ಬರುವ ಅಸಹಾಯಕ ಸಿಟ್ಟು, ಆಳುವವರ ಕಣ್ಣಿಗೆ ಬೀಳುವುದೆ ಅಪಾಯಕಾರಿ ಎನ್ನುವಂತೆ ಮಾಡಿದ್ದ ಮಿಲಿಟರಿ ಆಡಳಿತ – ಮುಂದೇನು ಮಾಡುವುದು? ವಾರದಿಂದ ವಾರಕ್ಕೆ ನೂರಾರು ಮಹಿಳೆಯರು ಸೇರಿಕೊಂಡಾಗ ತಮ್ಮ ಬಲದ ಅರಿವಾಯಿತು. ಪ್ರತಿವಾರ ಮೆರವಣಿಗೆ, ಪ್ರದರ್ಶನ ನಡೆಸಿ ಪ್ರಭುತ್ವದ ಹಿಂಸೆಯನ್ನು ಬಿಂಬಿಸಿದರು. ಹಿಂಸೆಯನ್ನು ಕಂಡೂ ಸುಮ್ಮನಿರುವ ನಿರ್ಲಿಪ್ತತೆಯನ್ನು ವಿರೋಧಿಸಿದರು. ಅರ್ಜೆಂಟೀನಾದ ಮಾನವಹಕ್ಕು ಉಲ್ಲಂಘನೆಯನ್ನು ಹೊರಜಗತ್ತಿಗೆ ತಿಳಿಸಿದರು.

ಸರ್ಕಾರ ಅವರನ್ನು ಹುಚ್ಚು ಹೆಂಗಸರು ಎಂದು ಬಣ್ಣಿಸಿತು!

'ನಾಪತ್ತೆಯಾದವರ' ಸಂಖ್ಯೆ ಬೆಳೆಯುತ್ತಾ ಹೋದಂತೆ ನಾಪತ್ತೆಯಾದವರ ಕತೆಗಳೂ ಬೆಳೆದವು. 1977ರಲ್ಲಿ ಮಾನವ ಹಕ್ಕು ದಿನಾಚರಣೆಯಂದು ಕಾಣೆಯಾದವರ ಭಾವಚಿತ್ರ, ಹೆಸರುಗಳಿರುವ ಪತ್ರಿಕೆ ಪ್ರಕಟಿಸಿ ತಾಯಂದಿರು ಮಾಧ್ಯಮದ ಗಮನ ಸೆಳೆದರು. ಆದರೆ ಅದೇ ರಾತ್ರಿ ಈ ಸಂಘಟನೆ ಶುರುಮಾಡಿದವರಲ್ಲಿ ಒಬ್ಬರಾದ ಮಹಿಳೆ ಅಜುಸೆನಾರನ್ನು ಅವರ ಮನೆಯಿಂದ ಅಪಹರಿಸಿ ಎಸ್ಮಾ ಕ್ಯಾಂಪಿಗೆ ಒಯ್ಯಲಾಯಿತು. ಹಾಗೆ ಅಪಹರಿಸಲ್ಪಟ್ಟವರನ್ನು ಬರ್ಬರವಾಗಿ ಹಿಂಸಿಸಿ, ಮಾದಕ ದ್ರವ್ಯ ನೀಡಿ ಪ್ರಜ್ಞೆ ತಪ್ಪಿಸಿ, ಬಟ್ಟೆ ಬಿಚ್ಚಿ ಸಮುದ್ರ ಮಧ್ಯೆ ಬಿಸಾಡಲಾಗುತ್ತಿತ್ತು.

1978ರಲ್ಲಿ ಅರ್ಜೆಂಟೈನಾವು ಫುಟ್ಬಾಲ್ ವಿಶ್ವಕಪ್ ಆಯೋಜಿಸಿತು. ಇದೇವೇಳೆ ಸಂಘಟನೆಯ ಮತ್ತಿಬ್ಬರು – ಎಸ್ತರ್ ಮತ್ತು ಮಾರಿಯಾ ನಾಪತ್ತೆಯಾದರು. ಇಬ್ಬರು ಫ್ರೆಂಚ್ ಸನ್ಯಾಸಿನಿಯರಾದ ಲಿಯೊನಿ ಡುಕೆ ಮತ್ತವರ ಸೋದರಿ ಸೇರಿದಂತೆ ಹಲವರು ನಾಪತ್ತೆಯಾದರು. ಕೆಲವರ ದೇಹ ಅಟ್ಲಾಂಟಿಕ್ ತೀರದಲ್ಲಿ ವಿಕಾರಗೊಂಡು ಬಂದು ಬಿದ್ದರೆ ಮತ್ತೆ ಕೆಲವರ ದೇಹ ಪತ್ತೆಯಾಗಲೇ ಇಲ್ಲ. ಫ್ರಾನ್ಸ್ ಆ ನನ್‌ಗಳ ಪತ್ತೆ ತಿಳಿಸಲು ಒತ್ತಾಯಿಸಿ ವಿಶ್ವಸಂಸ್ಥೆಯ ತನಕ ವಿಷಯ ಕೊಂಡೊಯ್ದಿತು. ಮಿಲಿಟರಿ ಆಡಳಿತದ ವಿರುದ್ಧ ಒತ್ತಡ ಬೆಳೆದು ಅವರು ಒಂಭತ್ತು ಸಾವಿರ ಜನರನ್ನು ಅಪಹರಿಸಿದ್ದಾಗಿ ಒಪ್ಪಿಕೊಂಡರು. ಆದರೆ ಅಮ್ಮಂದಿರು ಅಪಹೃತರ ಸಂಖ್ಯೆ 30 ಸಾವಿರಕ್ಕೂ ಮಿಕ್ಕಿದೆ ಎಂದು ದಾಖಲೆ ಒದಗಿಸಿದರು.

ಪಾಪದ ಕೊಡ ತುಂಬಿತು. 1983ರಲ್ಲಿ ಅಂತೂ ಮಿಲಿಟರಿ ಆಳ್ವಿಕೆ ಕೊನೆಗೊಂಡು ಜನಪ್ರಿಯ ಸರ್ಕಾರ ಅಧಿಕಾರಕ್ಕೆ ಬಂತು.

ಆಗಲಾದರೂ ಸರ್ಕಾರ ತಮ್ಮ ಮಕ್ಕಳ ಕುರಿತ ಮಾಹಿತಿ ನೀಡಬಹುದೆಂದು ಅಮ್ಮಂದಿರು ಭಾವಿಸಿದರು. ಸರ್ಕಾರ ರಾಷ್ಟ್ರೀಯ ಆಯೋಗವೊಂದನ್ನು ರಚಿಸಿ ತನಿಖೆ, ಡಿಎನ್‌ಎ ಹೋಲಿಕೆ ಶುರುಮಾಡಿತು. ಮಿಲಿಟರಿಯ ಹಲವು ಉನ್ನತ ಅಧಿಕಾರಿಗಳು ಶಿಕ್ಷಿಸಲ್ಪಟ್ಟರು. ದತ್ತು ಕೊಟ್ಟ 31 ಮಕ್ಕಳು ತಂತಮ್ಮ ಕುಟುಂಬ ಸೇರಿದವು. ಕೆಲವು ಮಕ್ಕಳು ಸಾಕು ತಾಯ್ತಂದೆಯರು ಹಾಗೂ ಮೂಲ ಪಾಲಕರಿಂದ ಜಂಟಿಯಾಗಿ ಬೆಳೆಸಲ್ಪಟ್ಟವು.

2005ರಲ್ಲಿ ಗುರುತಿಸದ ಗೋರಿಗಳಲ್ಲಿದ್ದ ದೇಹವನ್ನು ಫೋರೆನ್ಸಿಕ್ ತಜ್ಞರು ಪರೀಕ್ಷೆಗೊಳಪಡಿಸಿದಾಗ ನಾಪತ್ತೆಯಾಗಿದ್ದ ಸಂಘಟನೆಯ ಮೂವರು ಮಹಿಳೆಯರ ಶವ ಪತ್ತೆಯಾಯಿತು. ಅಜುಸೆನಾ ದೇಹವನ್ನು ಸುಟ್ಟು ಬೂದಿಯನ್ನು ಮೇ ಚೌಕದಲ್ಲಿ ಸಮಾಧಿ ಮಾಡಲಾಯಿತು. 'ನನ್ನಮ್ಮ ಹುಟ್ಟಿದ್ದು ಈ ಸಾರ್ವಜನಿಕ ಸ್ಥಳದಲ್ಲಿ, ಅವಳು ಬದುಕಿರುವುದು ಇಲ್ಲಿಯೇ. ಅದಕ್ಕೇ ಅವಳ ಅಂತಿಮ ಅವಶೇಷಗಳು ಇಲ್ಲಿಯೇ ಇರಲಿ' ಎಂದು ಅವರ ಮಗಳು ಹೇಳಿದಳು. ಸಂಘಟನೆಯು ಹಲವಾರು ರಾಷ್ಟ್ರೀಯ, ಅಂತಾರಾಷ್ಟ್ರೀಯ ಪ್ರಶಸ್ತಿ ಪಡೆಯಿತು.

ನಂತರ ಬಹುಪಾಲು ಸಂಘಟನೆಗಳಿಗೆ ಆಗುವಂತೆ ಇಲ್ಲೂ ಆಯಿತು. 1986ರ ಹೊತ್ತಿಗೆ ಈ ಗುಂಪು ಒಡೆಯಿತು. ಒಂದು ಭಾಗವು ತಮ್ಮ ಮಕ್ಕಳ ಮಾಹಿತಿ, ಅಂತಿಮ ಅವಶೇಷಗಳನ್ನು ಪಡೆಯಲಷ್ಟೇ ಪ್ರಯತ್ನಿಸಿತು. ಅಧ್ಯಕ್ಷರಿಗೆ ಹತ್ತಿರದವರಾಗಿ ಒಂದು ಪತ್ರಿಕೆ, ರೇಡಿಯೊ ಕೇಂದ್ರ ಹಾಗೂ ವಿಶ್ವವಿದ್ಯಾಲಯ ಶುರು ಮಾಡಿತು. ಸ್ಲಂವಾಸಿಗಳಿಗೆ ಮನೆ ಕಟ್ಟಿಕೊಡುವ ಸರ್ಕಾರಿ ಕಾರ್ಯಕ್ರಮದ ಸಂಚಾಲಕರಾಗಿ ಮಾತೆಯರು ಧನಸಹಾಯ ಪಡೆದರು. 2006ರ ಜನವರಿ 26ರಂದು ನಡೆಯುವುದು ತಮ್ಮ ಕೊನೆಯ ವಾರ್ಷಿಕ ಪ್ರದರ್ಶನವೆಂದೂ, 'ಶತ್ರುವು ಸರ್ಕಾರಿ ಕಚೇರಿಯೊಳಗಿಲ್ಲ' ಎಂದೂ ಅದು ಘೋಷಿಸಿತು.

ಅಂದಹಾಗೆ ನಮ್ಮ ಗೈಡ್ ಈ ಗುಂಪಿನ ಮೊಮ್ಮಗಳು.

ಸಂಘಟನೆಯ ಮತ್ತೊಂದು ಭಾಗ ತಮ್ಮ ಮಕ್ಕಳ ರಾಜಕೀಯ ಅಜೆಂಡಾ ಮುಂದುವರೆಸಲು ನಿರ್ಧರಿಸಿತು. ಈ ಕ್ರಾಂತಿಕಾರಕ ಗುಂಪು ಸರ್ಕಾರದ ಸಹಾಯಧನ, ಪರಿಹಾರ ನಿರಾಕರಿಸಿ ಅರ್ಜೆಂಟೈನಾದ ರಾಜಕೀಯ ಸಂಸ್ಕೃತಿಯಲ್ಲಿ ಆಮೂಲಾಗ್ರ ಬದಲಾವಣೆಯಾಗಬೇಕೆಂದು ಬಯಸಿತು. ಅವರಿಗೆ ಕ್ಯೂಬಾ ಕ್ರಾಂತಿಯನ್ನು ಆದರ್ಶವಾಗಿಟ್ಟುಕೊಂಡಿದ್ದ ತರುಣರ ಗುಂಪಿನ ಬೆಂಬಲ ದೊರೆಯಿತು. ಈ ತಾಯಂದಿರು ನ್ಯೂಯಾರ್ಕ್ ವರ್ಲ್ಡ್ ಟ್ರೇಡ್ ಸೆಂಟರ್ ಮೇಲಿನ ಉಗ್ರಗಾಮಿಗಳ ದಾಳಿಯನ್ನು 'ಅಮೆರಿಕದಿಂದ ಅನ್ಯಾಯಕ್ಕೊಳಗಾದ ನಾಗರಿಕ ಗುಂಪುಗಳ ಹತಾಶ ಪ್ರಯತ್ನ' ಎಂದು ಬಣ್ಣಿಸಿ ವಿವಾದಕ್ಕೊಳಗಾದರು.

'ಮೊದಲು ಏಕಾಂಗಿಯಾಗಿ ಅಳುತ್ತಿದ್ದೆವು. ಈಗ ಸಾಮೂಹಿಕವಾಗಿ ದುಃಖಿಸುವುದು ಕಲಿತಿದ್ದೇವೆ.'


ಈ ಸಂಘಟನೆ ಹಲವು ದೇಶಗಳ ಅಮ್ಮಂದಿರನ್ನು ಪ್ರಭಾವಿಸಿತು. ನಾನಾಕಾರಣಗಳಿಗಾಗಿ ಆಳುವವರ ಹಿಂಸೆಗೆ ಮಕ್ಕಳನ್ನು ಕಳಕೊಂಡವರ ಹೋರಾಟ ಮಾದರಿಗಳನ್ನೂ ಸೃಷ್ಟಿಸಿತು. ಅಂಥವುಗಳಲ್ಲಿ ಕೆಲ ಸಂಘಟನೆಗಳಿವು:

- ಇರಾನಿನ ಜೈಲುಗಳಲ್ಲಿ ರಾಜಕೀಯ ಬಂಧಿಗಳ ಸಾಮೂಹಿಕ ಹತ್ಯೆಯನ್ನು ವಿರೋಧಿಸಿ 1981ರಿಂದ ಶುರುವಾದ ಸಂಘಟನೆ ಮದರ್ಸ್ ಆಫ್ ಕಾವರಾನ್. ಪ್ರತಿ ತಿಂಗಳ ಮೊದಲ ಶುಕ್ರವಾರ ಕಾವರಾನಿನ ಸಾಮೂಹಿಕ ಗೋರಿಯ ಬಳಿ ಅವರ ಪ್ರದರ್ಶನ. ಈ ಗುಂಪು 2009ರಿಂದ ಇರಾನಿನಲ್ಲಿ ಶುರುವಾದ 'ಮೌರ್ನಿಂಗ್ ಮದರ್ಸ್' ಅಥವಾ 'ಮದರ್ಸ್ ಆಫ್ ಲಾಲೇಹ್ ಪಾರ್ಕ್' ಜೊತೆ ಸೇರಿತು. 2009ರ ಅಧ್ಯಕ್ಷೀಯ ಚುನಾವಣೆ ವೇಳೆ ಸಂಗಾತಿ-ಮಕ್ಕಳನ್ನು ಕಳೆದುಕೊಂಡ ಮಹಿಳೆಯರು ಪ್ರತಿ ಶನಿವಾರ ಸಂಜೆ 7 ರಿಂದ 8ರ ತನಕ ಟೆಹ್ರಾನಿನ ಲಾಲೇಹ್ ಪಾರ್ಕಿನಲ್ಲಿ ಕಪ್ಪುಬಟ್ಟೆ ಧರಿಸಿ ತಮ್ಮವರ ಸಾವು, ಬಂಧನ, ನಾಪತ್ತೆಗೆ ಸರ್ಕಾರ ಉತ್ತರದಾಯಿತ್ವ ಹೊಂದಿದೆಯೆಂದು ಪ್ರತಿಪಾದಿಸಿ ನ್ಯಾಯ ಕೇಳುತ್ತಾರೆ. ಮರಣದಂಡನೆ ರದ್ದುಗೊಳಿಸಲು ಆಗ್ರಹಿಸುತ್ತಾರೆ. ನೊಬೆಲ್ ವಿಜೇತೆ ಶಿರೀನ್ ಎಬಾದಿ ಈ ಗುಂಪಿನವರು.
- 1988ರ ಜನವರಿಯಲ್ಲಿ ಜೆರುಸಲೇಂನ ಇಸ್ರೇಲಿ ಮಹಿಳೆಯರಿಂದ ಶುರುವಾದ 'ವಿಮೆನ್ ಇನ್ ಬ್ಲ್ಯಾಕ್' ಕಪ್ಪು ಉಡುಗೆಯ ಮಹಿಳೆಯರ ಯುದ್ಧವಿರೋಧಿ ಸಂಘಟನೆ. ಅರ್ಜೆಂಟೈನಾದ ಅಹಿಂಸಾತ್ಮಕ ಪ್ರತಿರೋಧದಿಂದ ಸ್ಫೂರ್ತಿ ಪಡೆದ ಇಸ್ರೇಲಿ ಮಹಿಳೆಯರು ಪ್ರತಿ ಶುಕ್ರವಾರ ಜೆರುಸಲೇಂನ ಹಗಾರ್ ಸ್ಕ್ವೇರ್‌ನಲ್ಲಿ ಮಧ್ಯಾಹ್ನ ಒಂದರಿಂದ ಎರಡರ ತನಕ 'ಸ್ಟಾಪ್ ಆಕ್ಯುಪೇಷನ್' ಎಂಬ ಪ್ಲಕಾರ್ಡ್ ಹಿಡಿದು ಮೌನವಾಗಿ ನಿಂತರು. ಇಸ್ರೇಲಿನ ಇತರ ನಗರಗಳಲ್ಲೂ ವಾರಕ್ಕೊಮ್ಮೆ ಮಹಿಳೆಯರು ನಗರದ ಚೌಕಗಳಲ್ಲಿ ಹೆದ್ದಾರಿ ಜಂಕ್ಷನ್‌ಗಳಲ್ಲಿ ಮೌನವಾಗಿ ಕಪ್ಪುಬಟ್ಟೆ ಧರಿಸಿ ನಿಂತು ಜನರ ಗಮನ ಸೆಳೆದರು. 1993ರ ಓಸ್ಲೋ ಒಪ್ಪಂದದ ಬಳಿಕ ಇದು ಕಡಿಮೆಯಾಯಿತು.
- ಟರ್ಕಿಯ ಇಸ್ತಾನ್‌ಬುಲ್‌ನ 'ಸ್ಯಾಟರ್ಡೆ ಮದರ್ಸ್' ಪ್ರತಿ ಶನಿವಾರ ಮಧ್ಯಾಹ್ನ 12 ಗಂಟೆಗೆ ಅರ್ಧ ತಾಸು ಅವಧಿಗೆ 1995ರಿಂದ ಸೇರುತ್ತ ಮೌನ ಜಾಗೃತಿ ಮಾಡುತ್ತಿದ್ದಾರೆ. 80-90ರ ದಶಕಗಳ ಕ್ಷಿಪ್ರಕ್ರಾಂತಿ ಮತ್ತು ಅರಾಜಕ ಆಡಳಿತದ ವೇಳೆ 'ನಾಪತ್ತೆ'ಯಾದವರ ಮಹಿಳಾ ಸಂಬಂಧಿಗಳು 'ಮೊದಲು ಏಕಾಂಗಿಯಾಗಿ ಅಳುತ್ತಿದ್ದೆವು. ಈಗ ಸಾಮೂಹಿಕವಾಗಿ ದುಃಖಿಸುವುದು ಕಲಿತಿದ್ದೇವೆ' ಎನ್ನುತ್ತಾರೆ.
- ಕ್ಯೂಬಾ ಹವಾನಾದಲ್ಲಿ ಜೈಲಿಗೆ ಕಳಿಸಲ್ಪಟ್ಟ ಭಿನ್ನಮತೀಯರ ಕುಟುಂಬದ ಮಹಿಳೆಯರು 'ಲೇಡೀಸ್ ಇನ್ ವೈಟ್'. ಅವರು 2003ರಿಂದ ಪ್ರತಿ ಭಾನುವಾರ ಬಿಳಿಬಟ್ಟೆ ಧರಿಸಿ ಮೌನವಾಗಿ ನಡೆಯುತ್ತಾರೆ.
- ಚೀನಾದಲ್ಲಿ 1989ರಲ್ಲಿ ಟಿಯಾನಾನ್ಮನ್ ಸ್ಕ್ವೇರ್ ಪ್ರತಿಭಟನೆ ವೇಳೆ ಮರಣಿಸಿದ ಹುಡುಗರ ತಾಯಂದಿರ ಗುಂಪು ಟಿಯಾನಾನ್ಮನ್ ಮದರ್ಸ್. ಇದು ಚೀನಾದಲ್ಲಿ ಪ್ರಜಾಪ್ರಭುತ್ವ ಮೌಲ್ಯಗಳು ಬರಬೇಕೆಂದು ಪ್ರತಿಪಾದಿಸುತ್ತದೆ. ಸಾರ್ವಜನಿಕವಾಗಿ ಆ ಘಟನೆಯ ವಿಚಾರಣೆ; ಶಾಂತಿಯುತ ದುಃಖಾಚರಣೆಗೆ ಅವಕಾಶ; ದೇಶ-ವಿದೇಶಗಳಿಂದ ಪರಿಹಾರ ಪಡೆಯಲು ಅವಕಾಶ; ಬಂಧಿಸಲ್ಪಟ್ಟವರ ಬಿಡುಗಡೆ; ಮರಣದಂಡನೆ ತಡೆ ಮೊದಲಾದ ಬೇಡಿಕೆಗಳನ್ನದು ಮುಂದಿಟ್ಟಿದೆ. ಆದರೆ ಚೀನಾ ಸರ್ಕಾರ ಈ ಗುಂಪು 'ಪ್ರತಿಕ್ರಾಂತಿಗೆ ಪೂರಕ' ಎಂದು ಭಾವಿಸಿ ಸಂಘದ ಸ್ಥಾಪಕಿ ಡಿಂಗ್ ಜಿಲಿನ್‌ರ ಬಂಧಿಸಿ ಕಮ್ಯುನಿಸ್ಟ್ ಪಕ್ಷದಿಂದ ಉಚ್ಚಾಟಿಸಿದೆ.


* * *

ಮಹಿಳಾ ಚಳವಳಿ ಎಂಬುದೊಂದು ಸಂಭವಿಸುತ್ತಿದೆಯೆ? ಅದರ ಸ್ವರೂಪ, ಶೈಲಿ ಯಾವುದು? ಅದರ ನಾಳೆ ಹೇಗಿರಬಹುದು? ರೂಪುಗೊಳ್ಳಲು ಇರುವ ಮುಕ್ತ ಅವಕಾಶ ಎಷ್ಟು? ವಿದ್ಯೆ-ಸಂಪರ್ಕ-ಸಂಪನ್ಮೂಲಕ್ಕೆ ಮೊದಲಿಗಿಂತ ಹೆಚ್ಚು ಅವಕಾಶವಿದ್ದರೂ ಮಹಿಳಾ ಸಂಘಟನೆ ಕಟ್ಟಿ ಬೆಳೆಸುವುದು ಏಕೆ ಕಷ್ಟವಾಗುತ್ತಿದೆ? ಮುಂತಾದ ಪ್ರಶ್ನೆಗಳು ಮುನ್ನೆಲೆಗೆ ಬರುತ್ತಿರುವ ಈ ಹೊತ್ತು ಪ್ರತಿಭಟನಾ ಮಾದರಿಗಳು ಸವಕಲಾಗುತ್ತ ಸಾಂಕೇತಿಕವಾಗುತ್ತ ಹೋದಂತೆನಿಸುತ್ತಿರುವ ಈ ಹೊತ್ತು ಹೊಸ ಸ್ಥಳೀಯ, ಸರಳ ಹೋರಾಟ ಮಾದರಿಗಳು ಸೃಷ್ಟಿಯಾಗಬೇಕಿದೆ. ರಾಜಕೀಯ, ಸೈದ್ಧಾಂತಿಕ ಭಿನ್ನಾಭಿಪ್ರಾಯಗಳ ಬದಿಗಿರಿಸಿ ಮಹಿಳೆಯರು ಜೀವಪರ ಸಂಘಟನೆ ಕಟ್ಟಬೇಕಿದೆ. ಸ್ತ್ರೀವಾದವೆಂಬುದು ಕೇವಲ ಹಕ್ಕಿನ ಹೋರಾಟವಷ್ಟೇ ಅಲ್ಲ, ಎಲ್ಲವನ್ನು ಒಳಗೊಂಡು ನೇರ್ಪಡಿಸುವ ಭರವಸೆಯ ತಾಯ್ತನ. ಹಾಗಿರುತ್ತ ತಮ್ಮ ತರುಣ ಪ್ರತಿಭಾವಂತ ಮಕ್ಕಳನ್ನು ಸಮಾಜದ ಅಸೂಕ್ಷ್ಮ, ಅನ್ಯಾಯಗಳಿಗೆ ಕಳಕೊಂಡ ಭಾರತದ ತಾಯಂದಿರಿಗೆ ಅರ್ಜೆಂಟೈನಾ ಅಮ್ಮಂದಿರ ಮಾದರಿ ಕೈಬೀಸವಾಗಬಹುದಲ್ಲವೆ?

■ ಡಾ.ಎಚ್.ಎಸ್. ಅನುಪಮಾ, ಕವಲಕ್ಕಿ




ಅರ್ಜೆಂಟೀನಾದ 'ಅಮ್ಮಂದಿರ ಚೌಕ'



ಜೆರುಸಲೇಂನ 'ವಿಮೆನ್ ಇನ್ ಬ್ಲಾಕ್'




ಟರ್ಕಿಯ 'ಸ್ಯಾಟರ್ಡೆ ಮದರ್ಸ್'



ಕ್ಯೂಬಾದ 'ಲೇಡೀಸ್ ಇನ್ ವೈಟ್'.

ನಾಡು ಮತ್ತು ಭಾಷೆಗಳ ಮುಂದಿರುವ ಆತಂಕಗಳ

ಈ ವರ್ಷ ಹಂಪಿಯಲ್ಲಿರುವ ಕನ್ನಡ ವಿಶ್ವವಿದ್ಯಾಲಯದ ನುಡಿಹಬ್ಬದಲ್ಲಿ ಹಿರಿಯ ಚಿಂತಕ ಪುರುಷೋತ್ತಮ ಬಿಳಿಮಲೆ ಅವರು ಘಟಿಕೋತ್ಸವ ಭಾಷಣ ಮಾಡಬೇಕಿತ್ತು. ಅದಕ್ಕೆಂದು ಅವರು ತಯಾರಿ ಮಾಡಿಕೊಂಡು ದೆಹಲಿಯಿಂದ ಬಂದಿದ್ದರು. ಆದರೆ ಯಾರಿಗೂ ಗೊತ್ತಿಲ್ಲದ ಕಾರಣಕ್ಕೆ ಅವರು ತಮ್ಮ ಭಾಷಣವನ್ನು ಐದೇ ನಿಮಿಷಗಳಲ್ಲಿ ಮುಗಿಸಬೇಕೆಂದು ಆದೇಶಿಸಲಾಯಿತು. ಆದ್ದರಿಂದ ಬಿಳಿಮಲೆ ಅಂದು ಮಾಡಬೇಕಿದ್ದ ಘಟಿಕೋತ್ಸವ ಭಾಷಣದ ಪೂರ್ಣಪಾಠವನ್ನು ಇಲ್ಲಿ ನೀಡಿದ್ದೇವೆ.



ಕರ್ನಾಟಕದ ಘನತೆವೆತ್ತ ರಾಜ್ಯಪಾಲರೂ ಕನ್ನಡ ವಿಶ್ವವಿದ್ಯಾಲಯದ ಕುಲಾಧಿಪತಿಗಳೂ ಆಗಿರುವ ಶ್ರೀ ವಾಜುಬಾಯಿ ಪಟೇಲ ಅವರೇ, ಕರ್ನಾಟಕ ಸರ್ಕಾರದ ಸನ್ಮಾನ್ಯ ಉನ್ನತ ಶಿಕ್ಷಣ ಸಚಿವರೂ ವಿಶ್ವವಿದ್ಯಾಲಯದ ಸಮಕುಲಾಧಿಪತಿಗಳೂ ಆದ ಶ್ರೀ ಟಿ.ಬಿ. ಜಯಚಂದ್ರ ಅವರೇ, ಕನ್ನಡ ವಿಶ್ವವಿದ್ಯಾಲಯದ ಕುಲಪತಿಗಳಾದ ಪ್ರೊ. ಮಲ್ಲಿಕಾ ಘಂಟಿ ಅವರೇ, ಕುಲಸಚಿವರಾದ ಡಾ. ಪಾಂಡುರಂಗ ಬಾಬು ಅವರೇ, ಸಿಂಡಿಕೇಟ್ ಮತ್ತು ಶೈಕ್ಷಣಿಕ ಪರಿಷತ್ತಿನ ಸದಸ್ಯರೆ, ಇವತ್ತು ನಾಡೋಜ ಪ್ರಶಸ್ತಿಯನ್ನು ಸ್ವೀಕರಿಸಲು ಆಗಮಿಸಿರುವ ಮಹನೀಯರೇ, ವಿವಿಧ ನಿಕಾಯಗಳ ಡೀನರುಗಳೇ, ವಿಶ್ವವಿದ್ಯಾಲಯದ ಎಲ್ಲ ಉದ್ಯೋಗಿಗಳೆ, ಮಾಧ್ಯಮದ ಪ್ರತಿನಿಧಿಗಳೆ, ಮತ್ತು ಎಲ್ಲ ಕನ್ನಡ ಬಂಧುಗಳೇ,

ಮೊದಲಿಗೆ, ಈ ನುಡಿಹಬ್ಬದಲ್ಲಿ ವಿವಿಧ ಪದವಿಗಳನ್ನು ಸ್ವೀಕರಿಸುತ್ತಿರುವ ಎಲ್ಲ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಮತ್ತು ಸಂಶೋಧಕರಿಗೆ ಅಭಿನಂದನೆಗಳು. ಹಾಗೆಯೇ ನಾಡೋಜ ಪ್ರಶಸ್ತಿಗೆ ಭಾಜನರಾದ ಮಹನೀಯರಿಗೆ ಅಭಿವಂದನೆಗಳನ್ನು ಸಲ್ಲಿಸುತ್ತಿದ್ದೇನೆ. ತಮ್ಮ ಮಾರ್ಗದರ್ಶನದಲ್ಲಿ ಕನ್ನಡ ಮತ್ತು ಕರ್ನಾಟಕ ಇನ್ನಷ್ಟು ಆರೋಗ್ಯಕರವಾಗಿ ಬೆಳೆಯಲಿ ಎಂದು ಪ್ರಾಮಾಣಿಕವಾಗಿ ಆಶಿಸುತ್ತೇನೆ.

ನಾನು ಇಲ್ಲಿ ಕೆಲವು ಮಾತುಗಳನ್ನು ಹೇಳುವ ಹೊತ್ತಿಗೆ ಕನ್ನಡ ವಿಶ್ವವಿದ್ಯಾಲಯವು ಬೆಳ್ಳಿ ಹಬ್ಬದ ಹೊಸ್ತಿಲಲ್ಲಿ ಬಂದುನಿಂತಿದೆ. ಕಳೆದ 23 ವರ್ಷಗಳಲ್ಲಿ ಇಲ್ಲಿ ನಡೆದ ನುಡಿಹಬ್ಬಗಳಲ್ಲಿ ಅನೇಕ ಮಹನೀಯರುಗಳು ಕನ್ನಡ ಭಾಷೆಯ ಅಭಿವೃದ್ಧಿ ಮತ್ತು ವಿಸ್ತರಣೆಯ ಬಗೆಗೆ ಅತ್ಯಂತ ಮೌಲಿಕವಾದ ಮಾತುಗಳನ್ನು ಹೇಳಿದ್ದಾರೆ. ಅವು ನಮ್ಮ ಕನ್ನಡ ಪರ ಚಿಂತನಾಕ್ರಮಗಳ ಶಕ್ತಿಯನ್ನು ಪರಿಣಾಮಕಾರಿಯಾಗಿ ಅಭಿವ್ಯಕ್ತಿಸಿವೆ. ಇಲ್ಲಿ ಇದುವರೆಗೆ ಅತಿಥಿಗಳಾಗಿ ಭಾಗವಹಿಸಿದ ಹಿರಿಯ ವಿದ್ವಾಂಸರುಗಳು ನಮ್ಮ ಅಧ್ಯಯನ ಕ್ರಮದ ವಿಭಿನ್ನ ಶಿಸ್ತುಗಳಿಗೆ ಸೇರಿದ್ದಾರೆ. ಅವರೆಲ್ಲರೂ ಕನ್ನಡ ವಿಶ್ವವಿದ್ಯಾಲಯದ ಅಪೂರ್ವ ಸಾಧನೆಗಳ ಬಗ್ಗೆ ಬೆಳಕು ಚೆಲ್ಲಿರುವರಲ್ಲದೆ, ಅದು ಮುಂದೆ ಮಾಡಬೇಕಾದ ಕೆಲವು ಕೆಲಸಗಳ ಬಗ್ಗೆಯೂ ಮುನ್ಸೂಚನೆಗಳನ್ನು ನೀಡಿದ್ದಾರೆ. ಈ ಸಲಹೆಗಳಲ್ಲಿ ವಿಶ್ವವಿದ್ಯಾಲಯ ಎಷ್ಟನ್ನು ಅಂಗೀಕರಿಸಿದೆ, ಎಷ್ಟನ್ನು ನಿರಾಕರಿಸಿದೆ ಮತ್ತು ಎಷ್ಟನ್ನು ನಿರ್ಲಕ್ಷಿಸಿದೆ ಎಂಬುದನ್ನು ವಿಶ್ವವಿದ್ಯಾಲಯದ ಬೆಳ್ಳಿ ಹಬ್ಬದ ಸಂದರ್ಭದಲ್ಲಿ ಒಂದು ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಾದರೆ ಅದರಿಂದ ತುಂಬಾ ಪ್ರಯೋಜನವಾದೀತು.

1992ರಲ್ಲಿ ಈ ವಿಶ್ವವಿದ್ಯಾಲಯ ಆರಂಭಗೊಂಡಾಗ ಇಲ್ಲಿದ್ದದ್ದು ಬೆಣಚುಕಲ್ಲಿನ ಬೋಳುಗುಡ್ಡ ಮತ್ತು ನೀಲಿ ಪರದೆ ಹಾಸಿಕೊಂಡ ಕಮಲಾಪುರ ಕೆರೆ. ಆದರೆ ಈಗ ಈ ಕೆರೆಯಿಂದ ಸಾಕಷ್ಟು ನೀರು ಹರಿದಿದೆ, ಬೋಳುಗುಡ್ಡದ ಬೆಣಚುಕಲ್ಲುಗಳು ಹಸನಾದ ಕನಸುಗಳನ್ನು ಬಿತ್ತುತ್ತಾ ಹಸಿರು ಗಿಡಮರಗಳಿಗೆ ಆಸರೆ ನೀಡಿ ನಮ್ಮನ್ನು ಇಲ್ಲೀವರೆಗೆ ಕರೆದುತಂದಿದೆ. ಈ ನಡಿಗೆಯನ್ನು ಹತ್ತಿರದಿಂದ ಮತ್ತು ದೂರದಿಂದ, ಒಳಗಿನಿಂದ ಮತ್ತು ಹೊರಗಿನಿಂದ ಕಂಡವನು ನಾನು. ಹೀಗೆ ಈ ವಿಶ್ವವಿದ್ಯಾಲಯದ ಭಾಗವಾಗಿ ಬೆಳೆದ ನನ್ನನ್ನು ಇಲ್ಲಿಗೆ ಈಗ ಅತಿಥಿಯಾಗಿ ಕರೆದಿದ್ದೀರಿ. ಇದನ್ನು ಒಂದು ದೊಡ್ಡ ಗೌರವ ಎಂದು ನಾನು ಭಾವಿಸುತ್ತೇನೆ. ಆದರೆ ಇದು ಒಂದು ಬಗೆಯ ಕಷ್ಟವನ್ನೂ ತಂದುಕೊಟ್ಟಿದೆ. ಜೊತೆಗೆ ಓಡಾಡಿದ ಜನಗಳ ಮುಂದೆಯೇ ಅತಿಥಿಯಾಗಿ ಮಾತಾಡುವುದು ಸುಲಭವಲ್ಲ. ಈ ಸಂಕೋಚದಲ್ಲಿ ಕನ್ನಡ ಸಂಶೋಧನೆಗೆ ಸಂಬಂಧಿಸಿದಂತೆ ಕೇವಲ ಎರಡು ವಿಷಯಗಳನ್ನು ತಮ್ಮೊಡನೆ ಹಂಚಿಕೊಳ್ಳಬಯಸುತ್ತೇನೆ.

1. ಸಂಶೋಧಕರ ಮುಂದಿರುವ ಆತಂಕಗಳು, ಅಪಾಯಗಳು ಮತ್ತು ಸವಾಲುಗಳು

ಈ ವಿಶ್ವವಿದ್ಯಾಲಯವನ್ನು ಸಂಶೋಧನೆಗಾಗಿಯೇ ಕಟ್ಟಲಾಯಿತು. 'ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಮಟ್ಟದ ಸಂಶೋಧನಾ ಕೇಂದ್ರವಾಗಿ ಕಾರ್ಯ ನಿರ್ವಹಿಸುವುದು ಇದರ ಗುರಿ' ಎಂದು ಮೊದಲಿನಿಂದಲೂ ಹೇಳುತ್ತಾ ಬರಲಾಗಿದೆ. ಈ ಗುರಿ ಸಾಧನೆಯಲ್ಲಿ ಕನ್ನಡ ವಿಶ್ವವಿದ್ಯಾಲಯವು ಬಹುತೇಕ ಯಶಸ್ವಿಯಾಗಿದೆ. ದೇಸೀ ಚಿಂತನಾಕ್ರಮವೊಂದನ್ನು ಕಟ್ಟಲು ಬೇಕಾದ ಮೂಲಸಾಮಗ್ರಿಗಳನ್ನು ಇಲ್ಲಿನ ಅನೇಕ ಸಂಶೋಧಕರು ಸಂಗ್ರಹಿಸಿ ಪ್ರಕಟಿಸಿದ್ದಾರೆ. ಜೊತೆಗೆ ಇತಿಹಾಸ, ಶಾಸನ, ಹಸ್ತಪ್ರತಿ, ಗ್ರಂಥ ಸಂಪಾದನೆ, ಜಾನಪದ, ಛಂದಸ್ಸು, ಸ್ಥಳನಾಮ, ಮೊದಲಾದ ಕನ್ನಡದ ಮಾಹಿತಿಗಳ ಮೂಲಕವೇ ಕನ್ನಡವನ್ನು ಕಟ್ಟಿದ 'ಅಪ್ರತಿಮ ಸಂಶೋಧಕ ಡಾ. ಎಂ.ಎಂ.ಕಲಬುರ್ಗಿ ಅವರಂಥವರು ಇಲ್ಲಿ ಕುಲಪತಿಗಳಾಗಿ ಕೆಲಸ ಮಾಡಿದ್ದಾರೆ. ಅವರು ಬರೆದ ಸಾವಿರಕ್ಕೂ ಹೆಚ್ಚು ಲೇಖನಗಳು ಮತ್ತು ನೂರಕ್ಕೂ ಹೆಚ್ಚು ಕೃತಿಗಳು ಕನ್ನಡ ಸಂಶೋಧಕನೊಬ್ಬನ ಚರಮ ಸಿದ್ಧಿಯ ಹಾಗೆ ಭಾಸವಾಗುತ್ತದೆ. ಆದರೆ ಇಂದು ಪರಿಸ್ಥಿತಿ ಬದಲಾಗುತ್ತಿರುವಂತೆ ತೋರುತ್ತಿದೆ. ಕಲಬುರ್ಗಿಯವರು ತಮ್ಮ ಸಂಶೋಧನೆಯ ಸತ್ಯಗಳಿಂದಾಗಿಯೇ ಅಮಾನುಷವಾಗಿ ಕೊಲೆಯಾದರು. ಸಂಶೋಧಕ ಆಗಾಗ ಶಿಲುಬೆಗೇರಬೇಕಾಗುತ್ತದೆ ಎಂಬ ಅವರ ಮಾತು ಅವರಲ್ಲಿಯೇ ನಿಜವಾಯಿತು. ಕೊಲೆಗಾರರನ್ನು ಇವತ್ತಿನವರೆಗೆ ಸರಕಾರಕ್ಕೆ ಹಿಡಿಯಲಾಗಿಲ್ಲ. ಅಂದರೆ ಸಂಶೋಧಕರು ಇಂದು ತಮ್ಮ ಓದಿನಲ್ಲಿ ಕಂಡುಕೊಂಡ ಅಥವಾ ಕ್ಷೇತ್ರಕಾರ್ಯದಲ್ಲಿ ತಾವು ಸಂಗ್ರಹಿಸಿದ ಮಾಹಿತಿಗಳ ಆಧಾರದ ಮೇಲೆ ತಮ್ಮ ಸಂಶೋಧನೆಯನ್ನು ಮುಂದುವರಿಸುವುದು ಕಷ್ಟವಾಗುತ್ತಿದೆ. ಬದಲು ಸಮಕಾಲೀನ ಸಮಾಜ ಏನನ್ನು ನಿರೀಕ್ಷಿಸುತ್ತದೆಯೋ ಅದನ್ನೇ ಹೇಳಬೇಕಾಗಿರುವ ಒತ್ತಡದಲ್ಲಿ ನಾವು ಸಿಲುಕಿದ್ದೇವೆ. ಟಿಪ್ಪೂ ಸುಲ್ತಾನನ ಲಾವಣಿಯೊಂದರಲ್ಲಿ ಬರುವ

'ಟೀಪು ರಾಜ್ಯದೊಳು ಶರಾಬು, ಶೇಂದಿ, ಗಾಂಜಾ ಅಫೀಮು ಇರಲಿಲ್ಲ

ಟೀಪುವಿನ ಕಾಲದೊಳು ಜೂಜಿನಾಟ ಮೇಣ್ ವ್ಯಭಿಚಾರದ ಸುಳಿವಿಲ್ಲ' ಎಂಬ ಸಾಲುಗಳನ್ನು ಉದ್ಧರಿಸಿದ್ದಕ್ಕೆ ನಾನು ಅನೇಕ ಕೆಟ್ಟ ಮತ್ತು ಅಶ್ಲೀಲ ಮಾತುಗಳನ್ನು ಕೇಳಬೇಕಾಯಿತು. ಪಂಡರಾಪುರ ವಿಠ್ಠಲನು ವಲಸೆಗಾರ ಪಶುಪಾಲಕರ ದೈವವಾಗಿರುವ ಸಾಧ್ಯತೆ ಇದೆ ಎಂಬ ಮಾತನ್ನು ಬರೆದದ್ದಕ್ಕೆ, ನಾನು ಸಾಕಷ್ಟು ತೊಂದರೆ ಅನುಭವಿಸಬೇಕಾಯಿತು. 'ದೇವನಹಳ್ಳಿಯಲ್ಲಿ ಟಿಪ್ಪು ಹುಟ್ಟಿದ್ದರಿಂದ ಅವನ ಹೆಸರನ್ನು ವಿಮಾನ ನಿಲ್ದಾಣಕ್ಕೆ ಇಡಬಹುದಾಗಿತ್ತು' ಎಂಬ ಒಂದು ಸಣ್ಣ ಅಭಿಪ್ರಾಯವನ್ನು ಗಿರೀಶ್ ಕಾರ್ನಾಡರು ವ್ಯಕ್ತಪಡಿಸಿದ್ದೇ ದೊಡ್ಡ ಅಪರಾಧವಾಗಿ ಅನೇಕರಿಗೆ ಕಂಡು ಅವರು ಬಹಿರಂಗವಾಗಿ ಕ್ಷಮೆ ಯಾಚಿಸಬೇಕಾಯಿತು. ಕರ್ನಾಟಕವೂ ಸೇರಿದಂತೆ, ಈ ದೇಶದ ಸುದೀರ್ಘ ಇತಿಹಾಸದಲ್ಲಿ ಇಲ್ಲಿಗೆ ವಲಸೆ ಬಂದು ನೆಲೆಸಿದ ಜನಾಂಗಗಳ ಮತ್ತು ಸಮುದಾಯಗಳ ಲೆಕ್ಕ ಇಟ್ಟವರಿಲ್ಲ. ಒಂದು ಬಗೆಯ ನಿರಂತರತೆಯನ್ನು ಸದಾ ಕಾಪಾಡುತ್ತಲೇ, ಜೊತೆಜೊತೆಗೆ ಬದಲಾಗುತ್ತಾ ಹೋಗಿರುವ ಈ ನೆಲವು, ಬಗೆಬಗೆಯ ಸಂಸ್ಕೃತಿಗಳನ್ನು ಉದಾರವಾಗಿ ಸ್ವೀಕರಿಸಿ ಬೆಳೆಯಲು ಅನುವು ಮಾಡಿಕೊಟ್ಟಿದೆ. ಈ ಹಂತದಲ್ಲಿ ನಡೆದ ಹೊಸ ಆವಿಷ್ಕಾರಗಳು, ಸೇರ್ಪಡೆಗಳು, ನಿರಾಕರಣೆಗಳು, ಸಂಘರ್ಷಗಳು ಮತ್ತು ಸಮನ್ವಯಗಳು ನಮ್ಮ ದೇಶವನ್ನು ಇತರ ದೇಶಗಳಿಂದ ಬೇರೆಯಾಗಿಸಿದೆ. ಜಗತ್ತಿನ ಮೂಲೆ ಮೂಲೆಗಳಿಂದ ಇಲ್ಲಿಗೆ ಬೌದ್ಧಿಕತೆ ಹರಿದುಬಂದಿದೆ, ಭೌತಿಕ ಸಾಮಗ್ರಿಗಳು ಸಾಗಿ ಬಂದಿವೆ. ಅವು ಕಾಲಾಂತರದಲ್ಲಿ ಇಲ್ಲಿಯವರಿಗೆ ಗೊತ್ತಾಗದ ಹಾಗೆ ಇಲ್ಲಿಯವೇ ಆಗಿವೆ. ಇಂದು ಕರ್ನಾಟಕ ಸಂಗೀತದ ಮೂಲ ದ್ರವ್ಯವಾಗಿರುವ ವಯೋಲಿನ್, ಮಧ್ಯ ಏಷಿಯಾದಿಂದ ಇಲ್ಲಿಗೆ ಆಗಮಿಸಿದೆ. ಜನಪದ ಸಂಗೀತದ ಅದರಲ್ಲೂ ಭಾರತದ ದಲಿತರ ಸುಖ ದುಃಖಗಳ ಭಾಗವಾಗಿರುವ ದಫ್ಫು ಕೂಡಾ ಮೂಲತಃ ನಮ್ಮದಲ್ಲ. ಇಂಥ ಘಟನೆಗಳು ನಮಗೆ ಸಹನೆಯನ್ನು ಹೇಳಿಕೊಟ್ಟಿದೆ. ಈ ನೆಲದಲ್ಲಿ ನಡೆದ ಬಹುದೊಡ್ಡ ಸಂವಾದಗಳು ಇಂದು ನಮ್ಮ ಪ್ರಜಾಪ್ರಭುತ್ವದ ತಳಹದಿಯಾಗಿ ಕೆಲಸ ನಿರ್ವಹಿಸುತ್ತಿದೆ. ಕ್ಷಮೆಯನ್ನು ಧರ್ಮದ 10 ಲಕ್ಷಣಗಳಲ್ಲಿ (ಕ್ಷಮಾ ದಮೋ ಆಸ್ತೇಯಂ..) ಒಂದು ಎಂದು ಪ್ರಾಚೀನ ಹಿಂದೂಗಳು ನಂಬಿದ್ದರು. ಆದರೆ ಈಗ ಏನನ್ನು ಹೇಳಿದರೆ ನಾನು ಅಪಾಯದಿಂದ ಪಾರಾಗಬಹುದು ಎಂದು ಎರಡೆರಡು ಬಾರಿ ಯೋಚಿಸಿ ಬರೆಯಬೇಕಾದ ಮತ್ತು ಮಾತಾಡಬೇಕಾದ ವಾತಾವರಣ ನಿರ್ಮಾಣವಾಗುತ್ತಿರುವಾಗ ನಮ್ಮ ಸಂಶೋಧನೆಗಳು ಪೇಲವವಾಗುವುದರಲ್ಲಿ ಅನುಮಾನವಿಲ್ಲ.

ಈ ಸಮಸ್ಯೆ ಇನ್ನೂ ಜಟಿಲವಾಗಿರುವುದು ಸಂಶೋಧನೆಗೆ ಜಾತಿ ಮತ್ತು ಸಮುದಾಯಗಳು ಗಟ್ಟಿಯಾಗಿ ಅಂಟಿಕೊಂಡಿರುವುದರಿಂದ. ಪಂಪ, ಬಸವಣ್ಣ, ಕನಕದಾಸ, ಕುವೆಂಪು, ಸಂಗೊಳ್ಳಿ ರಾಯಣ್ಣ, ಕೆಂಪೇಗೌಡ ಮೊದಲಾದ ಇತಿಹಾಸ ಪ್ರಸಿದ್ಧರು, ಎಲ್ಲ ಕನ್ನಡಿಗರ ಸೊತ್ತಾಗಿ ಬೆಳೆಯಬೇಕಾಗಿತ್ತು, ಆದರೆ ಅವರೆಲ್ಲ ಇಂದು ಒಂದೊಂದು ಸಮುದಾಯಗಳಿಗೆ ಸೀಮಿತವಾಗಿ ಕಾಣಿಸಿಕೊಳ್ಳುತ್ತಿದ್ದಾರೆ ಮತ್ತು ನಿರೀಕ್ಷೆಗೂ ಮೀರಿ ಎಲ್ಲ ಬಗೆಯ ವಿಮರ್ಶೆಗಳ ಗಡಿದಾಟ ಬೆಳೆದು ನಿಲ್ಲುತ್ತಿದ್ದಾರೆ. ಕರ್ನಾಟಕದ ಅನೇಕ ಚಾರಿತ್ರಿಕ ಘಟನೆಗಳನ್ನು, ಇತಿಹಾಸ ನಿರ್ಮಾಪಕರನ್ನು ಮತ್ತು ಸಾಹಿತಿಗಳನ್ನು ಜಾತಿಯ ಕಬಂಧ ಬಾಹುಗಳಿಂದ ಬಿಡಿಸದೇ ಹೋದರೆ ಯಾವ ಬಗೆಯ ಚರ್ಚೆಯೂ ಸಾಧ್ಯವಿಲ್ಲ, ಸಂಶೋಧನೆಯೂ ಸಾಧ್ಯವಿಲ್ಲ. ಈ ಮಾತು ಅನೇಕ ಜನಪದ ಕಲೆಗಳಿಗೂ ಅನ್ವಯವಾಗುತ್ತದೆ. ಯಕ್ಷಗಾನದಂಥ ಜನಪ್ರಿಯ ಕಲೆಯಲ್ಲಿ ವಿದೂಷಕನಿಗಿದ್ದ ಮುಕ್ತ ಅವಕಾಶ ಈಗ ಸಂಕುಚಿತವಾಗಿಬಿಟ್ಟಿದೆ. ಅರಸರನ್ನೂ, ದೇವಾನು ದೇವತೆಗಳನ್ನೂ, ಋಷಿಗಳನ್ನೂ ರಂಗದ ಮೇಲೆ ಎಗ್ಗಿಲ್ಲದೆ ಹಾಸ್ಯ ಮಾಡುವ ಅವಕಾಶ ಸಂಸ್ಕೃತ ರಂಗಭೂಮಿಯಿಂದ ತೊಡಗಿ ಜನಪದ ರಂಗಭೂಮಿಯವರೆಗೆ ವಿದೂಷಕನಿಗೆ ಮೊದಲಿನಿಂದಲೂ ಇತ್ತು. ಆದರೆ ಈಗ ಇಲ್ಲ ಅಥವಾ ಅಂಥ ಅವಕಾಶ ಕಡಿಮೆಯಾಗಿದೆ. ಪ್ರಜಾಪ್ರಭುತ್ವದ ಮೂಲ ಆಶಯಕ್ಕೆ ವಿರುದ್ಧವಾಗಿ ಕಲಾವಿದರ ಮುಕ್ತ ಅಭಿವ್ಯಕ್ತಿಗೆ ಈಗ ಅಂಕುಶ ಬಿದ್ದಿದೆ. ಇಂಥಲ್ಲಿ ಸೃಜನಶೀಲತೆ, ಸಂಶೋಧನೆ ಮತ್ತು ವಿಮರ್ಶೆ ಆರೋಗ್ಯಕರವಾಗಿ ಬೆಳೆಯುವುದು ಅಸಾಧ್ಯ. ಮಾರ್ಗ- 4 ರಲ್ಲಿ ಕಲಬುರ್ಗಿಯವರು ಹೀಗೆ ಬರೆಯುತ್ತಾರೆ:

'ಇತ್ತೀಚೆಗೆ ಸಮಾಜದಲ್ಲಿ ಸಹಜ ಬದಲಾವಣೆಯ ಜೊತೆಗೆ ರಾಜಕೀಯ-ಧಾರ್ಮಿಕ ಧುರೀಣರಿಂದಾಗಿ ಕೃತಕ ಬದಲಾವಣೆಗಳು ಸಂಭವಿಸುತ್ತಲಿವೆ. ಇವರು ಸುಳ್ಳು ಇತಿಹಾಸದ ಮೂಲಕ ವರ್ತಮಾನದಲ್ಲಿ ಹುಟ್ಟು ಹಾಕುತ್ತಲಿರುವ ಶೋಷಣೆಯನ್ನು ಹತ್ತಿಕ್ಕಲು, ನಿಜ ಇತಿಹಾಸವನ್ನು ಶೋಧಿಸಿಕೊಡುವುದು ಸಂಶೋಧಕನ ಕರ್ತವ್ಯವಾಗಿದೆ. ಅಂದರೆ ಸಂಶೋಧನೆ ಎನ್ನುವುದು ಕೇವಲ ಇತಿಹಾಸದ ಶೋಧವಲ್ಲ, ಇತಿಹಾಸವನ್ನು ಮುಂದು ಮಾಡಿಕೊಂಡು ವರ್ತಮಾನವನ್ನು ದುರುಪಯೋಗ ಮಾಡಿಕೊಳ್ಳುವವರೊಂದಿಗೆ ನಡೆಸುವ ಹೋರಾಟವಾಗಿದೆ (ಮಾರ್ಗ - 4, ಮಾರ್ಗಕ್ಕೆ ಮೊದಲು, 2004).

ಬಹುಶಃ ಕನ್ನಡ ಎಂದೂ ಇಂಥ ಪರಿಸ್ಥಿತಿಯನ್ನು ಇದಿರಿಸಿಲ್ಲ ಎಂಬ ಅಂಶವು ನಮ್ಮ ಆತಂಕವನ್ನು ಇನ್ನೂ ಹೆಚ್ಚು ಮಾಡುತ್ತಿದೆ.

ಅರಿಕೇಸರಿಯ ಆಸ್ಥಾನ ಕವಿಯಾಗಿದ್ದ ಪಂಪನಿಗೆ 'ಓಲಗಿಸಿ ಬಾಳ್ವುದು ಕಷ್ಟಂ ಇಳಾಧಿನಾಥರಾ' ಎಂದು ಹೇಳುವ ಧೈರ್ಯವಿತ್ತು. 'ಮೂರ್ಧಾಭಿಷಿಕ್ತರಾದ ಪಲವು ಅರಸರು ವಿಷಯ ಭೋಗಗಳಿಂದಾಗಿ ಮದೋನ್ಮತ್ತರಾಗಿ ತಮ್ಮಂ ಮರೆತು ಧರ್ಮವೆಂಬ ದೋಣಿಯಿಂದ ಜಾರಿ ಬೀಳುತ್ತಾರೆ' ಎಂದು ಆತನು ಕೆಂಡ ಕಾರುತ್ತಾನೆ. ಊರೆಲ್ಲಾ ತುಂಬಿಕೊಂಡಿರುವ ಬ್ರಹ್ಮಚಾರಿಗಳನ್ನು ಕಂಡ ಉರಿಲಿಂಗ ಪೆದ್ದಿಯು 'ಹೊನ್ನ ಬಿಟ್ಟು, ಹೆಣ್ಣ ಬಿಟ್ಟು, ಮಣ್ಣ ಬಿಟ್ಟು, ಬ್ರಹ್ಮಚಾರಿಗಳಾಗಬೇಕೆಂದು ಬಣ್ಣವಿಟ್ಟು ನುಡಿವ ಅಣ್ಣಗಳ ಪರಿಯ ನೋಡಿರೋ' ಎಂದು ಕಿಣಕುತ್ತಾನೆ. ಮಧ್ಯಕಾಲೀನ ಕರ್ನಾಟಕದ ವೈಭವದ ಅರಸೊತ್ತಿಗೆಯನ್ನು ಕಣ್ಣಾರೆ ಕಂಡ ಕುಮಾರವ್ಯಾಸನು 'ಅರಸು ರಾಕ್ಷಸ, ಮಂತ್ರಿಯೆಂಬುವ ಮೊರೆವ ಹುಲಿ, ಪರಿವಾರ ಹದ್ದಿನ ನೆರವಿ, ಬಡವರ ಬಿನ್ನಪವನಿನ್ನಾರು ಕೇಳುವರು, ಉರಿವುರಿವುತಿದೆ ದೇಶ, ನಾವಿನ್ನಿರಲು ಬಾರದು' ಎಂದು ಗುಡುಗಿದ್ದಲ್ಲದೆ, 'ಸಿರಿಯ ನುಳ್ಳವನವನೆ ಕುಲಜನು, ಸಿರಿಯನುಳ್ಳವನೇ ವಿದಗ್ಧನು, ಸಿರಿಯನುಳ್ಳವನೇ ಮಹಾತ್ಮನು ಸಕಲಗುಣಯುತನು' ಎಂದು ವ್ಯಂಗ್ಯವಾಡುತ್ತಾನೆ. ಹಂಪಿಯ ಅಪಾರ ಸಂಪತ್ತನ್ನು ತಾತ್ವಿಕವಾಗಿ ನಿರಾಕರಿಸುವ ಪುರಂದರದಾಸರು

'ಲೊಳಲೊಟ್ಟೆ, ಎಲ್ಲಾ ಲೊಳಲೊಟ್ಟೆ,
ಆನೆಕುದುರೆ ಎಲ್ಲ ಲೊಳಲೊಟ್ಟೆ
ಸೇನೆ ಭಂಡಾರವು ಲೊಳಲೊಟ್ಟೆ
ಮುತ್ತು ಮಾಣಿಕ್ಯ ಲೊಳಲೊಟ್ಟೆ
ಛತ್ರಚಾಮರ ಧ್ವಜ ಲೊಳಲೊಟ್ಟೆ'

ಎಂದು ಹೇಳಿ 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂದು ಘೋಷಿಸುತ್ತಾನೆ. ಆ ಕಾಲದ ವರ್ತಕರು ಮುತ್ತು ರತ್ನಗಳನ್ನು ಬೀದಿಯಲ್ಲಿ ಮಾರಾಟ ಮಾಡುತ್ತಿದ್ದಾಗ, ಅದೇ ಬೀದಿಯಲ್ಲಿ ಓಡಾಡಿದ ದಾಸರು 'ಲಂಗೋಟಿ ಬಲು ಒಳ್ಳೇದಣ್ಣ ಒಬ್ಬರ ಹಂಗಿಲ್ಲದೆ ಮಡಿಗೆ ಒದಗುವುದಣ್ಣ' ಎಂದು ಹಾಡಿ ಪ್ರತಿಭಟಿಸಿದರು. 'ಕೆಂಡಗಣ್ಣ ನೊಸಲೊಳಗಿಟ್ಟ ನಮ್ಮ ಶಿವ ಕೆಂಡವ ಸೋಂಕಲು ಅಳುವೆಯಲ್ಲೋ ಖೋಡಿ' ಎಂದು ದೈವವನ್ನೇ ಹಾಸ್ಯ ಮಾಡಲು ಅವರು ಹಿಂಜರಿಯಲಿಲ್ಲ.

ಹೀಗೆ ಎಲ್ಲ ಬಗೆಯ ಸ್ಥಾಪಿತ ಹಿತಾಸಕ್ತಿಗಳನ್ನು ವಿರೋಧಿಸಿಯೇ ಕನ್ನಡ ಸಾಹಿತ್ಯ ಬೆಳೆದಿದೆ. ಈ ಮಾತಿಗೆ ಕನ್ನಡದಲ್ಲಿ ಬರೆದ ಸೂಫಿ ಸಂತರು ಕೂಡಾ ಹೊರತಲ್ಲ. ಸಾಲಗುಂದ ಗುರು ಖಾದರಿ ಪೀರನು 'ಮಸೀದಿ ಎಂಬುದು ಹಾಳಾದ ಜಾಗ, ಅದರ ಗೊಡವಿ ನಿನಗ್ಯಾಕಂತೆ?' ಎಂದು ಸದ್ದು ಹೊಡೆಯುತ್ತಾನೆ. ಹೀಗೆ ನಮ್ಮ ಸಾಹಿತ್ಯ ಪರಂಪರೆಗೆ ಅದರದ್ದೇ 'ಒಂದು ಗುಣವಿದೆ, ಅದು ಕನ್ನಡವ[...] ಕರ್ನಾಟಕವನ್ನು ಇದುವರೆಗೆ ಬದುಕಿಸಿದೆ. ಆದರೆ ಈ[...] ಅದರ ಹಾದಿ ಬದಲುವಂತಿದೆಯಾದ್ದರಿಂದ ನಾವೆಲ್ಲ ಅರೆಕ್ಷ[...] ನಿಂತು, ಯೋಚಿಸಿ, ಮುಂದುವರೆಯಬೇಕಾಗಿದೆ."

ಹಾಗೆ ನೋಡಿದರೆ, ಆಧುನಿಕತೆಯ ಪರಿಣಾಮವಾ[...] ನಮ್ಮ ಸಮಾಜ ತೀವ್ರಗತಿಯಲ್ಲಿ ಬದಲಾಗು[...] ಪ್ರಗತಿಗಾಮಿಯಾಗಬಹುದೆಂದು ಸ್ವಾತಂತ್ರ್ಯಾನಂತರ[...] ಕಾಲಘಟ್ಟದಲ್ಲಿ ಹುಟ್ಟಿದ್ದ ನಾವೆಲ್ಲ ನಂಬಿದ್ದೆವು. ಆದ[...] ಅದು ಹಾಗಾಗದೆ ಮತ್ತೆ ನಮ್ಮ ಸಮಾಜದ ಪ್ರತಿಗಾಮಿ[...] ಬೇರುಗಳು ಗಟ್ಟಿಗೊಳ್ಳುತ್ತಿವೆ. ಜಾತಿಯ ಪ್ರಜ್ಞೆ ಹೊ[...] ರೂಪ ತಾಳುವುದರ ಜೊತೆಗೆ ಅದರೊಂದಿ[...] ಕೋಮುವಾದವೂ ಸೇರಿಕೊಂಡು, ಸೃಜನಶೀಲವಾಗಿದ್ದ ಜ[...] ಸಂಸ್ಕೃತಿಗಳು ಇಂದು ಪತನಮುಖಿಯಾಗುತ್ತಲಿವೆ. ಈ[...] ಬೆಳವಣಿಗೆಯ ತಕ್ಷಣದ ಪರಿಣಾಮವೆಂದರೆ ಸಮುದಾಯ[...] ಜಾತಿ ಮತ್ತು ಕೋಮುಗಳು ತಮ್ಮ ಆಂತರಿಕ ವಿಮರ್ಶ[...] ಪ್ರಜ್ಞೆಯನ್ನು ಕಳೆದುಕೊಂಡು, ಸ್ವಯಂವಿನಾಶದ ಕಡೆ[...] ಚಲಿಸುವುದು. ನಿಖರ ಮತ್ತು ಪ್ರಖರ ವಿಮರ್ಶೆ[...] ತೆರೆದುಕೊಂಡಿದ್ದ ಸಮುದಾಯಗಳು ಇಂದು ಒಂದು ಸ[...] ಟೀಕೆಗೆ ಬೆಚ್ಚಿ ಬೀಳುತ್ತಿವೆ ಎಂದರೆ ಅವು ಆಂತರಿಕವಾ[...] ಕುಸಿದಿವೆ ಎಂದೇ ಅರ್ಥ. ಹಾಗಾಗಿಯೇ ಅವು ತಮ[...] ಕೀಳರಿಮೆಯನ್ನು ಕಳೆದುಕೊಳ್ಳಲು ಇತರರ ಮೇಲೆ ಆಕ್ರಮಣ[...] ಮಾಡಲಾರಂಭಿಸಿವೆ. ಮೊದಲು ದಲಿತರನ್ನು ಸಜೀವವಾ[...] ಸುಡಲಾಗುತ್ತಿತ್ತು ಆದರೆ ಈಗ ದಲಿತರು ಆತ್ಮಹತ[...] ಮಾಡಿಕೊಳ್ಳುವ ಹಾಗೆ ಮಾಡಲಾಗುತ್ತಿದೆ. ಕೋಮುವಾದ[...] ಕೋಮುವಾದ ಉತ್ತರವಾದರೆ, ಜಾತಿಗೆ ಜಾತಿ ಉತ್ತರವಾದ[...] ದ್ವೇಷಕ್ಕೆ ದ್ವೇಷ ಉತ್ತರವಾದರೆ ಅವೆಲ್ಲವೂ ದ್ವಿಗುಣಗೊಳ್ಳುತ್ತ[...] ಎಂಬ ಸರಳ ಸತ್ಯವನ್ನು ನಾವೀಗ ಮನಗಾಣಲಾರದಾಗಿದ್ದೇವ[...]

ಈ ಬಗೆಯ ಬೆಳವಣಿಗೆಗಳು ಜನರು ಸುದೀರ್ಘ[...] ಕಾಲಾವಧಿಯಲ್ಲಿ ತಮ್ಮ ಅಗತ್ಯಗಳಿಗೆ ಅನುಗುಣವಾ[...] ಬೆಳೆಸಿಕೊಂಡು ಬಂದ ಸಂಸ್ಕೃತಿಯನ್ನು ಅಧೋಮುಖಿಯಾ[...] ಸುತ್ತವೆ, ಇಲ್ಲವೇ ಅನ್ಯ ಸಂಸ್ಕೃತಿಯ ಅಧೀನಕ್ಕೆ ಒಳಗಾ[...] ತಮ್ಮ ಸೃಜನಶೀಲತೆಯನ್ನು ಕಳೆದುಕೊಳ್ಳಲು ಒತ್ತ[...] ಹೇರುತ್ತವೆ. ನಮ್ಮ ಸಂಶೋಧನೆಗಳು ಈ ಬಗೆಯ[...] ಬೆಳವಣಿಗೆಗಳಿಗೆ ಮುಖಾಮುಖಿಯಾಗದೇ ಹೋದರೆ ಅವ[...] ಅನುಪಯುಕ್ತವಾಗಿಬಿಡುತ್ತವೆ. ಸಾಮಾಜಿಕ ಆಯಾಮವಿಲ್ಲದ[...] ಸಂಶೋಧನೆಗಳು ಭಾರತದಲ್ಲಿ ವಿಶೇಷವಾದದ್ದೇನನ್ನೂ[...] ಸಾಧಿಸಲಾರವು.

ಕರ್ನಾಟಕದ ಸಾಂಸ್ಕೃತಿಕ ವೈವಿಧ್ಯದ ಸಂಕೇತಗಳೆಂದರ[...] ಇಲ್ಲಿನ ಜನಪದ ಕಲೆಗಳು. ಗೀಗೀ ಪದಗಳಲ್ಲಿ ಗಂಡ[...] ಹೆಚ್ಚೋ, ಹೆಣ್ಣು ಹೆಚ್ಚೋ ಚರ್ಚೆ ನಡೆಯುತ್ತದೆ[...] ಮುಸಲ್ಮಾನರ ರಂಜಾನ್ ಪದಗಳಲ್ಲಿ ಎಳೆವಯಸ್ಸಿನಲ್ಲಿ ಸ[...] ಹೋದ ಅಗಸರನನ್ನು ಅಭಿಮನ್ಯುವಿಗೆ ಹೋಲಿಸಲಾಗಿದೆ[...] ಅಕಾಲ ಮರಣಕ್ಕೀಡಾದ ಕುಂಬಳೆಯ ಆಲಿ ಮತ್ತು ಕಡಲ[...] ಪಯಣದಲ್ಲಿ ವಿಕ್ರಮ ಸಾಧಿಸಿದ ಬೊಬ್ಬರ್ಯ ಇಬ್ಬರೂ[...] ಸಾಂಸ್ಕೃತಿಕ ವೀರರೆಂದು ಗುರುತಿಸಿ ಕೊಂಡು ತುಳುನಾಡಿನ[...] ಭೂತಾರಾಧನೆಯಲ್ಲಿ ಸ್ಥಾನ ಪಡೆದು ಕೊಂಡಿದ್ದಾರೆ. ಇಸ್ಲಾ[...] ಧರ್ಮವು ಭೂತಾರಾಧನೆಯನ್ನು ತಾತ್ವಿಕವಾಗಿ ಒಪ್ಪದು.[...] ಹಿಂದೂ ಧರ್ಮವು ಮುಸ್ಲಿಂ ನಾಯಕರನ್ನು ತಮ್ಮ ದೈವವಾಗಿ[...] ಅಂಗೀಕರಿಸದು. ಆದರೆ ಇವೆರಡೂ ಕರಾವಳಿಯ ಮಣ್ಣಲ್ಲಿ[...] ಸಾಧ್ಯವಾಗಿದೆ. ತನಗೆ ದೇವಸ್ಥಾನ ಕಟ್ಟಿಕೊಟ್ಟ ಬಪ್ಪ ಬ್ಯಾರಿಗ[...] ಮೂಲ್ಕಿಯ ದುರ್ಗಾ ಪರಮೇಶ್ವರಿಯು ಇಂದಿಗೂ ಗಂಧ[...] ಪ್ರಸಾದ ನೀಡುತ್ತಾಳೆ ಮಾತ್ರವಲ್ಲ ಆ ಊರಿಗೆ ಬಪ್ಪನಾಡೆಂಬ[...] ಹೆಸರು ಪ್ರದಾನ ಮಾಡುತ್ತಾಳೆ. ಹಡಗಲಿಯ ಮೈಲಾರ[...] ಲಿಂಗಪ್ಪನು ಅತಿಯಾದ ಹಣದಾಸೆಯ ತಿರುಪತಿ ತಿಮ್ಮಪ್ಪನ[...] ಮಗಳನ್ನು ಮೋಸದಿಂದ ಮದುವೆಯಾಗುವುದಲ್ಲದೆ, ಚಿಕ್ಕಾಸು ಕೂಡಾ ಕೊಡದೆ ತಿಮ್ಮಪ್ಪನನ್ನು ನಿರಂತರವಾಗಿ ಗೋಳಾಡಿಸುತ್ತಾನೆ. ವಿಲೋಮ ವಿವಾಹ ನಿಷಿದ್ಧ ಎಂದು ಶಾಸ್ತ್ರಗಳು ಸಾರುತ್ತಿರುವಾಗಲೇ ಬಾವಿಗೆ ಬಿದ್ದ ದಲಿತ ಹುಡುಗನನ್ನು ಸೀರೆಯ ಸೆರಗಿಳಿಸಿ ಮೇಲೆತ್ತಿದ ಬ್ರಾಹ್ಮಣ ಕನ್ಯೆಯ ಕತೆಗಳನ್ನು ಜನರು ಹೇಳುತ್ತಾ ಬಂದಿದ್ದಾರೆ. ಮುಸಲ್ಮಾನ ಅರಸರು ಹಿಂದೂ ರಾಜ್ಯವನ್ನು ನಾಶ ಮಾಡಿದರು ಎಂದು ಅನೇಕರು ಬರೆಯುತ್ತಿದ್ದಾಗ ಮುಸಲ್ಮಾನ ಹುಡುಗಿಯು ಹಿಂದೂ ಯುವಕನನ್ನು ಪ್ರೀತಿಸಿದ ಕತೆಯನ್ನು ನಮ್ಮ ಜನಪದ ಕಲೆಗಳು ರಂಗದ ಮೇಲೆ ಪ್ರದರ್ಶಿಸುತ್ತಾ ಬಂದಿವೆ. ಇಂಥ ಹಲವು ಮುಕ್ತ ಮತ್ತು ಅದ್ಭುತ ನಿರೂಪಣೆಗಳಿರುವ ನಾಡು ಇದೀಗ ತನ್ನ ಬಾಗಿಲುಗಳನ್ನು ಮತ್ತಷ್ಟು ವಿಸ್ತಾರವಾಗಿ ತೆರೆದುಕೊಳ್ಳಬೇಕಿತ್ತು, ಆದರೆ ಅವು ಹೆಚ್ಚು ಹೆಚ್ಚು ಸಂಕುಚಿತಗೊಂಡು ಮುಚ್ಚಿಕೊಳ್ಳುತ್ತಿವೆ.

ಾ ಸಂಸ್ಕೃತಿಗಳ ಅವನತಿಯು ಪ್ರಚಲಿತ ಕರ್ನಾಟಕದ ಬಿ ಸಾಂಸ್ಕೃತಿಕ ವಿದ್ಯಮಾನಗಳಲ್ಲಿ ಒಂದು. ಇಂಥ ಸಗೆಗಳ ಬಗೆಗೆ ಗಂಭೀರವಾದ ಚರ್ಚೆ ನಮ್ಮ ದ್ಯಾಲಯಗಳಲ್ಲಿ ನಡೆಯಲು ಸಾಧ್ಯವಾದರೆ ಅದರಿಂದ ಕ್ಕೆ ತುಂಬಾ ಪ್ರಯೋಜನವುಂಟು. ಭಾಷೆ, ಗಡಿ ಸಂಸ್ಕೃತಿಯ ವಿಷಯಗಳು ಬಹುಬೇಗ ಜನರನ್ನು ರಿಗೆಳೆದದ್ದನ್ನು ವಿಶ್ವದ ಇತಿಹಾಸ ರುಜುವಾತು ದೆ. ಜಗತ್ತಿನ ಎಲ್ಲೆಡೆಯೂ ಈ ಮೂರು ಶಬ್ದಗಳನ್ನು ರೋಗಿಸಿಯೇ ಫ್ಯಾಸಿಸ್ಟ್ ಶಕ್ತಿಗಳು ವಿಜೃಂಭಿಸಿವೆ. ನಮ್ಮ ವಿಶ್ವವಿದ್ಯಾಲಯಗಳು ಮತ್ತು ಸಂಶೋಧನೆಗಳು ವಣಿಗೆಗಳ ಕುರಿತು ವಿಶೇಷ ಎಚ್ಚರ ವಹಿಸಬೇಕೆಂದು ಭಾವಿಸುತ್ತೇನೆ.

ಜ್ಞಾನದ ಅಂತಾರಾಷ್ಟ್ರೀಕರಣ ಮತ್ತು ಕನ್ನಡ

ೀಗೆ ಕನ್ನಡ ಭಾಷೆಯು ಒಳಗಿನಿಂದ ಒಂದು ಬಗೆಯ ಕ್ಕೆ ಒಳಗಾಗುತ್ತಿದ್ದರೆ, ಇನ್ನೊಂದೆಡೆಯಲ್ಲಿ ಅದು ಇಂದಿನ ತೀಕರಣ ಪ್ರಕ್ರಿಯೆಯ ತೀವ್ರ ಹೊಡೆತಕ್ಕೆ ಸಿಕ್ಕಿ ಂದು ಬಗೆಯಲ್ಲಿ ನಲುಗುತ್ತಿದೆ. ಭಾರತದ ಅನೇಕ ಗಳು ಈ ವಿಷಯದಲ್ಲಿ ಕನ್ನಡದೊಂದಿಗಿವೆ. ನಮ್ಮ ಕ್ಕೆ ರಾಷ್ಟ್ರೀಯ ಭಾಷಾ ನೀತಿ ಎಂಬುದು ಇಲ್ಲವಾದ್ದರಿಂದ ಗೊಂದಲವು ಅನೇಕ ಭಾಷೆಗಳನ್ನು ಸುಲಭವಾಗಿ ದು ಹಾಕುವ ಮಟ್ಟಕ್ಕೆ ಬೆಳೆದಿದೆ.

ುಚಿತವಾಗಿ ಇದು ಜಾಗತಿಕರಣದ ಕಾಲ. ಆದರೆ ತಿಕರಣವು ಭಾರತಕ್ಕೆ ಹೊಸದೇನೂ ಅಲ್ಲ, ಭಾರತದ ೋಳಿಕತೆಯು ಚಾರಿತ್ರಿಕವಾಗಿ ಅದನ್ನು ವಿಶ್ವದೊಂದಿಗೆ ಸವಾಗಿ ಜೋಡಿಸಿದೆ. ನಮ್ಮ ಊಟದ ಮೂಲಭೂತ ಕಗಳಾದ ಬಟಾಟೆ, ಟೊಮೆಟೋ, ಗೆಣಸು, ಜೋಳ, ಸು ಮೊದಲಾದುವುಗಳೆಲ್ಲ ಎಂದೋ ಹೊರದೇಶದಿಂದ ು ನಮ್ಮ ಆಹಾರ ಪದ್ಧತಿಯಲ್ಲಿ ಸೇರಿಕೊಂಡಿವೆ. ನಸ್, ಪೇರಳೆ ಚಿಕ್ಕು ಮೊದಲಾದ ಹಣ್ಣುಗಳೂ ಲತಃ ನಮ್ಮವಲ್ಲ. ಬೆಳ್ಳುಳ್ಳಿ, ಅರಸಿನ, ಶುಂಠಿ ದಲಾದ ಪರಕೀಯ ಪದಾರ್ಥಗಳು ಇಂದು ನಮ್ಮ ೀ ಎನ್ನಲಾದ ವೈದ್ಯ ಪದ್ಧತಿಯೊಂದಿಗೂ ಸೇರಿಕೊಂಡಿವೆ. ಂಡೋ ಪಣಿಕ್ಕರ್ ಅವರ ಪ್ರಕಾರ ಚೈನಾದಲ್ಲಿ ಅತಿ ಚೀನಕಾಲದಲ್ಲಿ ಪ್ರಚಲಿತದಲ್ಲಿದ್ದ ಅನ್ನದ ಉಂಡೆಯೇ ದು ಇಡ್ಲಿಯಾಗಿ ನಮ್ಮ ಮುಂದೆ ಕಾಣಿಸಿಕೊಂಡಿದೆ. ಗೆ ಹೊರಗಿನಿಂದ ಬಂದ ಈ ಪದಾರ್ಥಗಳನ್ನು ನಮ್ಮ ವರುಗಳು ಇಂದಿಗೂ ಸ್ವೀಕರಿಸಲಾರವು.

ಇಷ್ಟಿದ್ದರೂ ತೊಂಭತ್ತರ ದಶಕದಿಂದೀಚೆಗೆ ಸಿಕೊಂಡ ಉದಾರೀಕರಣ, ಜಾಗತೀಕರಣ, ಸಗೀಕರಣ, ವ್ಯಾಪಾರೀಕರಣ ಹಾಗೂ ಮಾರುಕಟ್ಟೆಯ ಿಗಳು ಹಿಂದಿಗಿಂತ ತುಂಬಾ ಭಿನ್ನವಾಗಿದ್ದು ಜಗತ್ತನ್ನು ಮೂಲಾಗ್ರವಾಗಿ ಬದಲಾಯಿಸಿವೆ. ಮೇಲಿನ ಪರಿಭಾಷೆಗಳು ಲತಃ ಆರ್ಥಿಕ ಕ್ಷೇತ್ರಕ್ಕೆ ಸಂಬಂಧಿಸಿವೆಯಾದರೂ ಇಂದು ್ರ ನಮ್ಮ ಸಮಾಜವನ್ನು ಇಡಿಯಾಗಿ ಆಕ್ರಮಿಸಿಕೊಂಡಿವೆ. ಣಾಮವಾಗಿ ಅವು ಇದೀಗ ಉನ್ನತ ಶಿಕ್ಷಣ ಕ್ಷೇತ್ರವನ್ನೂ ತೆಕ್ಕೆಗೆ ಒಗ್ಗಿಸಿಕೊಳ್ಳಲು ಸಜ್ಜಾಗಿದೆ. ಉನ್ನತ ಶಿಕ್ಷಣದ ತಾರಾಷ್ಟ್ರೀಕರಣ ಹಾಗೂ ಜ್ಞಾನೋತ್ಪತ್ತಿಯ ತಾರಾಷ್ಟ್ರೀಕರಣ (Internationalization of gher education and ternationalization of knowledge oduction) ಇಂದಿನ ತೀವ್ರವಾದ ಪ್ರಕ್ರಿಯೆಗಳಲ್ಲಿ ದಾಗಿದೆ. 'ವಿಶ್ವದ ಕುರಿತಾದ ಭಾರತದ ತಿಳಿವಳಿಕೆಗಳಿಗಾಗಿ ಗೂ ಭಾರತದ ಕುರಿತಾಗಿ ವಿಶ್ವದ ತಿಳಿವಳಿಕೆಗಾಗಿ o the world understanding and nderstanding of India in the world) ಈ ತಾರಾಷ್ಟ್ರೀಕರಣ ಪ್ರಕ್ರಿಯೆ ಬಹಳ ಅಗತ್ಯ ಎಂದು ್ಲಿ ಸರಕಾರಗಳೂ ಇಂದು ಭಾವಿಸತೊಡಗಿವೆ. ಉನ್ನತ ್ಷಣದ ಜಾಗತೀಕರಣದ ಪರವಾಗಿ ಯುನೆಸ್ಕೋ nited Nations Educational, Scientific nd Cultural Organization- UNESCO) ತ್ತು ವಿಶ್ವವಿದ್ಯಾಲಯಗಳ ಅಂತಾರಾಷ್ಟ್ರೀಯ ಸಂಸ್ಥೆಯು nternational Association of niversities-IAU) ಜಂಟಿಯಾಗಿ ಪ್ರಬಲವಾದ ದ ಮಂಡಿಸಿವೆ. ಸರಕಾರಗಳ ಪಾಲಿಗೆ 'ಅನುತ್ಪಾದಕ' ುವಾಗಿರುವ ಉನ್ನತ ಶಿಕ್ಷಣವನ್ನು 'ಉತ್ಪಾದಕ ಅಥವಾ ಭದಾಯಕ'ವನ್ನಾಗಿ ಪರಿವರ್ತಿಸುವುದು ಈ ವಾದಗಳ ದ್ದೇಶ. ಇದನ್ನು ಗಂಭೀರವಾಗಿ ಪರಿಗಣಿಸಿದ ಸರಕಾರಗಳು ಮ್ಮ ಆರ್ಥಿಕ ನಷ್ಟವನ್ನು ಕಡಿಮೆ ಮಾಡಿಕೊಳ್ಳಲು ಉನ್ನತ ್ಷಣದ ಖಾಸಗೀಕರಣಕ್ಕೆ ಕ್ರಮ ಕೈಗೊಳ್ಳಲಾರಂಭಿಸಿದವು. ರಿಣಾಮವಾಗಿ ಖಾಸಗಿ ವಿಶ್ವವಿದ್ಯಾಲಯಗಳು, ಡೀಮ್ಡ್ ಶ್ವವಿದ್ಯಾಲಯಗಳು ಮತ್ತು ವಿದೇಶೀ ವಿಶ್ವವಿದ್ಯಾಲಯಗಳು ೊಡ್ಡ ಪ್ರಮಾಣದಲ್ಲಿ ಉನ್ನತ ಶಿಕ್ಷಣದತ್ತ ಹೊರಳಿಕೊಂಡವು. ವು ತಮ್ಮ ಆರ್ಥಿಕ ಭದ್ರತೆಗಾಗಿ ಸಯವಾದ ಬಗೆಯಲ್ಲಿ ಲ್ಯ' ವಸೂಲು ಮಾಡಲು ಹೊರಟವು. ಈ ಪ್ರಕ್ರಿಯೆಯಲ್ಲಿ ುನ್ನತ ಶಿಕ್ಷಣ ಸಂಸ್ಥೆಗಳೂ ಸರಕಾರಗಳೂ ಜೊತೆಯಾಗಿ ು ಮಾಡಲಾರಂಭಿಸಿದುವು. ಒಂದು ವರದಿಯ ಪ್ರಕಾರ 013-2014 ರಲ್ಲಿ ಅಮೆರಿಕ ದೇಶದಲ್ಲಿ ಹೊರದೇಶದಿಂದ ಗಮಿಸಿದ 11,30,000 ವಿದ್ಯಾರ್ಥಿಗಳು ಅಧ್ಯಯನ ಡಿದ್ದು ಅದರಿಂದ ಆ ದೇಶಕ್ಕೆ 25 ಬಿಲಿಯನ್ ಡಾಲರ್ ದಾಯವಾಗಿದೆ. ಆಸ್ಟ್ರೇಲಿಯಾದಲ್ಲಿ 2001-2002ರಲ್ಲಿ ಸುಮಾರು 2 ಲಕ್ಷ ಹೊರದೇಶದ ವಿದ್ಯಾರ್ಥಿಗಳು ಅಭ್ಯಸಿಸುತ್ತಿದ್ದು ಆಗ ಆ ದೇಶದ ಆದಾಯ 4.2 ಬಿಲಿಯನ್ ಆಸ್ಟ್ರೇಲಿಯನ್ ಡಾಲರ್ ಆಗಿತ್ತು. ಜಾಗತೀಕರಣದ ಪರಿಣಾಮವಾಗಿ ಈ ಆದಾಯವು 2013-14ರಲ್ಲಿ 14 ಬಿಲಿಯನ್ ಡಾಲರುಗಳಿಗೆ ಏರಿತು. ಸಣ್ಣ ದೇಶ ನ್ಯೂಜಿಲೆಂಡ್‌ನಲ್ಲಿ 2001-2012ರಲ್ಲಿ ಸುಮಾರು ಒಂದು ಲಕ್ಷ ವಿದೇಶೀ ವಿದ್ಯಾರ್ಥಿಗಳು ಅಭ್ಯಾಸ ಮಾಡಿದ್ದು ಆ ದೇಶದ ಬೊಕ್ಕಸಕ್ಕೆ 1.7 ಬಿಲಿಯನ್ ಡಾಲರ್ ಆದಾಯವಾಗಿದ್ದು 2013-14ರಲ್ಲಿ ಅದು 6 ಬಿಲಿಯನ್ ಡಾಲರುಗಳಿಗೆ ಏರಿತು. ಈ ಬಗೆಯ ಆದಾಯದ ಕುರಿತು ಅಭಿವೃದ್ಧಿಶೀಲ ದೇಶಗಳು ಕಣ್ಣು ಮುಚ್ಚಿ ಕುಳಿತಿರಲು ಸಾಧ್ಯವಿಲ್ಲ. ಏಕೆಂದರೆ 21ನೇ ಶತಮಾನದ ಮೊದಲ ದಶಕದಲ್ಲಿ ಉನ್ನತ ಶಿಕ್ಷಣವು ಬಿಲಿಯನ್ ಡಾಲರ್ ಆದಾಯದ ಪ್ರಶ್ನೆಯಾಗಿ ಮಾರ್ಪಟ್ಟಿದೆ.

ಭಾರತದಲ್ಲಿ ಶಿಕ್ಷಣದ ಅಂತಾರಾಷ್ಟ್ರೀಕರಣ ಪ್ರಕ್ರಿಯೆಯು ಗ್ಯಾಟ್ (General Agreement of Trade in Servises ಹಾಗೂ ಡಬ್ಲ್ಯುಟಿಒ (World Trade Organizations) ಒಪ್ಪಂದದ ಮೇರೆಗೆ ಆರಂಭವಾಯಿತು. ಏಪ್ರಿಲ್ 1, 2005 ರಂದು ಜಾರಿಗೆ ಬಂದ ಈ ಒಪ್ಪಂದದ ಅನುಸಾರವಾಗಿ 10ನೇ ಪಂಚವಾರ್ಷಿಕ ಯೋಜನೆಯಲ್ಲಿ (2002-2007) ಉನ್ನತ ಶಿಕ್ಷಣವನ್ನು `Educational Services as sector of industry under GATS' ಎಂದು ಇತರ 12 ವಿಷಯಗಳೊಂದಿಗೆ ಸೇರಿಸಿ ಘೋಷಿಸಲಾಗಿದೆ. 11 ಮತ್ತು 12 ನೇ ಪಂಚವಾರ್ಷಿಕ ಯೋಜನೆಯಲ್ಲಿ 'ನಮ್ಮ ತರುಣರನ್ನು ಲೇಬರ್ ಮಾರುಕಟ್ಟೆಗೆ' ಸಿದ್ಧಪಡಿಸಬೇಕಾದ ಅಗತ್ಯವಿದೆ' ಎಂದು ಹೇಳಲಾಗಿದೆ ಮಾತ್ರವಲ್ಲ 2020ರ ಹೊತ್ತಿಗೆ



ಚೀನಾ ದೇಶಕ್ಕೆ ಅಗತ್ಯವಾಗಿರುವ 40 ಕೋಟಿ ಪರಿಣಿತರನ್ನು ನಾವು ಸೃಷ್ಟಿ ಮಾಡಬೇಕಾಗಿದೆ ಎಂದೂ ಅದು ಘೋಷಿಸಿದೆ. ಹೀಗಾಗಿ ಈಗ ಇದು ಸರಕಾರದ ಒಂದು ಅಂಗೀಕೃತ ಮತ್ತು ಆದ್ಯತೆಯ ಯೋಜನೆಯಾಗಿದೆ. ಈ ಯೋಜನೆಯ ಭಾಗವಾಗಿ ವಿಶ್ವವಿದ್ಯಾಲಯ ಅನುದಾನ ಆಯೋಗವು ಈ ಕೆಳಗಿನ ಮೂರು ಅಂಶಗಳನ್ನು ಜಾರಿಗೆ ತರಲು ಇದೀಗ ಕಾರ್ಯಪ್ರವೃತ್ತವಾಗಿದೆ. ಅವುಗಳೆಂದರೆ:

1. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಅಂತಾರಾಷ್ಟ್ರೀಯ ವಿದ್ಯಾರ್ಥಿಗಳ ಹಾಜರಾತಿ

2. ದೇಶೀಯ ಮತ್ತು ವಿದೇಶೀಯ ವಿದ್ಯಾಲಯಗಳು ಜಂಟಿಯಾಗಿ ಕೆಲಸ ಮಾಡುವ ಅವಳಿ ಕಾರ್ಯಕ್ರಮಗಳು (twinning programs) ಹಾಗೂ ವಿದ್ಯಾರ್ಥಿ ವಿನಿಮಯ ಕಾರ್ಯಕ್ರಮಗಳು (exchange programs) ಮತ್ತು

3. ಅತ್ಯುತ್ತಮ ಶಿಕ್ಷಣದ ರಫ್ತಿಗಾಗಿ ವಿಶೇಷ ವಲಯಗಳ ಸ್ಥಾಪನೆ (Special educational excellence and export zones - SEEEZ)

ಈ ಬದಲಾದ ಪರಿಸ್ಥಿತಿಗೆ ಅನುಗುಣವಾದ ಪಠ್ಯಕ್ರಮ, ಅಧ್ಯಯನದ ಅವಧಿ ಮತ್ತು ಮೌಲ್ಯಮಾಪನ ವಿಧಾನಗಳಲ್ಲಿ ಸೂಕ್ತವಾದ ಬದಲಾವಣೆಗಳನ್ನು ಮಾಡಿಕೊಳ್ಳಲು ಸಿದ್ಧತೆ ನಡೆಯುತ್ತಿದೆ. ಮುಖ್ಯವಾಗಿ ಇದೀಗ ಆಗಲೇ ಅನೇಕ ಖಾಸಗಿ ವಿಶ್ವವಿದ್ಯಾಲಯಗಳು ವಿದೇಶಿ ವಿಶ್ವವಿದ್ಯಾಲಯಗಳೊಂದಿಗೆ ಸಂಬಂಧ ಸ್ಥಾಪಿಸಿಕೊಂಡಿವೆ. ವಿದೇಶೀ ವಿಶ್ವವಿದ್ಯಾಲಯಗಳು ಭಾರತದಲ್ಲಿ ತಮ್ಮ ಅಧ್ಯಯನ ಕೇಂದ್ರಗಳನ್ನು ತೆರೆದಿವೆ. ವಿದೇಶೀ ಅಧ್ಯಾಪಕರುಗಳು ಮತ್ತು ಭಾರತೀಯ ಅಧ್ಯಾಪಕರುಗಳು ಒಟ್ಟಿಗೇ ಕೆಲಸ ಮಾಡಲು ಸಾಧ್ಯವಾಗುವ ಹಾಗೆ ತರಬೇತಿ ಕೇಂದ್ರಗಳನ್ನು ತೆರೆಯಲಾಗಿದೆ. ವಿಶ್ವವಿದ್ಯಾಲಯಗಳ ನಡುವೆ ಗುಣಾಂಕಗಳ (ಕ್ರೆಡಿಟ್ಸ್) ವರ್ಗಾವಣೆ ಸಾಧ್ಯವಾಗುತ್ತಿದೆ. ಈ ಕ್ರಮಗಳು ಉನ್ನತ ಶಿಕ್ಷಣದ ರೀತಿನೀತಿಗಳನ್ನು ಈಗಾಗಲೇ ಗಮನಾರ್ಹವಾಗಿ ಬದಲಾಯಿಸುತ್ತಿವೆ. ಸದ್ಯಕ್ಕೆ ಈ ಪ್ರಯೋಗವು ಕಾರ್ಪೊರೇಟ್ ಜಗತ್ತಿಗೆ ಬೇಕಾದ ಬುದ್ಧಿವಂತರನ್ನು ಮತ್ತು ಪರಿಣಿತ ಕೆಲಸಗಾರರನ್ನು ಸೃಷ್ಟಿಸಿಕೊಡುವಲ್ಲಿ ಸಫಲವಾಗಿವೆ.

ಇಂಥ ಬದಲಾದ ಪರಿಸ್ಥಿತಿಯಲ್ಲಿ ಸಾಮಾಜಿಕ ನ್ಯಾಯ ಎಂಬುದು ಚಲಾವಣೆಯಲ್ಲಿಲ್ಲದ ನಾಣ್ಯವಾಗುತ್ತಿದೆ. ಜೊತೆಗೆ ಮಾನವಿಕಗಳು ಬೇಡಿಕೆಯಿಲ್ಲದ ಅಧ್ಯಯನ ಶಿಸ್ತುಗಳಾಗಿ ಪರಿವರ್ತನೆಗೊಂಡು ದುರ್ಬಲವಾಗುತ್ತಿವೆ. 10 ನೇ ಪಂಚವಾರ್ಷಿಕ ಯೋಜನೆಯಲ್ಲಿ ಸಂಸ್ಕೃತ ಮತ್ತು ಹಿಂದೀ ಭಾಷೆಯ ಅಭಿವೃದ್ಧಿಗೆ ಕೆಲವು ಯೋಜನೆಗಳನ್ನು ರೂಪಿಸಿದ್ದರೂ ಉಳಿದ ಭಾರತೀಯ ಭಾಷೆಗಳ ಬಗೆಗೆ ಅದು ದಿವ್ಯ ಮೌನ ತಾಳಿದೆ. 11 ಮತ್ತು 12 ನೇ ಪಂಚವಾರ್ಷಿಕ ಯೋಜನೆಗಳಲ್ಲಿ ಭಾರತೀಯ ಭಾಷೆಗಳ ಬಗ್ಗೆ ಯಾಂತ್ರಿಕವಾಗಿ ನಾಲ್ಕು ಮಾತು ಹೇಳಲಾಗಿದೆಯಲ್ಲದೆ, ಅವುಗಳ ಅಭಿವೃದ್ಧಿಯ ಬಗೆಗೆ ಯಾವುದೇ ಯೋಜನೆಗಳನ್ನು ರೂಪಿಸಿಲ್ಲ. ಹೀಗೆ ಮಾರುಕಟ್ಟೆಯ ಧ್ಯೇಯ ಧೋರಣೆಗಳೇ ಉನ್ನತ ಶಿಕ್ಷಣವನ್ನು ನಿಯಂತ್ರಿಸುತ್ತಿರುವ ಇಂದಿನ ಸಂದರ್ಭದಲ್ಲಿ ಕನ್ನಡದಂಥ ಸಣ್ಣ ಭಾಷೆಗಳ ಭವಿಷ್ಯವೇನು ಎಂಬುದರ ಬಗ್ಗೆ ನಾವು ಗಂಭೀರವಾಗಿ ಚಿಂತಿಸಬೇಕು.

ಮೇಲೆ ಹೇಳಿದ ಮಾರುಕಟ್ಟೆ ಕೇಂದ್ರಿತ ಉನ್ನತ ಶಿಕ್ಷಣ ವ್ಯವಸ್ಥೆಯಲ್ಲಿ ಜ್ಞಾನದ ಉತ್ಪತ್ತಿ ಮತ್ತು ವಿತರಣೆಯು ಅಂತಾರಾಷ್ಟ್ರೀಯವಾಗುವುದು ಅನಿವಾರ್ಯ. ಈ ಪ್ರಕ್ರಿಯೆಯಲ್ಲಿ ಆಳುವ ಶಕ್ತಿಶಾಲೀ ಭಾಷೆಯಾಗಿ ಇಂಗ್ಲಿಷ್ ಹೊರಹೊಮ್ಮಿದೆ. 'ಇಂಗ್ಲಿಷ್ ಭಾಷೆ ಕಲಿತರೆ ಆರ್ಥಿಕವಾಗಿ ಅಭಿವೃದ್ಧಿ ಹೊಂದಬಹುದು' ಎಂಬ ನಂಬಿಕೆಯ ಹಿನ್ನೆಲೆಯಲ್ಲಿ ಜನರೂ ಈ ಬೆಳವಣಿಗೆಯನ್ನು ಒಪ್ಪಿಕೊಂಡಿದ್ದಾರೆ. ಇದು ಕನ್ನಡವೂ ಸೇರಿದಂತೆ ಜಗತ್ತಿನ ಅನೇಕ ಸಣ್ಣ ಭಾಷೆಗಳ ಕುರಿತು ಆಯಾ ದೇಶದ ಸರಕಾರಗಳು ಮತ್ತು ಜನರು ನಿರ್ಲಕ್ಷ್ಯ ವಹಿಸುವಂತೆ ಮಾಡಿದೆ. ಇದರಿಂದ ಜಗತ್ತಿನಾದ್ಯಂತ ಇಂದು ಅನೇಕ ಭಾಷೆಗಳು ಅವಸಾನದ ಅಂಚಿಗೆ ಬಂದು ನಿಲ್ಲುವಂತಾಗಿದೆ. ಸಣ್ಣ ಭಾಷೆಗಳ ಧ್ವನಿ ಉಡುಗಿವೆ, ಅವುಗಳ ನಾಲಗೆ ಕಟ್ಟಿಹೋಗಿವೆ. ಉಳಿಯುವಿಕೆಗಾಗಿ ಅವು ಹೆಣಗಾಡುತ್ತಿವೆ. ಕಲಿಕೆ ಮತ್ತು ಉಪಯೋಗಗಳ ವಿಷಯದಲ್ಲಿ ಇಂಗ್ಲಿಷ್ ಸಾವಿರಾರು ಸಣ್ಣ ಭಾಷೆಗಳನ್ನು ಅಪಾಯದ ಅಂಚಿಗೆ ತಳ್ಳಿದೆ.

ಭಾರತದಲ್ಲಿ ಈ ಸಮಸ್ಯೆ ಇನ್ನೂ ತೀವ್ರತರವಾಗಿದ್ದರೂ, ಕೋಮುವಾದ, ಧರ್ಮ, ಭ್ರಷ್ಟಾಚಾರ, ಜಾತಿ, ರಾಜಕೀಯ ಮತ್ತಿತರ ವಿಷಯಗಳ ಕುರಿತು ಇಲ್ಲಿ ಚರ್ಚೆ ನಡೆದ ಹಾಗೆ, ಅವಸಾನದ ಅಂಚಿನಲ್ಲಿರುವ ಭಾಷೆಗಳ ಉಳಿಯುವಿಕೆಯ ಕುರಿತು ಸಂವಾದ ನಡೆಯುತ್ತಿಲ್ಲ. ಇಂದು ಬಹಳ ಪ್ರಭಾವಶಾಲಿಯಾಗಿರುವ ಮಾಧ್ಯಮಗಳಿಗೂ ಈ ಕುರಿತು ಆಸಕ್ತಿಯಿಲ್ಲ. ಭಾಷೆಯ ಅವನತಿಯ ಅಪಾಯಗಳ ಕುರಿತು ತಿಳಿವಳಿಕೆ ಇಲ್ಲದಿರುವುದೇ ಇದಕ್ಕೆ ಪ್ರಮುಖ ಕಾರಣ.

ಇಂದು ವಿಶ್ವದಾದ್ಯಂತ ಜೀವಂತವಿರುವ ಸುಮಾರು 7000 ಭಾಷೆಗಳನ್ನು ಸಣ್ಣ ಭಾಷೆಗಳೆಂದು ಗುರುತಿಸಲಾಗಿದೆ. ಇದರಲ್ಲಿ ಸುಮಾರು 3700 ರಷ್ಟು ಭಾಷೆಗಳು ಭಾರತದಲ್ಲಿಯೇ ಇವೆ. ಇದು ಸ್ಥೂಲ ರೂಪದ ತಿಳಿವಳಿಕೆ. ಆದರೆ ಸೂಕ್ಷ್ಮವಾಗಿ ಮತ್ತು ಭಿನ್ನವಾಗಿ ನೋಡಿದರೆ ಇವುಗಳ ಸಂಖ್ಯೆ ಇನ್ನೂ ಹೆಚ್ಚಾಗುತ್ತದೆ. ಉದಾಹರಣೆಗೆ ಇಂಗ್ಲಿಷಿಗೆ ಹೋಲಿಸಿದರೆ, ಹಿಂದಿ ಸಣ್ಣ ಭಾಷೆ ಮತ್ತು ಅದಕ್ಕೆ ಇಂಗ್ಲಿಷಿನಿಂದ ಅಪಚಾರವಾಗುತ್ತಿದೆ, ಆದರೆ ರಾಜಸ್ಥಾನಿ, ಭೋಜಪುರಿ, ಮೈಥಿಲಿ ಮತ್ತಿತರ ಭಾಷೆಗಳನ್ನು ಗಮನಿಸಿದಾಗ ಅವುಗಳ ಮೇಲೆ ಹಿಂದಿ ಭಾಷೆಯಿಂದಲೇ ಅಪಚಾರವಾಗುವುದನ್ನು ಕಾಣುತ್ತೇವೆ. ಹಿಂದಿಗೆ ಹೋಲಿಸಿದರೆ ಕನ್ನಡ ಭಾಷೆ ಸಣ್ಣದು. ಕಾರಣ ಹಿಂದಿ ಕನ್ನಡದ ಮೇಲೆ ಆಕ್ರಮಣ ಮಾಡುತ್ತದೆ. ಕನ್ನಡ ತುಳುವನ್ನು ಆಕ್ರಮಿಸಿಕೊಳ್ಳುತ್ತದೆ. ತುಳುವನ್ನು ಮಾತ್ರ ಗಮನಿಸಿದರೂ ಸಾಕು, ಅಲ್ಲಿ ದಲಿತರ ತುಳು ಸಾಮಾನ್ಯವಾಗಿ ಸವರ್ಣೀಯರ ತುಳುವಿಗೆ ತಲೆಬಾಗುತ್ತದೆ. ನಾವು ನೋಡುತ್ತಿದ್ದಂತೆಯೇ ಕೊರಗ ಭಾಷೆಯ ಜಾಗವನ್ನು ತುಳು ಪೂರ್ತಿಯಾಗಿ ಆಕ್ರಮಿಸಿಕೊಂಡಿತು. ಹೀಗೆ ಕೊನೆಯಿಲ್ಲದ ಈ ಸಂಕಷ್ಟದಲ್ಲಿ ಭಾಷಾ ಅಲ್ಪಸಂಖ್ಯಾತರನ್ನು ನಾವು ಇದುವರೆಗೆ ಸರಿಯಾಗಿ ನಿರ್ವಚಿಸಿಯೇ ಇಲ್ಲ. ನಮ್ಮ ದೇಶಕ್ಕೆ ರಾಷ್ಟ್ರೀಯ ಭಾಷಾ ನೀತಿ ಎಂಬುದೇ ಇಲ್ಲ.

ಭಾರತದಲ್ಲಿ ಇದೀಗ 22 ಭಾಷೆಗಳನ್ನು ಸಂವಿಧಾನದ ಎಂಟನೆ ಪರಿಚ್ಛೇದಕ್ಕೆ ಸೇರಿಸಿ ಅವುಗಳನ್ನು ಸಬಲೀಕರಣಗೊಳಿಸಲು ಯತ್ನಿಸಲಾಗಿದೆ. ಇದರಲ್ಲಿ 18 ಭಾಷೆಗಳು ಉತ್ತರ ಭಾರತಕ್ಕೆ ಸೇರಿದರೆ, ಕೇವಲ ನಾಲ್ಕು ಭಾಷೆಗಳು ದ್ರಾವಿಡ ಭಾಷಾವರ್ಗಕ್ಕೆ ಸೇರಿವೆ. ಈ ನಡುವೆ ಇತರ 38 ಭಾಷೆಗಳು ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ಸೇರಲು ಸರಕಾರದ ಮೇಲೆ ಒತ್ತಡ ಹಾಕುತ್ತಿದ್ದು ಅದರಲ್ಲಿ ಕೇವಲ ಎರಡು (ತುಳು ಮತ್ತು ಕೊಡವ) ದ್ರಾವಿಡ ವರ್ಗಕ್ಕೆ ಸೇರಿವೆ. ಈ ಬೇಡಿಕೆಗಳನ್ನು ಸವಾಲಾಗಿ ಸ್ವೀಕರಿಸಿ, ಭಾಷೆಗಳ ಅಭಿವೃದ್ಧಿಗೆ ಕೆಲಸ ಮಾಡಬೇಕಾಗಿದ್ದ ಸರಕಾರ ಇದೀಗ ಎಂಟನೆಯ ಪರಿಚ್ಛೇದದ ಕೆಲವು ಸವಲತ್ತುಗಳನ್ನೇ ಕಡಿತಗೊಳಿಸಲು ಆರಂಭಿಸಿದೆ. ಉದಾಹರಣೆಗೆ, ಕೇಂದ್ರ ಲೋಕಸೇವಾ ಆಯೋಗವು ಎಂಟನೇ ಪರಿಚ್ಛೇದದಲ್ಲಿ ಹೊಸದಾಗಿ ಸೇರುವ ಭಾಷೆಗಳಲ್ಲಿ ಇದೀಗ ಪರೀಕ್ಷೆಗಳನ್ನು ನಡೆಸಬೇಕಾಗಿಲ್ಲ, ಅಂದರೆ, ಸ್ಪರ್ಧಿಯೊಬ್ಬ ಮಾತೃ ಭಾಷೆಗೆ ಅಲ್ಲಿ ಅವಕಾಶವಿಲ್ಲ. ಸಣ್ಣ ಭಾಷೆಗಳಲ್ಲಿ ಪ್ರಶ್ನೆಪತ್ರಿಕೆಗಳನ್ನು ಸಿದ್ಧಮಾಡುವವರಿಲ್ಲವೆಂದು ಅದು ಹೇಳುತ್ತದೆ. ಪ್ರಶ್ನೆ ಪತ್ರಿಕೆ ತಯಾರು ಮಾಡುವಂಥ ವಿದ್ವಾಂಸರ ಸೃಷ್ಟಿಗೆ ಸರಕಾರ ಏನು ಕ್ರಮ ಕೈಗೊಂಡಿದೆ ಎಂದು ಕೇಳಿದರೆ ಅದರ ಬಳಿ ಉತ್ತರವಿಲ್ಲ. ಇಂಥ ಪ್ರಕ್ರಿಯೆಗಳ ಜೊತೆಗೆ ಕೆಲವು ರಾಜ್ಯ ಸರಕಾರಗಳೂ ಸೇರಿಕೊಂಡಿವೆ. ಉದಾಹರಣೆಗೆ ದೆಹಲಿಯಲ್ಲಿ ಹಿಂದಿ, ಪಂಜಾಬಿ ಮತ್ತು ಉರ್ದು ಅಧಿಕೃತ ಭಾಷೆಗಳಾದರೆ, ಪಶ್ಚಿಮ ಬಂಗಾಲದಲ್ಲಿ ಬಾಂಗ್ಲಾ, ನೇಪಾಳಿ, ಹಿಂದಿ, ಉರ್ದು ಮತ್ತು ಸಂತಾಲಿ ಭಾಷೆಗಳು ಅಧಿಕೃತ ರಾಜ್ಯ ಭಾಷೆಗಳಾಗಿವೆ. ತೆಲಂಗಾಣದಲ್ಲಿ ತೆಲುಗುವಿನ ಜೊತೆಗೆ ಉರ್ದುವನ್ನು ಅಂಗೀಕರಿಸಲಾಗಿದೆ. ಆದರೆ ಕರ್ನಾಟಕವು ತುಳು ಮತ್ತು ಕೊಡವ ಭಾಷೆಗಳನ್ನು ಅಧಿಕೃತ ರಾಜ್ಯ ಭಾಷೆಯಾಗಿ ಒಪ್ಪಿಕೊಳ್ಳಲು ಹಿಂದೇಟು ಹಾಕುತ್ತಿದೆ. ರಾಜ್ಯಕ್ಕೇ ಬೇಡವಾದ ಭಾಷೆಯನ್ನು ಕೇಂದ್ರ ಅಂಗೀಕರಿಸುವುದಾದರೂ ಹೇಗೆ? ಹೀಗೆ ನಮ್ಮ ಭಾಷಾ ರಾಜಕೀಯವು ಜಾಗತೀಕರಣ ಪ್ರಕ್ರಿಯೆಗಳೊಂದಿಗೆ ಸೇರಿಕೊಂಡು ಸಂಕೀರ್ಣವಾದ ಸನ್ನಿವೇಶ ನಿರ್ಮಾಣಗೊಂಡಿದೆ.

ಯುನೆಸ್ಕೋವು ಸಿದ್ಧಪಡಿಸಿದ 'ಭಾಷೆಗಳ ಜಾಗತಿಕ ಭೂಪಟ'ವು ಭಾರತದಲ್ಲಿನ 172 ಭಾಷೆಗಳನ್ನು ಅಪಾಯದ ಅಂಚಿನಲ್ಲಿರುವ ಭಾಷೆಗಳೆಂದೂ, ಅದರಲ್ಲಿ 101 ಭಾಷೆಗಳನ್ನು ಅತೀವ ಅಪಾಯದಲ್ಲಿರುವ ಭಾಷೆಗಳೆಂದೂ, 71 ಭಾಷೆಗಳನ್ನು ಎಲ್ಲ ಬಗೆಯ ಅಪಾಯಗಳಿಗೆ ಬಲಿಯಾಗುತ್ತಿರುವ ಭಾಷೆಗಳೆಂದೂ ಗುರುತಿಸಿದೆ. (Christopher Moseley, ed., UNESCO, Paris 2010) ಈ ಸಣ್ಣ ಭಾಷೆಗಳನ್ನಾಡುವ ಜನರಲ್ಲಿಯೂ ತಮ್ಮ ಮಾತೃ ಭಾಷೆಗಳ ಬಗೆಗೆ ಅಭಿಮಾನ ಕಡಿಮೆಯಾಗಿ, ಇಂಗ್ಲಿಷಿನ ಮೇಲೆ ಮೋಹ ಹೆಚ್ಚಾಗುತ್ತಲಿದೆ. ಹೀಗೆ ಭಾರತದಲ್ಲಿ ಸುಮಾರು ಮೂರು ಕೋಟಿಯ ಆರವತ್ತು ಲಕ್ಷ ಜನಗಳ ಮಾತೃ ಭಾಷೆಗಳು ಇಂದು ಪತನಮುಖಿ ಯಾಗಿವೆ. ಭಾಷಾವಾರು ಪ್ರಾಂತ್ಯಗಳ ರಚನೆಯಾದಾಗ ಪ್ರಾದೇಶಿಕ ಭಾಷೆಗಳಿಗೆ ಮಹತ್ವ ಬಂದವು, ಆದರೆ ಈ ಹಂತದಲ್ಲಿ ಪ್ರಾದೇಶಿಕ ಭಾಷೆಗಳ ಆಶ್ರಯದಲ್ಲಿರುವ, ಆದರೆ ಯಾವುದೇ ರಾಜ್ಯದ ಅಧಿಕೃತ ಭಾಷೆಗಳಲ್ಲದ ಸಣ್ಣ ಭಾಷೆಗಳು ತೀವ್ರ ಉಪೇಕ್ಷೆಗೆ ಒಳಗಾದವು. ಸುಮಾರು ಒಂದು ಕೋಟಿ ಜನರಾಡುವ ತುಳುವನ್ನು ಕರ್ನಾಟಕ ರಾಜ್ಯ ಇಂದಿನವರೆಗೆ ಅಧಿಕೃತ ಭಾಷೆಯೆಂದೇ ಘೋಷಿಸಿಲ್ಲವಲ್ಲ! ಖಾಸಿ, ಜೈಂಟಿಯಾ, ಕೊಡವ, ಬ್ಯಜ ಮೊದಲಾದ ಅನೇಕ ಸುಂದರ ಭಾಷೆಗಳ ಕತೆಯಾದರೂ ಅಷ್ಟೆ. ಕರ್ನಾಟಕದಲ್ಲಿ ಇವತ್ತಿಗೂ ತುಳು-ಕೊಡವದಂಥ ಭಾಷೆಗಳಿಗೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಪ್ರಾಧ್ಯಾಪಕರೇ ಇಲ್ಲ. ಕನ್ನಡದ ಅಧ್ಯಾಪಕರೇ ಈ ಭಾಷೆಗಳ ಉದ್ಧಾರದ ಕೆಲಸಗಳನ್ನೂ ಮಾಡಬೇಕಾಗಿದೆ. ದ್ರಾವಿಡಾ ಭಾಷಾ ವರ್ಗದಲ್ಲಿ ತಮಿಳು, ಮಲೆಯಾಳಂ, ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಮಾತ್ರ ಸಾವಿರಾರು ಅಧ್ಯಾಪಕರಿದ್ದಾರೆ, ಉಳಿದ ಸುಮಾರು 24 ಸ್ವತಂತ್ರ ಭಾಷೆಗಳಲ್ಲಿ ಪ್ರಾಧ್ಯಾಪಕರು ಏಕಿಲ್ಲ? ಒಟ್ಟಾರೆಯಾಗಿ ಇದರರ್ಥ ಇಷ್ಟೇ:


ಇಂದು ಸಣ್ಣ ಭಾಷೆಗಳ ಅಭಿವೃದ್ಧಿಯ ಕುರಿತು ಸರಕಾರಗಳಾಗಲೀ ವಿಶ್ವವಿದ್ಯಾಲಯಗಳಾಗಲೀ ಮಾಡಬೇಕಾದಷ್ಟು ಕೆಲಸಗಳನ್ನು ಮಾಡುತ್ತಿಲ್ಲ. ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಪ್ರಬಲವಾಗಿರುವ ಜನರ ಭಾಷೆಗಳು ಎಲ್ಲ ಸವಲತ್ತುಗಳನ್ನೂ ಪಡೆದುಕೊಳ್ಳುತ್ತಿವೆ. ದುರ್ಬಲರ ನಾಲಗೆ ಕಟ್ಟಿ ಹೋಗಿದೆ, ಅವರ ಭಾಷೆಗಳು ವಿನಾಶದತ್ತ ಚಲಿಸುತ್ತಿವೆ. ಸಂಸ್ಕೃತಿಯ ಬಗೆಗೆ ತಿಳಿವಳಿಕೆಯಿಲ್ಲದ ಅಭಿವೃದ್ಧಿಯ ಪರಿಕಲ್ಪನೆಯು ಮೂಲತಃ ಅನಾಹುತಕಾರಿ ಯಾದುದು ಎಂಬುದನ್ನು ಜಗತ್ತಿನ್ನೂ ಅರ್ಥಮಾಡಿಕೊಂಡಿಲ್ಲ.

ಇಂಥ ಸಂದರ್ಭದಲ್ಲಿ ನಾವು ನಮ್ಮ ಸಂಶೋಧನೆಗಳ ಬಗೆಗೆ ಹೊಸದಾಗಿ ಯೋಚಿಸುವ ಕಾಲ ಬಂದಿದೆ. ಕನ್ನಡ ವಿಶ್ವವಿದ್ಯಾಲಯದಂಥ ಭಾಷಾಕೇಂದ್ರಿತ ಸಂಸ್ಥೆಯ ಜವಾಬ್ದಾರಿಗಳನ್ನೂ ನಾವು ಪುನರ್ ರೂಪಿಸಿಕೊಳ್ಳಬೇಕಾಗಿದೆ. ಒಂದೆಡೆ ಸಂಶೋಧನೆಯ ಮೇಲೆ ಹೆಚ್ಚುತ್ತಿರುವ ದೌರ್ಜನ್ಯಗಳು, ಇನ್ನೊಂದೆಡೆ ತಿಳಿವಳಿಕೆಗಳು ಅಂತಾರಾಷ್ಟ್ರೀಯಗೊಳ್ಳುತ್ತಿರುವ ಆಧುನಿಕ ಪ್ರಕ್ರಿಯೆ, ಇವೆರಡರ ನಡುವೆ ನಾವು ಬದುಕುತ್ತಾ ನಮ್ಮ ಧ್ವನಿಯು ಇತರರಿಗೆ ಕೇಳುವಂತೆ ಕೆಲಸ ಮಾಡಬೇಕಾಗಿದೆ. ನಮಗೆ ನಾವೇ ಮಾತಾಡಿಕೊಳ್ಳುವ ಕಾಲ ಮುಗಿದುಹೋಗಿದೆ. ಜಗತ್ತಿನೊಡನೆ ಗಂಭೀರವಾಗಿ ಸಂವಾದಿಸಬೇಕಾದ ಕಾಲ ಸನ್ನಿಹಿತವಾಗಿದೆ.

ನಮ್ಮ ಯೋಚನೆಗಳ ಬಗ್ಗೆ ಎಚ್ಚರದಿಂದಿರೋಣ,
ಅವು ಪದಗಳಾಗುತ್ತವೆ
ನಮ್ಮ ಪದಗಳ ಬಗ್ಗೆ ಎಚ್ಚರದಿಂದಿರೋಣ
ಅವು ಕ್ರಿಯೆಗಳಾಗುತ್ತವೆ.
ನಮ್ಮ ಕ್ರಿಯೆಗಳ ಬಗ್ಗೆ ಎಚ್ಚರದಿಂದಿರೋಣ
ಅವು ಅಭ್ಯಾಸಗಳಾಗುತ್ತವೆ.
ನಮ್ಮ ಅಭ್ಯಾಸಗಳ ಬಗ್ಗೆ ಎಚ್ಚರದಿಂದಿರೋಣ
ಅವು ವ್ಯಕ್ತಿತ್ವವಾಗಿರುತ್ತದೆ.
ನಮ್ಮ ವ್ಯಕ್ತಿತ್ವದ ಬಗ್ಗೆ ಎಚ್ಚರದಿಂದಿರೋಣ
ಅವು ನಾಡಿನ ಭವಿಷ್ಯವಾಗಿರುತ್ತದೆ.

• ಡಾ. ಪುರುಷೋತ್ತಮ ಬಿಳಿಮಲೆ
(ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಪೀಠ
ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯ, ನವದೆಹಲಿ)

ತೀವ್ರಗೊಳ್ಳುತ್ತಿರುವ ಅಲ್ಪಸಂಖ್ಯಾತರ ದಮನ ಮತ್ತು ಹೆಚ್ಚುತ್ತಿರುವ ಕೇಸರೀಕರಣ




ಮೋದಿ ಸರ್ಕಾರದ ಪದಾಧಿಕಾರಿಗಳ ಬದ್ಧತೆ ಏನಿದ್ದರೂ ಸಂಘ ಪರಿವಾರದ ಮೂಲಪುರುಷನಾದ ಸಾವರ್ಕರ್ ಪ್ರತಿಪಾದಿಸಿದ ಹಿಂದೂತ್ವ ಸಿದ್ಧಾಂತಕ್ಕೆ ಮತ್ತು ಅದನ್ನು ಮತ್ತಷ್ಟು ತೀಕ್ಷ್ಣಗೊಳಿಸಿದ 'ಗುರು' ಗೋಲ್ವಾಲ್ಕರರ ಉಪಾಟಗಳಿಗೆ ಹೊರತು ಭಾರತದ ಸಂವಿಧಾನಕ್ಕೆ ಅಲ್ಲವೇ ಅಲ್ಲ. ಅವರು ಇದನ್ನು ಆರಂಭದಿಂದಲೂ ಆಡಿ ತೋರಿಸುತ್ತಾ ಬಂದಿದ್ದಾರೆ. ಈ ಸರ್ಕಾರದ ಮೊದಲ ಆದ್ಯತೆ ದಲಿತ, ಆದಿವಾಸಿ, ಅಲ್ಪಸಂಖ್ಯಾತ ಸಮುದಾಯಗಳನ್ನು ದಮನ ಮಾಡುವ ಆರೆಸ್ಸೆಸ್‌ನ ಕಾರ್ಯಸೂಚಿಗೆ ಎಂಬ ನಿತ್ಯಸತ್ಯವನ್ನು ಸಾಬೀತುಪಡಿಸುವಂತಹ ಎರಡು ಘಟನೆಗಳು ಇತ್ತೀಚೆಗೆ ನಡೆದಿವೆ. ಅವುಗಳಲ್ಲೊಂದು ವಿಶ್ವ ಯೋಗ ದಿನಾಚರಣೆಗೆ ಸಂಬಂಧಪಟ್ಟುದಾದರೆ ಇನ್ನೊಂದು ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ ಯೋಜನೆಗೆ ಸಂಬಂಧಿಸಿದೆ.

ವಿಶ್ವ ಯೋಗ ದಿನಾಚರಣೆ ಮತ್ತು ಮುಸ್ಲಿಮರು

ಇದೀಗ ತಮ್ಮ ಸರ್ಕಾರದ ನೀತಿಯನ್ವಯ ಸರ್ಕಾರಿ ನೌಕರಿಗಳಿಗೆ ಮುಸ್ಲಿಮರನ್ನು ನೇಮಕ ಮಾಡಲಾಗುವುದಿಲ್ಲವೆಂದು ಖುದ್ದು ಮೋದಿ ಸರ್ಕಾರವೇ ಲಿಖಿತವಾಗಿ ಒಪ್ಪಿಕೊಂಡಿರುವ ವಿದ್ಯಮಾನವೊಂದು ಘಟಿಸಿದೆ! ಈ ಸುದ್ದಿ ಮಿಂಚಿನ ವೇಗದಲ್ಲಿ ದೇಶದೆಲ್ಲೆಡೆ ಪ್ರಸಾರವಾಗುತ್ತಿದ್ದಂತೆ ಸರ್ಕಾರದಿಂದ ನಿರಾಕರಣೆ ಎಂಬ ವಾಡಿಕೆಯ ಪ್ರಹಸನವೂ ಜರುಗಿತು. ಕಳೆದ ವರ್ಷ ವಿಶ್ವ ಯೋಗ ದಿನಾಚರಣೆಯನ್ನು ಭಾರಿ ಅದ್ದೂರಿಯಾಗಿ ನಡೆಸಲಾಯಿತಲ್ಲವೇ. ಆ ಬಳಿಕ 'ಮಿಲ್ಲಿ ಗೆಜೆಟ್' ಪತ್ರಿಕೆಯ ವರದಿಗಾರ್ತಿ ಪುಷ್ಪಾ ಶರ್ಮ ಎಂಬಾಕೆ ಮಾಹಿತಿ ಹಕ್ಕು ಕಾಯ್ದೆಯಡಿ ಆಯುಷ್ ಮಂತ್ರಾಲಯದಿಂದ ಕೆಲವೊಂದು ಮಾಹಿತಿಗಳನ್ನು ಕೋರಿದ್ದರು. ವಿಶ್ವ ಯೋಗ ದಿನಾಚರಣೆ ಪ್ರಯುಕ್ತ ನೇಮಕ ಮಾಡಿಕೊಂಡ ಶಿಕ್ಷಕರು ಮತ್ತು ತರಬೇತುದಾರರ ಪೈಕಿ ಎಷ್ಟು ಮಂದಿ ಮುಸ್ಲಿಮರಿದ್ದರು ಎಂದಾಕೆ ತಿಳಿಯಬಯಸಿದ್ದರು. ಯಾವುದೇ ಉತ್ತರ ಬರದಿದ್ದಾಗ ಪಟ್ಟುಬಿಡದೆ ಒಂದರ ಮೇಲೊಂದರಂತೆ ಅರ್ಜಿಗಳನ್ನು ಸಲ್ಲಿಸುತ್ತಾ ಹೋದರು. ಕೊನೆಗೊಮ್ಮೆ ಉತ್ತರಿಸಿದ ಇಲಾಖೆ, ವಿಶ್ವ ಯೋಗ ದಿನಾಚರಣೆ ಕಾರ್ಯಕ್ರಮಕ್ಕೆ ಮುಸ್ಲಿಂ ಶಿಕ್ಷಕರು ಮತ್ತು ತರಬೇತುದಾರರನ್ನು ನೇಮಕ ಮಾಡಿಕೊಂಡಿರಲಿಲ್ಲ ಎಂದು ತಿಳಿಸಿದೆ. ಆಯುಷ್ ಮಂತ್ರಾಲಯದಿಂದ ಸಿಕ್ಕಿರುವ ಖಡಕ್ ಉತ್ತರ ಹೀಗಿದೆ: "ನಮ್ಮ ಇಲಾಖೆಯಲ್ಲಿ ಮುಸ್ಲಿಮರನ್ನು ನೇಮಕ ಮಾಡುವ ಕ್ರಮ ಇಲ್ಲ; ಇದು ಸರ್ಕಾರದ ನೀತಿನಿಯಮಗಳಿಗೆ ಅನುಗುಣವಾಗಿದೆ... ಸರ್ಕಾರದ ನಿಯಮಗಳನುಸಾರ ನಾವು ಯಾವನೇ ಮುಸ್ಲಿಂ ಅಭ್ಯರ್ಥಿಯನ್ನು ಕರೆಯಲೂ ಇಲ್ಲ, ಆರಿಸಲೂ ಇಲ್ಲ ಅಥವಾ ವಿದೇಶಗಳಿಗೆ ಕಳುಹಿಸಲೂ ಇಲ್ಲ"! ಸಚಿವಾಲಯ ನೀಡಿರುವ ಮಾಹಿತಿಯ ಪ್ರಕಾರ ಒಟ್ಟು 3841 ಮುಸ್ಲಿಂ ಅಭ್ಯರ್ಥಿಗಳು ಯೋಗ ಶಿಕ್ಷಕ/ತರಬೇತುದಾರ ಹುದ್ದೆಗೆ ಅರ್ಜಿ ಹಾಕಿದ್ದರು. ಇವರ ಪೈಕಿ 711 ಮಂದಿ ಯೋಗ ತರಬೇತುದಾರರಾಗಿದ್ದು ವಿದೇಶಗಳಲ್ಲಿ ಅಲ್ಪಾವಧಿಯ ನೌಕರಿಗಾಗಿ ಕೋರಿದ್ದರು. ಆದರೆ ಒಬ್ಬನೇ ಒಬ್ಬ ಮುಸ್ಲಿಮನನ್ನಾದರೂ ಸಂದರ್ಶನಕ್ಕೆ ಕರೆಯಲಾಗಿಲ್ಲ, ಅಷ್ಟೇ ಅಲ್ಲ, ದೇಶದೊಳಗಿನ ಉದ್ಯೋಗಗಳಿಗೂ ಮುಸ್ಲಿಮರನ್ನು ಪರಿಗಣಿಸಲಾಗಿಲ್ಲ, ಆದರೆ 26 ಹಿಂದೂ ತರಬೇತುದಾರರನ್ನು ವಿದೇಶಗಳಿಗೆ ಕಳುಹಿಸಲಾಗಿದೆ. ಯೋಗ ಶಿಕ್ಷಕ/ತರಬೇತುದಾರರಲ್ಲಿ ಕ್ರೈಸ್ತರ ಸಂಖ್ಯೆ ಎಷ್ಟಿತ್ತೆಂದು ಯಾರಾದರೂ ಕೇಳಿದರೆ ಇದೇ ತೆರನಾದ ಉತ್ತರ ಸಿಗುವುದರಲ್ಲಿ ಅನುಮಾನವಿಲ್ಲ. ಸದರಿ ಘಟನೆ ಈ ಸರ್ಕಾರದ "ಸಬ್ ಕಾ ಸಾಥ್ ಸಬ್ ಕಾ ವಿಕಾಸ್" ಘೋಷಣೆ ತೀರ ಅಪ್ರಾಮಾಣಿಕವಷ್ಟೇ ಅಲ್ಲ ಶುದ್ಧಾಂಗ ಸುಳ್ಳು ಕೂಡ ಆಗಿದೆ ಎಂದು ಸ್ಪಷ್ಟವಾಗಿ ಸಾರುತ್ತಿದೆ.

ಮೂರ್ತಿ ಕ್ಲಾಸಿಕಲ್ ಲೈಬ್ರರಿ ಮೇಲೆ ಕರಿನೆರಳು

ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯಾ ಭಾರತದ ಪ್ರಾಚೀನ ಮೇರುಕೃತಿಗಳನ್ನು ಇಂಗ್ಲಿಷ್ ಭಾಷೆಗೆ ಅನುವಾದಿಸುವ ಒಂದು ಮಹತ್ವಾಕಾಂಕ್ಷಿ ಯೋಜನೆಯಾಗಿದೆ.



ಸುಮಾರು ಆರು ವರ್ಷಗಳ ಹಿಂದೆ ಪ್ರಾರಂಭವಾಗಿರುವ ಈ ಯೋಜನೆಯ ನೇತೃತ್ವವನ್ನು ಕೊಲಂಬಿಯ ವಿಶ್ವವಿದ್ಯಾನಿಲಯದ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸ ಶೆಲ್ಡನ್ ಪೊಲಾಕ್ ಅವರಿಗೆ ವಹಿಸಲಾಗಿದೆ. ಮೂರ್ತಿ ಕ್ಲಾಸಿಕಲ್ ಲೈಬ್ರರಿ ಆಫ್ ಇಂಡಿಯವನ್ನು ಹುಟ್ಟುಹಾಕಿರುವ ರೋಹನ್ ಮೂರ್ತಿ ಇನ್ಯಾರೂ ಅಲ್ಲ, ಇನ್‌ಫೋಸಿಸ್‌ನ ಸ್ಥಾಪಕರಾದ ನಾರಾಯಣಮೂರ್ತಿಯವರ ಮಗ. ಲೈಬ್ರರಿಯ ವಿವಿಧ ವಿದ್ವಾಂಸರ ಆರು ವರ್ಷಗಳ ಪರಿಶ್ರಮದ ಬಳಿಕ 2015ರಲ್ಲಿ ಮೊದಲ ಬಾರಿಗೆ 9 ಕೃತಿಗಳು ಬಿಡುಗಡೆಗೊಂಡಿದ್ದವು. ಅವುಗಳ ಕುರಿತು ಇಲ್ಲಿಯತನಕ ಯಾವುದೇ ಆಕ್ಷೇಪಗಳು ಕೇಳಿಬಂದಿರಲಿಲ್ಲ, ಆದರೆ ಈಗ ಇದ್ದಕ್ಕಿದ್ದಂತೆ ಈ ಯೋಜನೆಯ ಮೇಲೆ ಸಂಘ ಪರಿವಾರದ ಕೆಂಗಣ್ಣು ಬಿದ್ದಿದೆ. ಇದರ ಫಲವಾಗಿ 132 ಭಾರತೀಯ ಅಧ್ಯಾಪಕರು ಸೇರಿಕೊಂಡು ಅಂತರ್ಜಾಲದಲ್ಲಿ ಅಹವಾಲೊಂದನ್ನು ಹರಿಯಬಿಟ್ಟಿದ್ದಾರೆ. ಅದರಲ್ಲಿ ಈ ಶೆಲ್ಡನ್ ಪೊಲಾಕ್ ಎಂಬಾತ ಮೆಕಾಲೆ ಮತ್ತು ಮ್ಯಾಕ್ಸ್ ವೀಬರ್ ಎಂಬವರ ಅನುಯಾಯಿ; ಆತ ಹಿಂದೆ ಬರೆದಿರುವ ಲೇಖನಗಳು ತುಂಬಾ ದೋಷಪೂರಿತವಾಗಿದ್ದು ಭಾರತದ ಸಾಂಸ್ಕೃತಿಕ ಪರಂಪರೆಯನ್ನು ತಪ್ಪಾಗಿ ನಿರೂಪಿಸಿವೆ ಎಂದು ಆರೋಪಿಸಲಾಗಿದೆ. ಅಹವಾಲಿಗೆ ಸಹಿ ಹಾಕಿರುವವರಲ್ಲಿ ಹೆಚ್ಚಿನವರು ವಿಜ್ಞಾನಿಗಳು ಅಥವಾ ಗಣಿತಜ್ಞರಾಗಿದ್ದು ಕೇವಲ ಬೆರಳೆಣಿಕೆಯಷ್ಟೆ ಮಂದಿ ಭಾಷಾತಜ್ಞರು ಎಂದು ತಿಳಿದುಬಂದಿದೆ! ಮುಂಬಯಿ ಐಐಟಿಯಲ್ಲಿ ಕಂಪ್ಯೂಟರ್ ವಿಜ್ಞಾನ ಪ್ರಾಧ್ಯಾಪಕರಾದ ಗಣೇಶ್ ರಾಮಕೃಷ್ಣನ್ ಶುರು ಮಾಡಿದ ಈ ಅಹವಾಲಿನಲ್ಲಿರುವ ಆರೋಪಗಳೆಂದರೆ ಪೊಲಾಕ್ ಹಿಂದೆ ತನ್ನ ಬರಹಗಳಲ್ಲಿ ಭಾರತೀಯ ಚಿಂತನೆ ಹಾಗೂ ಆದರ್ಶಗಳನ್ನು ತಿರುಚಿದ್ದರು, ಸಂಸ್ಕೃತಿ ಮತ್ತು ಪುರಾಣಗಳನ್ನು ಕೆಟ್ಟದಾಗಿ ಬಿಂಬಿಸಿದ್ದರು, ಸಂಸ್ಕೃತ ಸಾಹಿತ್ಯ ಆರಂಭವಾದುದೇ 4ನೇ ಶತಮಾನದಿಂದ ಎನ್ನುತ್ತಿರುವ ಪೊಲಾಕ್ ಅದಕ್ಕೂ ಮುಂಚಿನ ಮೌಖಿಕ ಸಂಪ್ರದಾಯಗಳನ್ನು ಸಾಹಿತ್ಯವೆಂದು ಕರೆಯಲು ನಿರಾಕರಿಸಿದ್ದಾರೆ ಇತ್ಯಾದಿ ಇತ್ಯಾದಿ.

ಈ ಲೈಬ್ರರಿ ಯೋಜನೆ ಆರಂಭಗೊಂಡ ನಂತರ ಇದುವರೆಗೆ ಯಾವುದೇ ತಕರಾರು ಎತ್ತಿರದ ಇವರು ಇದೀಗ ಇದ್ದಕ್ಕಿದ್ದಂತೆ ಪೊಲಾಕ್‌ರನ್ನು ಕಿತ್ತು ಹಾಕಬೇಕು, ಸಂಪಾದಕ ಮಂಡಳಿಯನ್ನು ಪುನಾರಚಿಸಬೇಕೆಂದು ಕೋರುತ್ತಿರುವುದು ಆಕಸ್ಮಿಕವಲ್ಲ. ಅದಕ್ಕೊಂದು ಸ್ಪಷ್ಟ ಕಾರಣವಿದೆ. ಕಳೆದ ತಿಂಗಳು ಜೆಎನ್‌ಯುನಲ್ಲಿ ನಡೆದ ಘಟನಾವಳಿಗಳ ಬೆನ್ನಲ್ಲಿ ಅಮೆರಿಕದ ನೋಮ್ ಚಾಮ್‌ಸ್ಕಿ ಮತ್ತು ಇತರ ಅನೇಕ ವಿದ್ವಾಂಸರು ಬಿಜೆಪಿ ಸರ್ಕಾರದ ನಡೆಯನ್ನು ಖಂಡಿಸಿ 'ಸರ್ವಾಧಿಕಾರಿ ಬೆದರಿಕೆಯ ಸಂಸ್ಕೃತಿ' ವಿರುದ್ಧ ಒಂದು ಸಾರ್ವಜನಿಕ ಹೇಳಿಕೆ ಕೊಟ್ಟಿದ್ದರು. ಇದನ್ನು ಶೆಲ್ಡನ್ ಪೊಲಾಕ್ ಬೆಂಬಲಿಸಿದ್ದರು. ಇದಾದ ಕೆಲವೇ ವಾರಗಳೊಳಗಾಗಿ ಪೊಲಾಕ್‌ರನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಳ್ಳುವ ಪ್ರಕ್ರಿಯೆ ಆರಂಭವಾಗಿದೆ. ಅಹವಾಲಿನಲ್ಲಿ "ಪೊಲಾಕ್ ಸ್ವದೇಶ ಮತ್ತು ವಿದೇಶಗಳಲ್ಲಿ ಸರ್ವಾಧಿಕಾರಿ ಧೋರಣೆ ಅನುಸರಿಸುತ್ತಿರುವ ತನ್ನದೇ ಅಮೆರಿಕ ಸರ್ಕಾರವನ್ನು ಖಂಡಿಸಿರುವುದನ್ನು ನಾವು ಕಂಡಿಲ್ಲ. ಹೀಗೆ ಇವರು ಭಾರತದ ಏಕತೆ ಮತ್ತು ಸಮಗ್ರತೆಗೆ ಅಗೌರವ ತೋರಿಸಿದ್ದಾರೆ. ವಸ್ತುನಿಷ್ಠತೆ ಮತ್ತು ತಾಟಸ್ಥ ಮನೋಭಾವ ಇಲ್ಲದ ಇಂತಹ ವ್ಯಕ್ತಿಗೆ ಇಂತಹ ಚಾರಿತ್ರಿಕ ಅನುವಾದ ಯೋಜನೆಯ ಮುಖ್ಯಸ್ಥನಾಗುವ ಅರ್ಹತೆ ಇಲ್ಲ... ಈ ಯೋಜನೆ 'ಮೇಕ್ ಇನ್ ಇಂಡಿಯ' ಚಿಂತ[...] ಅನುಗುಣವಾಗಿರಬೇಕಲ್ಲದೆ ಅಮೆರಿಕದ ಚಿಂತನೆಗಳಿ[...] ಎಂದು ಮುಂತಾಗಿ ಬರೆಯಲಾಗಿದೆ. ಇದು ಲೇ[...] ರಾಜಕೀಯ ಒಲವುಗಳು ಯಾವ ಕಡೆಗಿವೆ ಎಂಬು[...] ಸ್ಪಷ್ಟವಾಗಿ ತಿಳಿಸುತ್ತದೆ. ಆರಂಭದಲ್ಲಿ ಪೊಲಾಕ್ 201[...] ಹೈಡೆಲ್‌ಬರ್ಗ್ ವಿವಿಯಲ್ಲಿ ಮಾಡಿದ್ದ ಭಾಷಣ[...] ತುಣುಕುಗಳನ್ನು ಅಹವಾಲಿಗೆ ಸೇರಿಸಲಾಗಿತ್ತು. ವಾಸ್ತವ[...] ಅಂದು ಅವರು ಮೆಕಾಲೆ ಮತ್ತು ಮ್ಯಾಕ್ಸ್ ವೀ[...] ನಿಲುವುಗಳನ್ನು ವಿರೋಧಿಸಿದ್ದರು. ಇದನ್ನು ಅಹವಾ[...] ಬರೆದವರ ಗಮನಕ್ಕೆ ತಂದಾಗ ಆ ತುಣುಕುಗ[...] ಕಿತ್ತುಹಾಕಲಾಯಿತು! ಯಾವುದೇ ಸಂವಾದಕ್ಕೂ ಅ[...] ವ್ಯಾಖ್ಯಾನಕ್ಕೂ ಸಿದ್ಧರಿಲ್ಲದ ಇವರುಗಳ ಅಸಮಾಧಾ[...] ಬಹುಶಃ ಮುಖ್ಯ ಕಾರಣ ಈ ಯೋಜನೆಯ[...] ಸಂಸ್ಕೃತಿಯನ್ನು ಸಂಸತದಿಂದ ಬೇರ್ಪಡಿಸಿರುವುದಾಗಿರಬ[...] ಏಕೆಂದರೆ ಇವರುಗಳ ಪ್ರಕಾರ ಸಂಸ್ಕೃತಿ ಅಂದರೆ ಹಿಂ[...] ಸಂಸ್ಕೃತಿ ಮತ್ತು ಈ ಹಿಂದೂ ಸಂಸ್ಕೃತಿಯಿಂದ ಸಂ[...] ಭಾಷೆಯನ್ನು ಪ್ರತ್ಯೇಕಿಸಬಾರದು.

(ಆಧಾರ: *The Milli Gaze*[...] *14.3.2016*ರ ಔಟ್‌ಲುಕ್‌ನಲ್ಲಿ ಅಜ[...] ಸುಕುಮಾರನ್ ಮತ್ತು ಸ್ತುತಿ ಅಗರ್ವಾಲ್ ಲೇ[...]

ಸುರತರು

ಶರಣರ ನಡೆನುಡಿ ಸೊಗಸು
ಮಗುವಿನಂಥ ಮುಗ್ಧ ಮನಸು.

ನುಡಿದಂತೆ ನಡೆದ ಸತ್ಪುರುಷರು
ಬಂದ ಮಣಿಹ ಪೂರೈಸಿದವರು.
ಕುಂದದೆ ಸುಗಂಧ ಸೂಸಿದರು
ಅವರು ಜೀವ ಸವೆಸಿದ ಸುರತರು.

ವಚನಗಳ ರಚನೆಯಲ್ಲಿ ನಿರತರು
ಅನುಭವದಿ ಅನುಭಾವ ನೀಡಿದರು.
ಭಾವನೆಗಳ ಅರಳಿಸಿ ನಡೆದರು
ಚಿಂತನೆಗಳ ಚಿಗುರಿಸಿ ಸಾಗಿದರು.

ಜನರ ಸ್ತುತಿನಿಂದೆಗೆ ಹೆದರದವರು
ಹುಸಿ ಅಹಂಕಾರಕ್ಕೆ ದೂರಾದವರು.
ನೋವು ನಲಿವು ಒಂದಾಗಿಸಿದವರು
ಕಠಿಣ ದಿನಮಾನ ಎದುರಿಸಿದವರು.

ಮೇಲುಕೀಳು ಭಾವ ಅಳಿಸಿದವರು
ಮಾನವಕುಲ ಒಂದೇ ಎಂದವರು.
ಸಮತೆಯ ಅರಿವು ಮೂಡಿಸಿದವರು
ಸಕಲ ಜೀವಕೆ ಲೇಸ ಬಯಸಿದವರು.



ಬಡವಬಲ್ಲಿದ ಭೇದ ಮರೆತವರು
ಬದುಕಿನ ಸೌಂದರ್ಯ ಹೆಚ್ಚಿಸಿದವರು.
ಕಣಕಣದಲಿ ನಿಜದೇವರ ಕಂಡವರು
ಮರಣವೇ ಮಹಾನವಮಿ ಎಂದವರು.

ಎಲ್ಲ ದಿನಗಳಲ್ಲೂ ಶರಣರಿದ್ದರೆ ತುಸು
ಪ್ರಕೃತಿಗದು ಬಲು ಸೊಗಸೇ ಸೊಗಸು.

■ ಜಯಶ್ರೀ ಸುಕಾಲೆ

ಯೋಗೇಶ್ ಮಾಸ್ಟರ್

ಪುರಾಣದ ಹೂರಣ

ಬಸವನ ಪುರಾಣ



ಬಾಗೇವಾಡಿಯ ಬಸವೇಶ್ವರನ (ನಂದಿ) ದೇವಸ್ಥಾನಕ್ಕೆ ...ದರೆ ಬಸವಣ್ಣನವರ ತಾಯಿ ಇದೇ ಬಸವನ ಪೂಜೆ ...ಿ ಶಿಶು ಭಾಗ್ಯ ಪಡೆದಳೆಂದು ಹೇಳುತ್ತಾ ಕೋಡುಳ್ಳ ...ಿಯ ವಿಗ್ರಹವನ್ನು ತೋರುತ್ತಾರೆ. ಅದಕ್ಕೆ ಅಲ್ಲಿ ಬಹಳ ...ನ್ಯತೆಯೂ ಇದೆ. ಶಿವಗಣದಲ್ಲಿ ಒಬ್ಬನಾದ ಸಾಕ್ಷಾತ್ ...ಿಯೇ ಮಾದಲಾಂಬಿಕೆಯ ಗರ್ಭವನ್ನು ಸೇರಿ ಬಸವಣ್ಣನಾಗಿ ...ತಾಳಿದ ಎಂದು ಹೇಳುವಂತಹ ಮಿಥಿಕವನ್ನು ನಮ್ಮಲ್ಲಿ ...ದ್ದಾರೆ. ಯಾವ ಅವೈಚಾರಿಕವಾದ ಡೋಂಗಿ ಪುರಾಣಗಳನ್ನು ...ಿಸಿ ಹಾಕಿ ಜನತೆಯನ್ನು ಪ್ರಜ್ಞಾವಂತರನ್ನಾಗಿ ಮಾಡಲು ...ಸವೆಲ್ಲಾ ಹೆಣಗಿ ಮರಣಿಸಿದ ಬಸವಣ್ಣನಿಗೆ ಸಂದ ...ವಿದು. ಅಂದು ಕಲ್ಯಾಣ ಕ್ರಾಂತಿಯಲ್ಲಿ ಶರಣರ ಕಗ್ಗೊಲೆಗಳು ...ಯುವಾಗ ಸಂಪ್ರದಾಯವಾದಿಗಳ ಮಾರಣಾಘಾತಗಳಿಂದ ...ರು ತಮ್ಮ ಜೀವಗಳನ್ನು ಉಳಿಸಿಕೊಳ್ಳಲು ಎತ್ತೆತ್ತಲೋ ...ಸಿ ಹೋಗಬೇಕಾಯ್ತು ತಲೆ ಮರೆಸಿಕೊಳ್ಳಬೇಕಾಯ್ತು. ನಂತರ ...ನವಾಗಿ ತಮ್ಮ ಅಸ್ತಿತ್ವವನ್ನು ಮರುಸ್ಥಾಪಿಸಲು, ಬಸವನ ...ಾವರಣ ಮಾಡಲು, ಜನರ ನಡುವೆ ಬಸವನ ಬಗ್ಗೆ ...ಭಿಮಾನವನ್ನು ಮೂಡಿಸಲು ಬಸವನ ಅಭಿಮಾನಿಗಳು ...ೇ ಹಳೆಯ ಪುರಾಣದ ತಂತ್ರವನ್ನೇ ಬಳಸಿದರೇನೋ ...ದೆನಿಸುತ್ತದೆ.

ಕ್ರಿಸ್ತ ಮತ್ತು ಬಸವರ ಕ್ರಾಂತಿ

ಕ್ರಿಸ್ತನ ಸಾವು ಮತ್ತು ಬಸವನ ಸಾವು, ಕ್ರಿಸ್ತನ ಸಾವಿನ ...ತರ ಅವನ ಅಭಿಮಾನಿ ಶಿಷ್ಯರು, ಅನುಯಾಯಿಗಳು ...ಾಗೂ ಬಸವನ ಸಾವಿನ ನಂತರ ಶರಣರು ಪಟ್ಟ ...ಾಡುಗಳಲ್ಲಿ ಸಾಮ್ಯತೆ ಇದೆ. ಅಷ್ಟೇ ಅಲ್ಲ, ಯಹೂದಿಗಳ ...ಂಪ್ರದಾಯಕ ಅವೈಚಾರಿಕ ವಿಚಾರಗಳಿಗೆ ಮರುವ್ಯಾಖ್ಯಾನ ...ೂಡುತ್ತಾ ಜನರಲ್ಲಿ ಆಧ್ಯಾತ್ಮಿಕ ಪ್ರಜ್ಞೆ ಮತ್ತು ಸಾಮಾಜಿಕ ...ಾಗೃತಿ ಮೂಡಿಸಲು ಕ್ರಿಸ್ತ ಯತ್ನಿಸಿದರೆ, ಬಸವ ಇಲ್ಲಿ ...ೈದಿಕರ ಸಾಂಪ್ರದಾಯಿಕತೆಯ ಕುಟಿಲತೆಗಳನ್ನು ಬಯಲಿಗೆ ...ಂದು ಸಮಸಮಾಜದ ನಿರ್ಮಾಣಕ್ಕೆ, ವ್ಯಕ್ತಿಗತ ಜಾಗೃತಿಯ ...ಗ್ಗೆ ಪ್ರಜಾಸತ್ತಾತ್ಮಕವಾದ ಆಧ್ಯಾತ್ಮಿಕತೆ, ಧಾರ್ಮಿಕತೆಯನ್ನು ಪ್ರತಿಷ್ಠಾಪಿಸಲು ಚಳವಳಿ ಹೂಡಿದ. ಈ ಇಬ್ಬರ ಧಾರ್ಮಿಕ ಮತ್ತು ಆಧ್ಯಾತ್ಮಿಕ ಉದ್ದೇಶ ಒಂದೇ ಆಗಿದ್ದರೂ ಕೆಲವು ...ಾಮಾಜಿಕ ಸ್ಥಾನಮಾನದ ವಿಷಯದಲ್ಲಿ, ಸಾಮಾಜಿಕ ...ಟುವಟಿಕೆಯಲ್ಲಿ ವ್ಯತ್ಯಾಸಗಳು ಕಾಣುತ್ತವೆ. ಬಸವ ಕ್ರಿಸ್ತನಂತೆ ...ಡವನೇನಾಗಿರಲಿಲ್ಲ, ಕ್ರಿಸ್ತನಿಗೆ ಸಮಾಜದಲ್ಲಿ ಪ್ರಭುತ್ವದ ...ಶ್ರಯವಿರುವಂತಹ ಯಾವ ಅಧಿಕಾರ ಇರಲಿಲ್ಲ, ಬಸವನಿಗೆ ...ಾಜ ಬಿಜ್ಜಳನು ಗೆಳೆಯನಾಗಿದ್ದ. ಬಸವನ ಸಾಮಾಜಿಕ ...ುಧಾರಣಾ ಕಾರ್ಯಕ್ರಮಗಳಿಗೆ ಬಿಜ್ಜಳನ ನೇರ ಕೊಡುಗೆ ...ನೂ ಇರದಿದ್ದರೂ, ಬಸವನಿಗಿದ್ದ ಅವನ ಗೆಳೆತನದ ...ಕಾರಾತ್ಮಕ ಪ್ರಭಾವವನ್ನು ಅಲ್ಲಗಳೆಯಲಾಗದು. ನಿತ್ಯ ಅನ್ನದಾಸೋಹ ಮಾಡುತ್ತಿದ್ದ ಬಸವನ ಮಹಾಮನೆ ...ಕ್ರಿಸ್ತನಿಗಿರಲಿಲ್ಲ, ಆದರೆ ಕ್ರಿಸ್ತನೂ ಬಸವನಂತೆ ಅರಿವನ್ನೂ ...ಆಹಾರವನ್ನೂ ಹಂಚಿಕೊಳ್ಳಲು ತನ್ನದೇ ರೀತಿಯಲ್ಲಿ ...ಾರ್ಯತತ್ಪರನಾಗಿದ್ದ. ಹಂಚಿಕೊಂಡು ಉಣ್ಣುವುದರಲ್ಲಿ ...ಬಸವನಂತೆಯೇ ಪ್ರಾಮುಖ್ಯತೆ ಕೊಟ್ಟಿದ್ದ. ಮುಂದೆ ಕ್ರಿಸ್ತನಿಗೂ ಮತ್ತು ಬಸವನಿಗೂ ರಾಜದ್ರೋಹದ ಆಪಾದನೆಯನ್ನೇ ...ಮಾಡಿದರು. ಕ್ರಿಸ್ತನ ಶಿಲುಬೆಗೇರಿಸಿದರು. ಬಸವನ ಗಡಿಪಾರು ...ಮಾಡಿ ಕೊಂದರು. ಬಸವ ನೇರ ರಾಜಾಸ್ಥಾನದ ಸದಸ್ಯ ಮತ್ತು ಅಧಿಕಾರಿಯಾಗಿದ್ದರಿಂದ ರಾಜಕೀಯ ದ್ರೋಹದ ...ಆಪಾದನೆಗಳನ್ನೂ ಹೊರಿಸಿದರು, ರಾಜನನ್ನು ಕೊಂದರು, ...ಅದನ್ನು ಶರಣರ ತಲೆಗೆ ಕಟ್ಟಿದರು. ಇನ್ನು ಶರಣರನ್ನು ...ಬೇಟೆಯಾಡತೊಡಗಿದಾಗ ಅವರು ನಿರ್ವಾಹವಿಲ್ಲದೇ ತಲೆ ಮರೆಸಿಕೊಂಡು ತಪ್ಪಿಸಿಕೊಳ್ಳಬೇಕಾಯ್ತು. ಅದೇ ರೀತಿ ಕ್ರಿಸ್ತನ ...ಅನುಯಾಯಿಗಳು ಕೂಡ ತಲೆ ಮರೆಸಿಕೊಂಡು ತಮ್ಮ ...ಕ್ರಿಸ್ತ ಧರ್ಮದ ಸಾರ ಸಿದ್ಧಾಂತಗಳನ್ನು ಗಟ್ಟಿಗೊಳಿಸಿಕೊಳ್ಳಲು ...ರಹಸ್ಯವಾಗಿ ಧರ್ಮಸಭೆಗಳನ್ನು ಸೇರಿಸಬೇಕಿತ್ತು.

ಅಸ್ತಿತ್ವಕ್ಕಾಗಿ ಮಿಥಿಕ

ಕ್ರಿಸ್ತಾನುಯಾಯಿಗಳೂ ಮತ್ತು ಬಸವಾನುಯಾಯಿಗಳೂ ...ಮಾಡಿದ ಎಡವಟ್ಟೆಂದರೆ ತಮ್ಮ ತಮ್ಮ ಅಭಿಮಾನದ ಆಧ್ಯಾತ್ಮಿಕ ನಾಯಕರಿಗೆ ಪವಾಡಗಳ ಮುಸುಕನ್ನು ಹಾಕಿ ಅವರವರ ಸತ್ಯತೆಗಳನ್ನು, ನಿಜಸ್ವರೂಪವನ್ನು ಮಂಕುಗೊಳಿಸಿದ್ದು. ಆದರೆ ಅವರನ್ನು ಮೂರ್ಖರೆಂದೋ, ಕುಯುಕ್ತಿಯ ತಂತ್ರಗಾರರೆಂದೋ ಕರೆಯಲಾರೆ. ತಮ್ಮ ಅಸ್ತಿತ್ವವನ್ನು ಪುನರ್‌ಸ್ಥಾಪಿಸಲು ಆಗಿನ ಜನಸಾಮಾನ್ಯರ ನಡುವೆ ತಮ್ಮ ನಾಯಕರ ಬಗ್ಗೆ ಶ್ರದ್ಧೆ ಮತ್ತು ಭಕ್ತಿಯನ್ನು ಉಂಟುಮಾಡಲು, ಆಗ ವಾಡಿಕೆಯಲ್ಲಿದ್ದ ಮಿಥಿಕಗಳನ್ನು ಕಟ್ಟುವ ತಂತ್ರವನ್ನೇ ಉಪಯೋಗಿಸಿದರು. ಅದೇ ಕೈಲಾಸ ಒಡ್ಡೋಲಗ, ದೇವರ ಶಾಪ ಅಥವಾ ಆಣತಿಯಂತೆ ಭೂಲೋಕಕ್ಕಿಳಿಯುವುದು, ಸತ್ತವರನ್ನು ಬದುಕಿಸುವುದು, ಜನ ಸಾಮಾನ್ಯರು ಮಾಡಲಾಗದಂತಹ ಅದ್ಭುತಗಳನ್ನು ಸೃಷ್ಟಿಸುವುದು ಇತ್ಯಾದಿ. ಆದರೆ ನಂತರವೂ ಅದೇ ಉಳಿದುಕೊಂಡಿದ್ದು ಮಾತ್ರ ವಿಪರ್ಯಾಸ. ಕ್ರಿಸ್ತನಾಗಲಿ, ಬಸವನಾಗಲಿ ಎಂದಿಗೂ ಒಪ್ಪದಿರುವಂತಹ ತೀರಾ ಅವೈಚಾರಿಕ ಮತ್ತು ಪೊಳ್ಳು ಕಥೆಗಳ ಹೇರುವಿಕೆಗಳು. ಬಸವ ಅಥವಾ ಕ್ರಿಸ್ತ ಎಂದರೆ ಹೀಗೇ ಎಂದು ನೇರವಾಗಿ ಹೇಳಿದರೇನೇ ಬೆರಗುಗೊಳಿಸುವಂತಹ ಅದ್ಭುತಗಳಿವೆ. ಸತ್ಯಾನ್ವೇಷಕರು ಶರಣಾಗುವಂತಹ ತತ್ವಗಳಿವೆ. ಆಧರೆ ಪವಾಡಗಳ ಪೋಷಾಕನ್ನು ತೊಡಿಸಿ ಆ ಮಹಾಂತರ ಜೀವನಗಳನ್ನು ಮಲಿನ ಮಾಡುತ್ತಿರುವ ಮಂದಿ ಈಗಲೂ ಇದ್ದಾರೆ. ಅದೇ ಭ್ರಾಮಕ ವ್ಯಕ್ತಿತ್ವಗಳನ್ನೇ ಮುಂದಿಡುತ್ತಾ ತಾವೂ ಅದೇ ಭ್ರಮಾಧೀನ ಸ್ಥಿತಿಯಲ್ಲಿದ್ದಾರೆ ಎಂಬುದೇ ವಿಷಾದನೀಯ. ಬಸವ ತನ್ನ ವಚನಗಳ ಮೂಲಕವೇ, ಇತಿಹಾಸದಲ್ಲಿ ಸರಿದು ಸವೆದುಳಿಸಿದ ಕುರುಹುಗಳಿಂದಲೇ ಆಪ್ತ ಮತ್ತು ಆತ್ಮೀಯ ಹಿರಿಯಣ್ಣನಾಗಿಯೇ ಭಾವಪ್ರವೇಶ ಮಾಡುತ್ತಾನೆ. ಅಂತೆಯೇ ಯೇಸುವೂ ಕೂಡ ತನ್ನ ಪ್ರೇಮದ ನಿಲುವುಗಳಿಂದಲೇ ಇವ ನಮ್ಮವ ಇವ ನಮ್ಮವ ಎಂದೆನಿಸುತ್ತಾನೆ. ಮನೆಯವರಂತೆ ಸಲುಗೆಯಿಂದಲೇ ಸ್ಪರ್ಶ ಕೊಡುವಂತೆ ಕಾಣುತ್ತಾರೆ. ಹಾಗಿರುವಾಗ ತಮ್ಮವರನ್ನು ಸಹಜದಲ್ಲಿ ಸ್ವೀಕರಿಸದೇ ಉತ್ಪ್ರೇಕ್ಷೆಯ ಪೌರಾಣಿಕ ಮೇಲಾಟಗಳೇಕೋ ನಾನರಿಯೆ.

ಶರಣ ಲೀಲಾಮೃತ

ಬಸವನ ಜೀವನದಲ್ಲಿ **88** ಪವಾಡಗಳನ್ನು ಮಾಡಿದ, **360** ಜನರಿಗೆ ಪ್ರಾಣದಾನ ಮಾಡಿದ ಉಲ್ಲೇಖಗಳು ಸಿಗುತ್ತವೆ. ಶರಣ ಲೀಲಾಮೃತದ ಕವಿ ಚನ್ನಪ್ಪ ಭೀಮಕವಿಯೇ ಮೊದಲಾಗಿ ಹಲವು ಕವಿಗಳು ಉತ್ಪ್ರೇಕ್ಷೆ ಮಾಡಿದ್ದಾರೆ ಎನ್ನುವುದೂ ಒಂದಾದರೆ, ಕೆಲವು ವಿಷಯಗಳನ್ನು ಸೂಚ್ಯವಾಗಿ ತಿಳಿಸಲು ಮಿಥಿಕಗಳನ್ನು ಬಳಸಿದ್ದಾರೆ ಎಂದು ತೋರುತ್ತದೆ. ಹರಿಹರನ ಬಸವರಾಜ ದೇವರ ರಗಳೆಯೂ ಕೂಡ ಉತ್ಪ್ರೇಕ್ಷೆಗಳಿಂದ ಹೊರತಾಗಿಲ್ಲ, ಆದರೆ ಅವನ ಕಾವ್ಯವನ್ನು ಹೆಚ್ಚು ಗಂಭೀರವಾಗಿ ಗಮನಿಸಬೇಕಾದ ಅಗತ್ಯವಿದೆ. ಏಕೆಂದರೆ ಬಸವನ ಅವಸಾನದ ನಂತರ ಸಮೀಪದ ಅವಧಿಯಲ್ಲಿ ಬರೆದಂತಹ ಕೃತಿ ಅದಾಗಿದೆ. ಆದರೆ ಅದೂ ಕೂಡ ತಿರುಚುವಿಕೆಗೆ ಒಳಗಾಗುವಂತಹ ಸಂದರ್ಭವೊದಗಿತು. ಅದನ್ನು ನಂತರ ವಿಚಾರಿಸುವ.


ಬಸವನ ಪವಾಡಗಳಲ್ಲಿ ಮುಖ್ಯವಾದುದು ಗೊಲ್ಲತಿಯ ಪವಾಡ, ಬದನೆಕಾಯಿ ಲಿಂಗವಾದದ್ದು, ಜೋಳದ ಕಾಳುಗಳನ್ನು ಮುತ್ತಿನ ಮಣಿಗಳನ್ನಾಗಿ ಮಾಡಿದ್ದು ಮತ್ತು ಇತರೆ.

ತಮಿಳು ಶೈವ ಸಂತರ ಕಥನ ಪ್ರಭಾವಗಳು

ಶರಣ ಲೀಲಾಮೃತದಲ್ಲಂತೂ ಬಸವನನ್ನು ಸಣ್ಣವನಿಂದಲೇ ಮಹಾಮಹಿಮ, ಪವಾಡ ಪುರುಷನಂತೆ ಚಿತ್ರಿಸುತ್ತಾರೆ. ಬಾಲಕ ಬಸವ ಬಹಳ ಚುರುಕಿನ ವಿದ್ಯಾರ್ಥಿಯಾಗಿದ್ದು, ಅವನ ಸಹಪಾಠಿಗಳಿಗೆ ಅವನ ಕಂಡರೆ ಅಸೂಯೆ. ಒಮ್ಮೆ ಬೆನಕನೆಂಬ ಅವರ ಸಹಪಾಠಿ ಕಾಲು ಜಾರಿ ನೀರಿಗೆ ಬಿದ್ದು ಮುಳುಗಿಹೋಗುತ್ತಾನೆ. ಆಗ ಹೊಟ್ಟೆಕಿಚ್ಚಿನ ಬಸವನ ಓರಗೆಯವರು ಬಸವನೇ ಬೆನಕನನ್ನು ನೀರಿಗೆ ತಳ್ಳಿದ ಎಂದು ಆರೋಪವನ್ನು ಹೊರಿಸುತ್ತಾರೆ. ಆಗ ಹಿರಿಯರು ಕೋಪಗೊಂಡು ಬಸವನ ವಿಚಾರಣೆಗೆ ಒಳಪಡಿಸಿದಾಗ, "ಬೆನಕಾ, ನೀನೇ ಬಂದು ಹೇಳು, ನಾನು ನಿನ್ನನ್ನು ನೂಕಿದೆನೇ?" ಎಂದು ಜೋರಾಗಿ ಕೇಳಿದಾಗ ನೀರಿನಿಂದ ಜೀವ ತಳೆದು ಬಂದ ಬೆನಕ ಇಲ್ಲವೆಂದು ಸಾಕ್ಷಿ ಹೇಳುತ್ತಾನೆ. ಇಂತಹ ಪವಾಡಗಳಿಗೆ ತಮಿಳು ಶಿವಭಕ್ತರ ಕಥೆಗಳ ಪ್ರಭಾವವಿದ್ದೆ ಎಂದು ನೇರವಾಗಿ ಗೋಚರಿಸುತ್ತದೆ. ಕೊಡಗೂಸಿನ ಕಥೆಯಾಗಲಿ, ಸಿರಿಯಾಳ ಸೆಟ್ಟಿಯ ಕಥೆಯಾಗಲಿ ಇಂಥಾ ಪವಾಡ ಕಥನಗಳನ್ನೇ ಹೊಂದಿವೆ.

ಇನ್ನು ಗೊಲ್ಲತಿಯ ಕಥೆಯೆಂದರೆ, ಬಿಜ್ಜಳನ ಆಸ್ಥಾನದಲ್ಲಿ ಬಸವ ಕಾರ್ಯಕಲಾಪದಲ್ಲಿ ತೊಡಗಿದ್ದಾಗ ಕೆರೆಯ ಏರಿಯ ಮೇಲೆ ಗೊಲ್ಲತಿಯೊಬ್ಬಳು ಹೋಗುತ್ತಿದ್ದು, ಕಾಲು ಜಾರಿ ನೀರಿಗೆ ಬೀಳುವಾಗ "ಬಸವಾ ರಕ್ಷಿಸು" ಎಂದು ಕೂಗುವಳಂತೆ. ಆಗ ಬಸವ "ತಾಯೇ ನಿಲ್ಲು" ಎಂದು ತಡೆದರಂತೆ. ಬಿಜ್ಜಳ ಅಪಹಾಸ್ಯ ಮಾಡಲು, ಬಸವ ಪರೀಕ್ಷಿಸಲು ಹೇಳಿದರಂತೆ. ಅದರಂತೆ ರಾಜನು ತನ್ನ ಸೈನಿಕರನ್ನು ಕಳುಹಿಸಿ ವಿಚಾರಿಸಲಾಗಿ ಬಸವನ ಮಾತು ನಿಜವೆಂದು ತಿಳಿಯುವುದಂತೆ. ಇದನ್ನು ನಾವು ತಿಳಿಯ ಬೇಕಾಗಿರುವುದು ಹೇಗೆಂದರೆ, ನಿಜಕ್ಕೂ ಬಸವಣ್ಣನವರು ತಮ್ಮ ಸಂಚಾರದ ಸಮಯದಲ್ಲಿ ಗೊಲ್ಲತಿಯೊಬ್ಬಳು ನೀರಿಗೆ ಬೀಳುವ ಅಥವಾ ಜಾರುವ ಸಮಯದಲ್ಲಿ ತಮ್ಮ ಸಾಮಾಜಿಕ ಸ್ಥಾನಮಾನದ ಗೊಡವೆಯೇ ಇಲ್ಲದೇ ಮುಂದಾಗಿ ಆಕೆಯನ್ನು ಪಾರು ಮಾಡಿದ್ದಿರಬಹುದು. ಅಂತಹ ಅವರ ಸಹಜ ಮತ್ತು ಉದಾತ್ತ ವರ್ತನೆಯನ್ನು ಹೀಗೆ ಮಿಥಿಕಕ್ಕೆ ಒಳಪಡಿಸಲಾಗಿದೆ ಎಂದು ತೋರುತ್ತದೆ.





ಮಹಾಮನೆಗೆ ಬದನೇಕಾಯಿಯ ತುಂಡುಗಳನ್ನು ಲಿಂಗವೆಂದು ತೋರುವಂತೆ ಬಟ್ಟೆಯಲ್ಲಿ ಕಟ್ಟಿಕೊಂಡು ಕಳ್ಳರು ಬರುತ್ತಾರೆ. ಆಗ ಬಸವನ ಲೀಲೆಯಿಂದ ಅವು ನಿಜವಾದ ಲಿಂಗಗಳೇ ಆದವೆಂಧು ದಂತಕಥೆ. ಆದರೆ, ಬಸವಣ್ಣನು ವಸ್ತ್ರಗಳಲ್ಲಿ ಕಟ್ಟಿರುವ ಬದನೆಕಾಯಿಯ ತುಂಡುಗಳನ್ನು, ಲಿಂಗವೆಂದು ಹೆಸರಿಸಿದ್ದರಿಂದ, ಆ ವಸ್ತು ರಚಿತವಾದ ಸಾಮಗ್ರಿ ಅಥವಾ ಸ್ಥೂಲಕ್ಕೆ ಮಾನ್ಯತೆ ನೀಡದೇ, ಹೆಸರಿಸುವ ಮೂಲಕ ಭಾವಕ್ಕೇ ಪ್ರಾಮುಖ್ಯತೆಯನ್ನು ಕೊಟ್ಟು ಬದನೆಕಾಯಿಯ ತುಂಡುಗಳನ್ನು ನಿಜವಾದ ಲಿಂಗಗಳೆಂದೇ ಗೌರವಿಸಿರುತ್ತಾರೆ. ಹೀಗಾಗಿ ಬದನೆಕಾಯಿಯ ತುಂಡುಗಳು ಲಿಂಗಗಳಾದ ಭಾವಾಂತರವೇ ಹೊರತು, ವಸ್ತುಗಳ ರೂಪಾಂತರವಲ್ಲ.


ತೆಲುಗಿನಲ್ಲಿ ಪರಮಾನಂದಯ್ಯ ಶಿಷ್ಯಲು ಕಥಾ ಎಂಬ ಸಿನಿಮಾ ಕನ್ನಡಕ್ಕೆ ಗುರುಶಿಷ್ಯರು ಎಂಬ ಹೆಸರಿನಲ್ಲಿ ಮರು ಚಿತ್ರಿತವಾಯ್ತು. ಆದರಲ್ಲಿ ಭೋಗಾಭಿಲಾಷಿ ರಾಜ (ವಿಷ್ಣುವರ್ಧನ್) ರಾತ್ರಿಯಿಡೀ ವೇಶ್ಯೆಯ ಅಂಗಸಂಗದಲ್ಲಿರುತ್ತಾನೆ. ಬೆಳಗಾಗುತ್ತಲೇ ಅವನ ಶಿವಾರ್ಚನೆಯ ವ್ರತಕ್ಕೆ ಭಂಗ ಬರುವಂತೆ ಅವನು ಅವಳ ಶಯ್ಯಾಗೃಹದಲ್ಲಿ ಬಂಧಿತನಾಗಿರುತ್ತಾನೆ. ಆದರೆ ಶಿವಪೂಜೆಯ ವ್ರತಕ್ಕೆ ಭಂಗಬರಬಾರದೆಂದು ಅವನು ಮಾಡುವುದೇನೆಂದರೆ, ಅಂಗಾತ ಮಲಗಿರುವ ಜಯಮಾಲಿಯ ಮೊಲೆಯ ಉಬ್ಬಿಗೆ ಶಿವಲಿಂಗವೆಂದು ಭಾವಿಸಿ ಪೂಜೆ ಮಾಡುತ್ತಾನೆ. ಅಲ್ಲಿಗೆ ಅವನ ಶಿವಪೂಜೆಯ ವ್ರತಕ್ಕೆ ಭಂಗ ಬರುವುದಿಲ್ಲ, ಒಟ್ಟಾರೆ ಶಿವ ಎನ್ನುವುದು ಭಾವದಲ್ಲಿದೆಯೇ ಹೊರತು ವಸ್ತುವಿನಲ್ಲಿಲ್ಲ ಎಂಬುದರ ಸೂಚಕ ಇದು. ಭಕ್ತಿ ಮುಖ್ಯವಾಗುತ್ತದೆಯೇ ಹೊರತು, ವಸ್ತುವಲ್ಲ, ದೇವರೆಂಬುದು ಕಾಣುವುದರಲ್ಲಿ ಅಲ್ಲ, ಕಂಡುಕೊಳ್ಳುವುದರಲ್ಲಿ ಇರುವುದು ಎಂಬುದನ್ನು ಇದು ಸೂಚಿಸುತ್ತದೆ.

ಒಬ್ಬ ಸೆಟ್ಟಿಯು ಬಸವಣ್ಣನವರ ಭಕ್ತಿ ಔದಾರ್ಯಗಳನ್ನು ಪರೀಕ್ಷೆ ಮಾಡಲು ಹೇರು ಹೇರು ಮುತ್ತನ್ನು ಕೇಳುವನಂತೆ. ಆಗ ಬಸವ ಜೋಳವನ್ನೇ ಮುತ್ತುಗಳನ್ನಾಗಿ ಪರಿವರ್ತಿಸಿ ಕೊಟ್ಟರೆಂದು ಪುರಾಣಗಳು ಹೇಳುತ್ತವೆ. ಆದರೆ, ಸೆಟ್ಟಿಯ ದೃಷ್ಟಿಯಲ್ಲಿ ಬೆಲೆಬಾಳುವ ಮುತ್ತಿಗೆ ಬೆಲೆ ಎಂದಾದರೆ, ಬಸವಣ್ಣನವರ ದೃಷ್ಟಿಯಲ್ಲಿ ಆಹಾರಕ್ಕಾಗುವ, ಜೀವವನ್ನು ಪೋಷಿಸುವ ಜೋಳವನ್ನೇ ಮಹತ್ವದ್ದಾಗಿ ನೋಡುವಂತಹ ಅವರ ಧೋರಣೆಯನ್ನು ಪ್ರತಿನಿಧಿಸುವಂತಹ ಮಿಥಿಕ ಇದಾಗಿರುತ್ತದೆ.

ಇನ್ನೂ ಬಹಳ ಜನಪ್ರಿಯವಾದಂತಹ ಮಿಥಿಕವೆಂದರೆ, ಬಸವಣ್ಣನವರು ನಿದ್ರಿಸುವಾಗ ಶರಣರು ಬರುತ್ತಾರೆ. ಅಣ್ಣನವರು ವಿಶ್ರಾಂತಿ ಪಡೆಯುತ್ತಿದ್ದಾರೆಂಬ ಕಾರಣಕ್ಕೆ ಅವರನ್ನು ಹಿಂದಕ್ಕೆ ಕಳುಹಿಸಿದಾಗ ಬಸವಣ್ಣನ ಜೀವ (ಆತ್ಮ) ಶರಣರನ್ನೇ ಹಿಂಬಾಲಿಸಿಬಿಡುತ್ತದೆ. ಕಳೇವರವಾದ ಬಸವನ ಶರೀರವನ್ನು ಕಂಡು ಹೌಹಾರಿದ ಮಹಾಮನೆ ಯವರು ಮತ್ತೆ ಕಳುಹಿಸಿದ ಶರಣರ ಹುಡುಕಿಕೊಂಡು ಹೋಗಿ ಮತ್ತೆ ಕರೆದುಕೊಂಡು ಬಂದಮೇಲೆ ಬಸವಣ್ಣನವರ ದೇಹದೊಳಕ್ಕೆ ಜೀವ ಸೇರಿ ಸಜೀವವಾಗಿ ಎದ್ದು ಕೂತರು ಎಂಬುದು.

ಇದನ್ನು ಬಹಳ ನೇರವಾಗಿ ವಿಶ್ಲೇಷಿಸಬಹುದು. ಶರಣರ ಬೆಳವಣಿಗೆ ಜೀವಾಳ ಎನ್ನುವ ಅಣ್ಣನವರಿಗೆ ತನ್ನ ವಿಶ್ರಾಂತಿ, ಭೋಗ ಇತ್ಯಾದಿಗಳೆಲ್ಲಾ ಲೆಕ್ಕಕ್ಕಿಲ್ಲದ್ದು. ತೀರಾ ಗಂಭೀರವಾಗಿ ಗಣಿಸದೇ ಇರುವುದು. ತಮ್ಮ ಸಾಮಾಜಿಕ ಜೀವನವನ್ನೂ ವೈಯುಕ್ತಿಕ ಬದುಕನ್ನೂ ಒಂದಾಗಿಸಿಯೇ ಬಾಳಿದ ಬಸವಣ್ಣನವರಿಗೆ ತಾವು ಮಲಗಿದ್ದಾಗ ಬಂದು, ತೆರಳಿದ ಶರಣರ ಬಗ್ಗೆ ತಿಳಿಯುತ್ತದೆ. ಎಲ್ಲಿಂದಲೋ, ಎಷ್ಟೋ ದೂರವನ್ನು ಕ್ರಮಿಸಿ, ಕಷ್ಟಪಟ್ಟು ತಮ್ಮನ್ನು ಕಾಣಲು ಬಂದಿದ್ದ ಶರಣರನ್ನು ತನ್ನ ನಿದ್ದೆ ಅಥವಾ ವಿಶ್ರಾಂತಿಯಂತಹ ಕಾರಣಕ್ಕೆ ಹಿಂದಕ್ಕೆ ಕಳುಹಿಸಿರುವುದು ನಿಜಕ್ಕೂ ಬೇಸರವೂ, ದುಃಖವೂ ಆಗುತ್ತದೆ. ಮಂಕಾಗಿರುವ ಬಸವಣ್ಣನವರನ್ನು ಕಂಡು ಚಿಂತೆಗೀಡಾದ ಶರಣರನ್ನು ಹಿಂದಕ್ಕೆ ಕಳುಹಿಸಿದವರು ಮತ್ತೆ ಅವರನ್ನು ಹುಡುಕಿ ಕರೆತಂದಾಗ ಅಣ್ಣನವರು ಉಲ್ಲಸಿತರಾಗುತ್ತಾರೆ. ಹೆಣದಂತೆ ಕಳಾಹೀನವಾಗಿದ್ದವರು, ಜೀವತಳೆದವರಂತೆ ಚೈತನ್ಯದಿಂದ ಕೂಡುತ್ತಾರೆ. ಇಂತಹ ಸಂಗತಿಗಳೆಲ್ಲವೂ ಕೂಡ ಪುರಾಣದ ರೂಪಕಗಳನ್ನು ಪಡೆದುಕೊಂಡಿರುತ್ತವೆ. ■

ದೇಶಭಕ್ತಿಯ 'ಅಭಿನಯ' ಕಲಿಸಿಕೊಟ್ಟಿದ್ದೇ ಮನೋಜ್‌ಕುಮಾರ



ಕೇಂದ್ರ ಸರಕಾರದ ಮಾಹಿತಿ ಮತ್ತು ತಂತ್ರಜ್ಞಾನ ಸಚಿವಾಲಯ ಇತ್ತೀಚೆಗೆ ಹಿಂದಿ ಚಿತ್ರರಂಗದ ಮನೋಜ್ ಕುಮಾರ್‌ಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಘೋಷಿಸಿತು. ಭಾರತೀಯ ಸಿನಿಮಾಕ್ಕೆ ವಿಶಿಷ್ಟ ಕೊಡುಗೆ ನೀಡಿದವರಿಗೆ ಈ ಪ್ರಶಸ್ತಿಯನ್ನು ನೀಡಲಾಗುತ್ತದೆ. ಮನೋಜ್ ಕುಮಾರ್ ನಿಜವಾಗಿ ಕೆಲವು ವಿಶಿಷ್ಟ ಸಿನಿಮಾಗಳನ್ನು ನೀಡಿದ್ದು ನಿಜ. ಅವರ ಮೊದಲಿನ ಹಲವು ಚಿತ್ರಗಳು ಮನೋಜ್ಞವಾಗಿದ್ದು ಅವರ ಕೆಲವು ರಹಸ್ಯಮಯ ಸಸ್ಪೆನ್ಸ್ ಚಿತ್ರಗಳು ಜನರಿಗೆ ಅತಿಯಾಗಿ ಹಿಡಿಸಿದ್ದವು. ಆದರೆ ಮನೋಜ್ ಕುಮಾರ್ ದೇಶಭಕ್ತಿಯ ಚಿತ್ರಗಳನ್ನು ಮಾಡಲು ಶುರು ಮಾಡಿದಾಗ ಎಲ್ಲವೂ ಕೃತ್ರಿಮವಾಗತೊಡಗಿತು. ನಮ್ಮ ದೇಶದ ಹಿರಿಮೆಯ ಬಗ್ಗೆ ಕೃತ್ರಿಮ ಅಭಿಮಾನ ತೋರಿಸಿ ದೇಶಕ್ಕಾಗಿ ತ್ಯಾಗ ಮಾಡುವ ಬಗ್ಗೆ ದೊಡ್ಡದೊಡ್ಡ ಭಾಷಣ ಜಡಿದು ಒಣ ರಾಷ್ಟ್ರಭಕ್ತಿ ಬೋಧಿಸಿ, ಪಾಶ್ಚಾತ್ಯ ಮಹಿಳೆಯರೆಲ್ಲಾ ಸಿಗರೇಟ್ ಸೇದುವ ಶೀಲಗೆಟ್ಟವರು ಮತ್ತು ವಿದೇಶಿ ಗಂಡಸರೆಲ್ಲಾ ಕುಡುಕರು, ಜೂಜುಕೋರರು, ನೈತಿಕತೆ ಇಲ್ಲದ ದುಷ್ಟರು ಎಂದೆಲ್ಲಾ ನಕಾರಾತ್ಮಕವಾಗಿ ಚಿತ್ರಿಸಿ ಜನರ ಮನಸ್ಸು ಗೆಲ್ಲುವುದು ಸಾಧ್ಯ ಎಂದು ರಾಜಕಾರಣಿಗಳಿಗೆ ಕಲಿಸಿಕೊಟ್ಟವರಲ್ಲಿ ಮೊದಲಿಗರು ಈ ಮನೋಜ್ ಕುಮಾರ್.

ದೇಶಭಕ್ತಿಯ 'ಅಭಿನಯ' ಹೇಗೆ ಮಾಡಬೇಕೆಂದು ಬಿಜೆಪಿಯವರಿಗೆ ಕಲಿಸಿಕೊಟ್ಟದ್ದೇ ಮನೋಜ್ ಕುಮಾರರ ಚಿತ್ರಗಳು. ಮನೋಜರ ಚಿತ್ರಗಳನ್ನು ನೋಡಿ ಅದೇ ತರಹದ (ಸ್ಯೂಡೋ) ದೇಶಭಕ್ತಿಯ ಅಭಿನಯವನ್ನೇ ಈಗ ಸಂಘ ಪರಿವಾರದವರು ಅನುಕರಿಸುತ್ತಿರುವುದು. ನಾಟಕೀಯ ದೇಶಭಕ್ತಿಯ ಜನಕ ಪಂಜಾಬಿ ಬ್ರಾಹ್ಮಣ ಮನೋಜ್ ಕುಮಾರ್ ಇವರು ಸಂಘ ಪರಿವಾರದ ಅಂತರಂಗಿ ಕಾಶ್ಮೀರಿ ಬ್ರಾಹ್ಮಣ ಅನುಪಮ ಖೇರ್‌ನ ಪರಮಾಪ್ತನಾಗಿರುವಾಗ, ಮನೋಜ್ ಕುಮಾರ್‌ಗೆ ಫಾಲ್ಕೆ ಪ್ರಶಸ್ತಿ ಕೊಡದೇ ಇನ್ಯಾರಿಗೆ ಕೊಡಲು ಸಾಧ್ಯ? ಆರ್‌ಎಸ್‌ಎಸ್ ಮುಷ್ಟಿಯಲ್ಲಿರುವ ಈಗಿನ ಕೇಂದ್ರ ಸರಕಾರದಲ್ಲಿ ಬ್ರಾಹ್ಮಣರಿಗೆ ಎಲ್ಲಾ ಕ್ಷೇತ್ರದಲ್ಲಿ ಮೊದಲು ಪ್ರಶಸ್ತಿ ಸಿಗುತ್ತದೆ. ಆಮೇಲೆ ಏನಾದರೂ ಎಂಜಲು ಮಿಕ್ಕಿದರೆ ಅದು ಇತರ ನೈಜ ಪ್ರತಿಭೆಯುಳ್ಳವರಿಗೆ ಹೋಗುತ್ತದೆ.


- ಆರ್. ಭಾಸ್ಕರ್ ಸಿಂಹ, ಬೆಳಗಾವಿ

ಮಲ್ಯನ ಜೊತೆಗೆ ಬ್ಯಾಂಕ್ ಅಧಿಕಾರಿಗಳನ್ನೂ ಜೈಲಿಗೆ ಹಾಕಬೇಕು

ಮಲ್ಯನನ್ನು ಜೈಲಿಗೆ ಹಾಕಬೇಕು ನಿಜ. ಜತೆಗೆ ಮಲ್ಯನಿಗೆ ರಾಜಕೀಯ ಸ್ಥಾನ ಕಲ್ಪಿಸಿಕೊಟ್ಟ ಪಕ್ಷಗಳ ನೇತಾರರನ್ನು ಮತ್ತು ರಾಷ್ಟ್ರೀಕೃತ ಬ್ಯಾಂಕುಗಳ ಚೇರ್‌ಮನ್ ಮತ್ತು ಆ ಬ್ಯಾಂಕುಗಳ ಉನ್ನತಾಧಿಕಾರಿಗಳನ್ನೂ ಜೈಲಿಗೆ ತಳ್ಳಿ ಅವರೆಲ್ಲರ ಆಸ್ತಿ ಹರಾಜು ಹಾಕಬೇಕು.

ಸ್ವಯಂಘೋಷಿತ 'ಮಣ್ಣಿನ ಮಗ' ದೇವೇಗೌಡರು ವಿಜಯ ಮಲ್ಯನಿಗೆ ಕರ್ನಾಟಕದ ಸುಪುತ್ರ ಹಾಗೂ ಕರ್ನಾಟಕದ ಮಣ್ಣಿನ ಮಗ ಎಂದೆಲ್ಲಾ ಬಿರುದು ಕೊಟ್ಟಿರುವುದು ಸಮಸ್ತ ಕನ್ನಡಿಗರಿಗೆ ಅವಮಾನ. ನಿಜವಾಗಿ ಮಲ್ಯಾ ಮಣ್ಣಿನ ಮಗನಾಗಿರದೇ "ಮನಿಯ (Moneyಯ) ಮಗ" ಆಗಿರುವುದು ಸತ್ಯ. ಸರಿಯಾಗಿ ಕನ್ನಡ ಮಾತನಾಡಲು ಬಾರದ ವಿಜಯ್ ಮಲ್ಯನನ್ನು ಗೌಡರು ಕರ್ನಾಟಕದ ಮಣ್ಣಿನ ಮಗ ಎಂದು ಕರೆದಿರುವುದು ಕರ್ನಾಟಕದ ರೈತರಿಗೆಲ್ಲಾ ದೊಡ್ಡ ಅವಮಾನ. ಅದೂ ಆತ ಕೊಂಕಣಿ ಸಾರಸ್ವತ ಬ್ರಾಹ್ಮಣ. ಈ ಕೊಂಕಣಿ ಸಮುದಾಯಕ್ಕೂ ಕರ್ನಾಟಕದ ರೈತ ಸಮುದಾಯಕ್ಕೂ ಏನೇನೂ ಸಂಬಂಧವಿಲ್ಲ.


ವಿಜಯ್ ಮಲ್ಯ ಎರಡು ಅವಧಿಗೆ ರಾಜ್ಯ ಸಭೆಯ ಸದಸ್ಯನಾಗಿದ್ದ. ಎರಡೂ ಸಾರಿಯೂ ಅವನನ್ನು ರಾಜ್ಯ ಸಭೆಗೆ ಕಳುಹಿಸುವಲ್ಲಿ ಮುಖ್ಯ ಪಾತ್ರ ವಹಿಸಿದ್ದು ದೇವೇಗೌಡರ ಜೆಡಿಎಸ್ ಪಕ್ಷ. ಒಂದನೇ ಸಾರಿ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷ ಕೂಡಿ ಅವನನ್ನು ರಾಜ್ಯ ಸಭೆಗೆ ಕಳುಹಿಸಿದ್ದರೆ ಎರಡನೇ ಸಾರಿ ಜೆಡಿಎಸ್ ಮತ್ತು ಬಿಜೆಪಿ ಕೂಡಿ ಅವನನ್ನು ರಾಜ್ಯಸಭೆಗೆ ಕಳುಹಿಸಿದ್ದು, ಹೀಗೆ ಮೂರೂ ಪಕ್ಷಗಳು ಮಲ್ಯನ ಅವ್ಯವಹಾರಕ್ಕೆ ರಾಜತಾಂತ್ರಿಕ ರಕ್ಷಣೆ ಕೊಡಿಸುವಲ್ಲಿ ಪಾತ್ರ ವಹಿಸಿವೆ. ರಾಜ್ಯ ಸಭೆಗೆ ಆರಿಸಿಹೋಗಲು ವಿಜಯ್ ಮಲ್ಯ ಎಲ್ಲಾ ಪಕ್ಷದ ನೇತಾರರಿಗೆ ಮತ್ತು ಶಾಸಕರಿಗೆ ಕೊಟ್ಟಿರುವ ಕೋಟ್ಯಾಂತರ ಹಣವೆಲ್ಲಾ ಬ್ಯಾಂಕುಗಳಿಂದ ಲೂಟಿ ಹೊಡೆದಿದ್ದು ತಾನೇ! ಇದು ಗೌಡರಿಗೆ ಗೊತ್ತೇ ಇದೆ. ಅದಕ್ಕಾಗಿ ಅವರು ಮಲ್ಯನ ವಕಾಲತ್ತು ವಹಿಸಿರುವ ಹಾಗೆ ಕಾಣುತ್ತದೆ. ಹಾಗಾದರೆ ಶಾಸಕರು ಮತ್ತು ಗೌಡರು ಈಗ ಆ ಹಣವನ್ನು ಮಲ್ಯನಿಗೆ ಹಿಂತಿರುಗಿಸಿದರೆ ಬ್ಯಾಂಕಿನ ಸಾಲ ಕಟ್ಟಲು ಅವನಿಗೆ ಸ್ವಲ್ಪವಾದರೂ ಸಹಾಯ ಆಗಬಹುದು ಅಲ್ಲವೇ!



ಲಂಚ ಪಡೆದು ಈ ಶೋಕಿಲಾಲ ಮಲ್ಯನಿಗೆ ಸಾಲ ಕೊಟ್ಟ ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳ ಅಧ್ಯಕ್ಷ (MD), ಕಾರ್ಯಕಾರಿ ನಿರ್ದೇಶಕ (ED) ಮತ್ತು ಜನರಲ್ ಮ್ಯಾನೇಜರು (GM) ಗಳನ್ನು ತಕ್ಷಣ ಬಂಧಿಸಿ, ಅವರ ಕಳ್ಳ ಆಸ್ತಿ ಎಲ್ಲಾ ಮುಟ್ಟುಗೋಲು ಹಾಕಿ ಬ್ಯಾಂಕಿನ ಸುಸ್ತಿ ಸಾಲಕ್ಕೆ ಅಡ್ಜಸ್ಟ್ ಮಾಡಲೇಬೇಕು. ಈಗ ಎಲ್ಲ ರಾಷ್ಟ್ರೀಕೃತ ಬ್ಯಾಂಕ್‌ಗಳ GM, ED, MD ಇವರು ಕನಿಷ್ಠ Rs. 20-25 ಕೋಟಿಯ ಆಸ್ತಿ ಹೊಂದಿದ್ದಾರೆ. ಆದರೆ ಇವರ ಒಟ್ಟು 30-35 ವರ್ಷ ಸರ್ವಿಸಿನ ಶುದ್ಧ ಸಂಬಳದ ಉಳಿತಾಯ ಲೆಕ್ಕ ಹಾಕಿದರೆ ಅದು 30-35 ಲಕ್ಷಕ್ಕಿಂತ ಹೆಚ್ಚಾಗಲಾರದು. ನಾನೂ ಬ್ಯಾಂಕ್ ಉದ್ಯೋಗಿಯಾಗಿರುವುದರಿಂದ ಮೇಲಧಿಕಾರಿಗಳ ಸಂಬಳವೆಷ್ಟು ಹಾಗೂ ಅದರಲ್ಲಿ ಕುಟುಂಬದ ಖರ್ಚು ಹೋಗಿ ಎಷ್ಟು ಉಳಿತಾಯ ಆಗಬಹುದು ಎಂಬ ಅಂದಾಜಿದೆ. ಹಾಗಿರುವಾಗ ಇವರಲ್ಲಿ ಈ ಕೋಟಿ-ಕೋಟಿ ಆಸ್ತಿ ಎಲ್ಲಿಂದ ಬಂತು? ಕೇವಲ ನಿರ್ಲಜ್ಜ ಭ್ರಷ್ಟಾಚಾರದಿಂದ ಮಾತ್ರ ಇದು ಸಾಧ್ಯ ತಾನೇ!

ಸಿಂಡಿಕೇಟ್ ಬ್ಯಾಂಕಿನ ಅಧ್ಯಕ್ಷ ಎಸ್.ಕೆ.ಜೈನ್ ಲಂಚ ತೆಗೆದುಕೊಳ್ಳುವಾಗ ಸಿಕ್ಕಿ ಬಿದ್ದು ಎರಡು ವರ್ಷದ ಹಿಂದೆ ಜೈಲಿಗೆ ಹೋಗಿದ್ದಾರೆ. ಕೇವಲ ಜೈನನ ದುರದೃಷ್ಟದಿಂದ ಅವರು ಸಿಕ್ಕಿ ಬಿದ್ದಿರುವುದು. ಆದರೆ ಉಳಿದ ಎಲ್ಲ ಬ್ಯಾಂಕಿನ ಮೇಲಧಿಕಾರಿಗಳೂ ಇಷ್ಟೇ ಭ್ರಷ್ಟರಾಗಿದ್ದರೂ ಸಿಕ್ಕಿ ಬೀಳದಿರಲು ಕಾರಣ ಸಿಬಿಐ ಜೈನನ ಮೇಲೆ ಕಣ್ಣಿಟ್ಟಂತೆ ಉಳಿದ ಬ್ಯಾಂಕ್ ಅಧ್ಯಕ್ಷರ ಮೇಲೆ ಕಣ್ಣಿಟ್ಟಿಲ್ಲ ಅಷ್ಟೇ. ಇಲ್ಲದಿದ್ದರೆ ಹೆಚ್ಚಿನ ಬ್ಯಾಂಕ್ ಮೇಲಧಿಕಾರಿಗಳು ಎಸ್.ಕೆ.ಜೈನರೊಟ್ಟಿಗೆ ಈಗ ಜೈಲಿನಲ್ಲಿರುತ್ತಿದ್ದರು. ಹಾಗಾಗಿ ಮೊದಲು ಈ ಬ್ಯಾಂಕ್ ಮೇಲಧಿಕಾರಿಗಳ ಕುಟುಂಬದ ಅಕ್ರಮ ಆಸ್ತಿ ಮುಟ್ಟುಗೋಲು ಹಾಕಿ ಅದನ್ನು ಮಲ್ಯನ ಮತ್ತು ಇತರ ದೊಡ್ಡ ಸುಸ್ತಿದಾರರ ಸಾಲಕ್ಕೆ ಅಡ್ಜಸ್ಟ್ ಮಾಡಬೇಕು.

- ಜೆ.ರವಿಕಿರಣ, ಮೈಸೂರು



ಕಳ್ಳ ಗುರುವಿನ ಕು-ಸಂಸ್ಕೃತಿ ಉತ್ತ


ನರೇಂದ್ರ ಮೋದಿ ಅಧಿಕಾರಕ್ಕೇರುವ ಮೊದಲು
ಹೆಚ್ಚು ಪ್ರಚಾರಕ್ಕೆ ಬಿಡಲಾದ ಮಾತೆಂದರೆ "ಅಚ್ಛೇ
ಆಯೇಗಾ" ಎಂಬುದು. ನಂತರ ಆತ ಅಧಿಕಾರ
ಬಳಿಕ ಅಯ್ಯೋ ಅಧಿಕಾರಕ್ಕೇರಿ ಒಂದೆರಡು ವರ್ಷ
ಬದಲಾವಣೆ ಬಯಸುವುದು ಸರಿಯಲ್ಲ
ಕೊಂಕುಮಾತನ್ನು ಹಬ್ಬಿಸಲಾಯಿತು. ಚುನಾವಣೆ ಮೊ
ಅಪ್ಪಿತಪ್ಪಿಯೂ ಇಂತಹ ಮಾತನ್ನು ಯ
ಆಡಿರಲಿಲ್ಲವಾದರೂ ಇದೂ ಕೂಡ ತಳ್ಳಿಹಾಕುವ
ಮಾತೇನಲ್ಲ, ಆದರೆ ಒಬ್ಬನ ಅಥವ ಆತನ ಪರಿವ
ನಡೆಗಳೇ ಭವಿಷ್ಯದ ಸತ್ಯಾಸತ್ಯತೆಯ ಮುನ್ಸೂಚನೆ
ಖಂಡಿತಾ ನೀಡಬಲ್ಲದು ತಾನೇ?

ಮೋದಿ ಪರಿವಾರದ ನಡೆಗಳಲ್ಲಿ ಆತ ಹೇಳಿದ
'ಅಚ್ಛೇ ದಿನ'ದ ಯಾವ ಮುನ್ಸೂಚನೆಗಳೂ ಕಾಣಿಸಲ
ಇದು ಆತನ ವಿರೋಧಿಗಳ ಮಾತಲ್ಲ ಆತನನ್ನು ಇನ್ನಿಲ
ಭಜಿಸುತ್ತಿದ್ದ ಅರುಣ್ ಶೌರಿಯಂತವರೇ ಹೇಳುವ
ಮಾತು.

ಈ ಮೋದಿ ಹೋದಲ್ಲೆಲ್ಲ - ವಿದೇಶಗಳಲ್ಲೂ
- ಹಿಂದಿನ ಸರಕಾರ ದೇಶವನ್ನು ಹಾಳು ಮಾ
ನಾವು ಬಂದಮೇಲೆ ಇಡೀ ವಿಶ್ವವೇ ನಮ್ಮತ್ತ ತಿರುಗು
ಮಾಡಿದ್ದೇವೆ ಎಂದೆಲ್ಲ ಜಂಭ ಕೊಚ್ಚಿಕೊಳ್ಳುತಿರು
(ನಿಜಕ್ಕೂ ಆತ ಸಾಧನೆ ಮಾಡಿದ್ದೇ ಆದರೆ ಈ ರೀತಿ
ತಾನೇ ಬಿಂಬಿಸಿಕೊಳ್ಳುವಂತಹ ಪ್ರಮೇಯವೇ ಬರುತ್ತಿ
ಅದೂ ಒಂದು ದೇಶದ ಪ್ರಧಾನಿಯಾಗಿ). ಇದನ್ನೆಲ್ಲ ಯ
ಹೇಳುತ್ತಿದ್ದೇನೆಂದರೆ, ಆತ ಏನೇ ಮಾಡಲಿ ಆತ ಹೇಳಿ
ನೂರಕ್ಕೆ ನೂರು ಸಾಧಿಸಿ ತೋರಬೇಕೆಂಬ ಹಟ ಯಾ
ಇಲ್ಲ, ಆದರೆ ಕಿಂಚಿತ್ತಾದರೂ ಆತ ಈ ದೇಶದ ಸಾ
ಜನತೆಯ ಬಗ್ಗೆ ಯೋಚಿಸಿದ್ದಾನೆಯೇ ಎಂದು ನ
ಹೋದರೆ ಯಾರಿಗೇ ಆದರೂ ಖಂ

ಬುದ್ಧನ ಬೋಧನೆಗಳನ್ನು ಮರೆತಿರುವುದು ದುರಂ

ವೈದಿಕ ಪುರಾಣಗಳ ಒಗಟಿನ ಬಗ್ಗೆ ತನ್ನದೇ ರೀತಿಯಲ್ಲಿ ಸಂಶೋಧನೆ ಮಾಡಿರುವ ನನ್ನ ಮಿತ್ರರೊಬ್ಬರು ಯಾವಾಗಲೂ ಹೇಳುತ್ತಾರೆ "ಪುರಾಣಗಳಲ್ಲಿ ಉಲ್ಲೇಖವಾಗಿರುವ ಅಸುರ, ದಾನವ, ರಾಕ್ಷಸ ಈ ಎಲ್ಲರೂ ಇಲ್ಲಿಯ ಬುಡಕಟ್ಟು ಜನಾಂಗದ ಮುಖಂಡರಾಗಿದ್ದು ಅವರಿಗೆ ಅಥವಾ ಅವರ ಹೆತ್ತವರಿಗೆ ಒಂದಕ್ಷರ ಸಂಸ್ಕೃತ ಬರುತ್ತಿರಲಿಲ್ಲ, ಹಾಗಿರುವಾಗ ಅವರೆಲ್ಲರಿಗೂ ಸಂಸ್ಕೃತ ಹೆಸರು ಇಟ್ಟವರಾರು? ಈ ಅಸುರರಿಗೆ ತಮ್ಮ ಮಾತೃ ಭಾಷೆಗಿಂತ ತಮ್ಮ ವೈರಿಗಳಾದ ಸುರರ ಗುಪ್ತ ಭಾಷೆಯಾದ ಸಂಸ್ಕೃತ ಹೆಚ್ಚು ಪ್ರಿಯವಾಗಲು ಕಾರಣವೇನು? (ಸಂಸ್ಕೃತ ಯಾವಾಗಲೂ ಯಾವುದೇ ಜನಾಂಗದ ಮಾತೃಭಾಷೆ ಆಗಿರಲಿಲ್ಲ, ಅದು ಕೇವಲ ವೈದಿಕರ ಕೋಡ್- ಭಾಷೆಯಾಗಿತ್ತು). ಯಾರಾದರೂ ತಮ್ಮ ಮುದ್ದಿನ ಮಕ್ಕಳಿಗೆ ತಮ್ಮ ಸ್ವಂತ ಮಾತೃಭಾಷೆಯಲ್ಲಿ ಹೆಸರಿಡದೇ ತಮ್ಮ ವೈರಿಗಳ ಗುಪ್ತ ಭಾಷೆಯಲ್ಲಿ ಅನಿಷ್ಟ ಹೆಸರಿಡುತ್ತಾರೆಯೇ? ಮಹಿಷಾಸುರ, ನರಕಾಸುರ, ಅರುಣಾಸುರ, ಕಂಸ, ಶುಂಬ-ನಿಶುಂಬ, ಚಂಡ-ಮುಂಡ, ಮಧು-ಕೈಟಭ, ರಾವಣ, ಕುಂಭಕರ್ಣ, ವಿಭೀಷಣ, ಇಂದ್ರಜಿತ್, ಶೂರ್ಪನಖಿ, ತಾರಕಾಸುರ, ಹಿರಣ್ಯಾಕ್ಷ ಹಿರಣ್ಯಕಶಿಪು, ಪ್ರಹ್ಲಾದ, ಬಲೀಂದ್ರ, ಘಟೋತ್ಕಚ, ಹಿಡಿಂಬಾ, ಹೀಗೆ ಎಲ್ಲಾ ರಾಕ್ಷಸರ ಹೆಸರುಗಳು ಇರುವುದು ಸಂಸ್ಕೃತದಲ್ಲಿ, ಅದೇ ಪ್ರಕಾರ ಮಾನವ ರಾಜರು ಯಾರೂ ತಮ್ಮ ಎಲ್ಲಾ ನೂರಾ ಒಂದು ಮಕ್ಕಳಿಗೆ ಅನಿಷ್ಟ ಅರ್ಥದ ಹೆಸರು ಇಡುವುದಿಲ್ಲ. ಆದರೆ ಧೃತರಾಷ್ಟ್ರ ಮತ್ತು ಗಾಂಧಾರಿ ತಮ್ಮ ಎಲ್ಲಾ ನೂರಾ ಒಂದು ಮಕ್ಕಳಿಗೂ 'ದು' ಎಂಬ ಅನಿಷ್ಟ ಸೂಚಕ ಅಕ್ಷರದಿಂದ ಶುರುವಾಗುವ ದುರ್ಯೋಧನ ದುಶ್ಯಾಸನ ದುಶ್ಯಲೆ ಇಂತಹ ಕೆಟ್ಟ ನಕಾರಾತ್ಮಕ ಹೆಸರುಗಳನ್ನೇ ಇಟ್ಟದ್ದರು. ತಾವು ಹೆತ್ತ ಮಕ್ಕಳ ಮೇಲೆ ಪ್ರೀತಿ ಅಭಿಮಾನ ಇರುವ ಯಾವುದೇ ವಿಚಾರವಂತ ರಾಜಕುಟುಂಬ ಇಂತಹ ಮೂರ್ಖತನ ತೋರಿಸಲು ಸಾಧ್ಯವೇ ಇಲ್ಲ, ಇದರಿಂದ ಸಾಬೀತಾಗುವುದೇನೆಂದರೆ ಈ ಎಲ್ಲಾ ಪುರಾಣಗಳ ಪಾತ್ರಗಳು ಪುರಾಣಕರ್ತರ ತಲೆಯಲ್ಲಿ ಹುಟ್ಟಿದ ಶುದ್ಧ ಕಾಲ್ಪನಿಕ ಪಾತ್ರಗಳು ಎಂಬುದು. ಪುರಾಣದ ಎಲ್ಲಾ ರಾಕ್ಷಸರ ಮತ್ತು ದುಷ್ಟ ವ್ಯಕ್ತಿಗಳ ಪಾತ್ರಗಳು ಕಾಲ್ಪನಿಕ ಎಂದಾದ ಮೇಲೆ ಇವರನ್ನು ಕೊಲ್ಲಲು ದೇವರುಗಳು ಚಿತ್ರವಿಚಿತ್ರ ರೂಪದಲ್ಲಿ



ಅಥವಾ ಪ್ರಾಣಿ ರೂಪದಲ್ಲಿ ಅವತಾರ ಎತ್ತಿದ್ದು ಸಹ ಪೂರ್ಣ ಕಾಲ್ಪನಿಕ ಎಂದು ಸಾಬೀತಾಯಿತು. ಒಟ್ಟಾರೆ ವೈದಿಕ ದೇವರುಗಳೆಲ್ಲಾ ಕೇವಲ ಕಾಲ್ಪನಿಕ ಪಾತ್ರಗಳು ಎಂಬುದೇ ಸರಿ. ಹಾಗಿರುವಾಗ ಅಸ್ತಿತ್ವದಲ್ಲಿಯೇ ಇರದ ಇಂತಹ ಕಾಲ್ಪನಿಕ ರೂಪದ ದೇವರ ಹೆಸರಲ್ಲಿ ನಾವು ನಾವೇ ಯಾಕೆ ಕಚ್ಚಾಡಿಕೊಳ್ಳಬೇಕು?"

ಒಮ್ಮೆ ಗೌತಮ ಬುದ್ಧ ಒಂದು ಧಾರ್ಮಿಕ ಸಭೆಯಲ್ಲಿ ಬೋಧಿಸುತ್ತಾ ತನ್ನ ಎರಡೂ ಕೈಗಳನ್ನು ತನ್ನ ಜೋಳಿಗೆಯಲ್ಲಿ ಹಾಕಿ ಜನರಿಗೆ ಕಾಣದಂತೆ ಅದೇನನ್ನೋ ಮುಷ್ಟಿಯಲ್ಲಿ ಅವುಕಿ ಹಿಡಿದುಕೊಂಡು ಎರಡೂ ಮುಷ್ಟಿ ಜೋಳಿಗೆಯಿಂದ ಹೊರ ತೆಗೆದು ಅಲ್ಲಿ ಸೇರಿದ್ದ ಜನರ ಎದುರು ಹಿಡಿದು "ನನ್ನ ಒಂದು ಮುಷ್ಟಿಯಲ್ಲಿ ಚಿನ್ನದ ನಾಣ್ಯವಿದೆ ಮತ್ತು ಇನ್ನೊಂದು ಮುಷ್ಟಿಯಲ್ಲಿ ಬೆಳ್ಳಿಯ ನಾಣ್ಯವಿದೆ. ಈಗ ನೀವು ಹೇಳಬೇಕಾದುದಿಷ್ಟೇ- ನನ್ನ ಯಾವ ಕೈಯಲ್ಲಿ ಚಿನ್ನದ ನಾಣ್ಯವಿದೆ ಎಂಬುದು. ಸರಿಯಾಗಿ ಉತ್ತರ ಹೇಳಿದವನಿಗೆ ಆ ಚಿನ್ನದ ನಾಣ್ಯ ಬಹುಮಾನವಾಗಿ ಸಿಗಲಿದೆ" ಎಂದನು. ಆಗ ಸಭಿಕರಲ್ಲಿ ಕೆಲವರು ಬುದ್ಧನ ಬಲಗೈಯಲ್ಲಿ ಚಿನ್ನದ ನಾಣ್ಯ ಮತ್ತು ಎಡಗೈಯಲ್ಲಿ ಬೆಳ್ಳಿ ನಾಣ್ಯವಿದೆ ಎಂದರೆ ಕೆಲವರು ಎಡಗೈಯಲ್ಲಿ ಚಿನ್ನದ

ನಾಣ್ಯವಿದ್ದು ಬಲಗೈಯಲ್ಲಿ ಬೆಳ್ಳಿಯ ನಾಣ್ಯವಿದೆ ಎ
ಹೇಳತೊಡಗಿದರು. ಈ ವಾಗ್ವಾದದಲ್ಲಿಯೇ ಅಲ್ಲಿಯ ಜ
ಎರಡು ಗುಂಪಾಗಿ ಅವರು ತಮ್ಮತಮ್ಮಲ್ಲಿಯೇ ಜ
ಶುರುವಿಟ್ಟುಕೊಂಡರು. ಕೆಲವು ನಿರ್ಲಿಪ್ತರು ದ
ನಿಂತುಕೊಂಡು ತಮಾಷೆ ನೋಡುತ್ತಿದ್ದರು. ಕೊನೆಗೆ ಗೌ
ಬುದ್ಧ ತನ್ನ ಮುಷ್ಟಿ ತೆರೆದು ತೋರಿಸಿದನು. ಅ
ಎರಡೂ ಕೈಯಲ್ಲಿ ಏನೂ ಇರಲಿಲ್ಲ. ಜ
ಬೇಸರಗೊಂಡರು. ಆಗ ಬುದ್ಧ ವಿವರಿಸಿದ "ದೇ
ವಿಷಯದಲ್ಲಿಯೂ ನೀವೆಲ್ಲಾ ಮಾಡುವ ಜಗಳ-ವಾಗ್ವಾದ
ಇದೇ ರೀತಿಯಿದೆ. ನಾನು ನನ್ನ ಕೈಯಲ್ಲಿ ಚಿನ್ನ-ಬೆಳ
ನಾಣ್ಯಗಳಿವೆ ಎಂದು ಸುಳ್ಳು ಹೇಳಿದರೂ ನೀವು ಕುರು
ನಂಬಿಬಿಟ್ಟಿರಿ. ನಾನೊಬ್ಬ ಭಿಕ್ಷು ನನ್ನ ಹತ್ತಿರ ಚಿನ್ನ-
ಇರಲು ಸಾಧ್ಯವಿಲ್ಲ ಎಂಬ ವಿಚಾರ ನಿಮಗೆ ಹೊಳೆಯ
ಇಲ್ಲ. ಅದೇ ರೀತಿ ಯಾರೋ ಒಬ್ಬ ಬಂದು ದೇವರೆಂ
ಹೀಗಿರುತ್ತಾನೆ, ಈ ಗುಣಗಳಿರುತ್ತವೆ, ಹೀಗೆ ಹೋ
ಹವನ ಮಾಡಿದರೆ ಆ ದೇವರು ಒಲಿಯುತ್ತಾನೆ ಎ
ಹೇಳಿದ ತಕ್ಷಣ ನೀವು ನಂಬಿ ಬಿಡುತ್ತೀರಿ. ಅದು ನಿಮ
ಜೀವನವಿಡೀ ತಪ್ಪು ದಾರಿಯಲ್ಲಿ ಕೊಂಡು ಹೋಗಿ ಇ
ಇರುವ ವಿಚಿತ್ರ ರೂಪದ ದೈವಿಶಕ್ತಿಯನ್ನು ಹುಡುಕು
ಮಾಡಿ ನಿಮ್ಮ ಇಡೀ ಜೀವನವನ್ನೇ ವ್ಯರ್ಥ ಮಾಡು
ನಿಜವಾಗಿ ದೇವರೆಂದರೆ ನನ್ನ ಖಾಲಿ ಕೈಯಂತೆ ಶೂ
ಆ ಶೂನ್ಯದ ಅರ್ಥ ತಿಳಿದುಕೊಳ್ಳಲಾಗದೇ ನೀವೆಲ್ಲಾ
ಶೂನ್ಯಕ್ಕೆ ವಿವಿಧ ರೂಪ ಆಕಾರ ಗುಣಾವಗುಣಗಳ
ಅಂಟಿಸಿ, ನಿಮ್ಮ ನಂಬಿಕೆಯೇ ಸರಿ ಎಂದು ಜಗಳಾ
ತ್ತಿರುವಿರಿ. ನನ್ನ ಮುಷ್ಟಿಯಲ್ಲಿ ಇಲ್ಲದೇ ಇದ್ದ ಚಿನ್ನ-ಬೆಳ್ಳಿ
ನಾಣ್ಯಕ್ಕೆ ನೀವು ಜಗಳಾಡಿದ ರೀತಿಯಲ್ಲಿಯೇ ಇ
ಇರುವ ವಿವಿಧ ರೂಪದ ದೇವರಿಗಾಗಿ ಹಾಗೂ ವಿ
ಧಾರ್ಮಿಕ ನಂಬಿಕೆಗಳಿಗಾಗಿ ನೀವು ಜಗಳಾಡುತ್ತಾ ಇರುವಿ
ಎಂದು ವಿವರಿಸಿದನು.

ಹೀಗೆ ಎರಡೂವರೆ ಸಾವಿರ ವರ್ಷಗಳ ಹಿಂದೆ ಗೌ
ಬುದ್ಧ ಹೇಳಿದ ಈ ಶೂನ್ಯದ ಅರ್ಥ ಹಾಗೂ ಅ
ಬೋಧನೆಗಳು ಇಂದಿಗೂ ಭಾರತೀಯರು ಅ
ಮಾಡಿಕೊಳ್ಳದಿರುವುದು ದೊಡ್ಡ ದುರಂತ.


- ಪ್ರವೀಣ್ ಎಸ್ ಶೆಟ್ಟಿ, ಮಂಗಳೂ

ಷ್ಟ್ರಮುನಿರುಸನವಾಗದೇ ಇರದು.

ಅದಾನಿ, ಅಂಬಾನಿ, ಬಾಬಾ ರಾಮದೇವ್, ಶ್ರೀ ಶ್ರೀ ರವಿಶಂಕರರಂತಹ ಬೆವರು ಸುರಿಸದೇ ಉಣ್ಣುವವರ ಜೇಬಿನಲ್ಲೇ ಈತ ತೊಡಗುತ್ತಿರುವುದನ್ನೂ ನೋಡಿದರೆ ಈ ಅಚ್ಛೇ ದಿನ್ ಕಾನ್ಸೆಪ್ಟ್ ಯಾವ ರೀತಿಯಲ್ಲಿ ಎಕ್ಕುಟ್ಟಿ ಹೋಗುತ್ತಿದೆ ಎಂದು ಎಂಥವರಿಗಾದರೂ ಅರ್ಥವಾಗದೇ ಇರದು.

ಅವನ್ಯಾರೋ ಸಗಣಿ ಸ್ವಾಮಿ ಒಂದೇ ಒಂದು ದನದ ಮೈತೊಳೆದು, ಸಗಣಿ ಬಾಚಿ, ಗಂಜಲ ತೆಗೆದ ಉದಾಹರಣೆ ಇಲ್ಲದಿದ್ದರೂ ಕರುವಿಗೆ ಮುದ್ದಿಸೋ ಫೋಟೋ ಹಿಡಿದುಕೊಂಡೇ ತಾನು ಒನ್ ಎಂಡ್ ಓನ್ಲಿ ಗೋಸೇವಕನೆಂಬ ಪೋಸ್ ನೀಡಿ ರಾಜ್ಯ ಸರಕಾರದಿಂದ ಕೋಟಿಗಟ್ಟಲೆ ನುಂಗಿ ಹಣ ಹಾಗು ಗೆಲುವಿನ ಮದದಲ್ಲಿ ಹೆಣ್ಣಿನ ಸೆರಗಿಗೆ ಕೈಹಾಕಿ ಇದೀಗ ಅಜ್ಞಾತವಾಸ ಅನುಭವಿಸುತ್ತಿದ್ದಾನೆ. (ಆರೋಪ ಬಂದಾಕ್ಷಣ ಅಪರಾಧಿ ಅಲ್ಲ ಎಂದು ಈತನನ್ನು ಇನ್ನಿಲ್ಲದಂತೆ ಸಮರ್ಥಿಸಿಕೊಂಡ ಪೇಜಾವರ ಸ್ವಾಮಿ ಖಂಡಿತ ತನ್ನನ್ನು ತನ್ನ ಪರ್ಯಾಯಕ್ಕೆ ಆಹ್ವಾನಿಸುತ್ತಾರೆಂದು ಕಾತರದಿಂದ ಕಾಯುತ್ತಿದ್ದ ಈ 'ಸುದ್ದ' ಹಸ್ತನನ್ನು ನವರಂಗಿ ಪೇಜಾವರ ಮೂಸಿಯೂ ನೋಡದೇ ತನ್ನ ಪರ್ಯಾಯ ಕಾರ್ಯಕ್ರಮಕ್ಕೆ ಈತ ಬರಲೇಬಾರದೆಂದು ಪರೋಕ್ಷವಾಗಿ ತಾಕೀತು ಮಾಡಿದ್ದರಂತೆ. ಅದರ ಪ್ರತಿಫಲವೇ ಸಗಣಿ ವೀರ ದುಡ್ಡು ಸುರಿದು ಮಾಡಿದ ಬೆಂಗಳೂರಿನ ಸಹಸ್ರ ಸಂತ ಮೇಳ ಎಂಬ ಪ್ರಹಸನ ಎನ್ನುವವರಿದ್ದಾರೆ.)

ಅದೇರೀತಿ ಸದಾ ಹೆಣಕ್ಕೆ ಹೊದಿಸುವ ಬಿಳಿ ಬಟ್ಟೆಯನ್ನು ಉಟ್ಟು ಎಂದಿಗೂ ಮಣ್ಣನ್ನೇ ಮುಟ್ಟದೇ, ಧೂಳೂ ಸೋಕದ ಏಸಿ ಹಾಲ್, ಏಸಿ ವಾಹನಗಳಲ್ಲೇ ಸಂಚರಿಸುವ ನೊಬೆಲ್ ಕಳ್ಳ ರವಿಶಂಕರ ತಾನು ಕೋಟಿಕೋಟಿ ಗಿಡ ನೆಟ್ಟಂತವನು, (ಈತನ ಪ್ರಕಾರ ಗಿಡ ನೆಡುವುದೆಂದರೆ ಚಾಪೆ ಹಾಸಿ ಮಲಗಿದಷ್ಟು ಸುಲಭ. ಗುಂಡಿ ತೆಗೆಯಬೇಕು, ಗೊಬ್ಬರ ಹಾಕಬೇಕು, ದನಕರು ತಿನ್ನದಂತೆ ಬೇಲಿ ಮಾಡಬೇಕು, ಬೆಳೆಯುವತನಕ ನೀರೂಣಿಸಬೇಕು ಆದರೂ ಈತನದ್ದು ಕೋಟಿ ಕೋಟಿ



ಲೆಕ್ಕಾಚಾರ. ನಮ್ಮ ತಿಮ್ಮಕ್ಕನಿಗೂ ಮೇಲೆ..!) ಪರಿಸರದ ಬಗ್ಗೆ ತನಗೆ ಯಾರೂ ಹೇಳಿ ಕೊಡಬೇಕಾಗಿಲ್ಲ ಎನ್ನುತ್ತಾ ಮೊದಲೇ ಮಲಿನವಾದಂತಹ ಯಮುನೆಯ ತಟವನ್ನು ಮತ್ತಷ್ಟು ಹಾಳುಗೆಡವಿದ್ದಾನೆ.

ಐಷಾರಾಮಿ ಬಂಗಲೆಗಳಲ್ಲಿ ವಾಸಿಸುತ್ತಿರುವ ಎಲ್ಲಾ ಖಾವಿಧಾರಿಗಳು ಒಂದೇ. ಇವರ್ಯಾರೂ ಐಹಿಕ ಸುಖ ಲಾಲಸೆಗಳಿಂದ ಮುಕ್ತರಾಗಿರುವುದು ಬಿಡಿ ಸಾಮಾನ್ಯ ಜನತೆಗಿಂತಲೂ ಇವರ ಮಾನಸಿಕ ಸ್ಥಿತಿ ತೀರಾ ಕೆಟ್ಟದ್ದಾಗಿರುತ್ತದೆ. ಬಾಬಾ ರಾಮ್ ಪಾಲ್ ದಾಸ್, ಬಾಬಾ ರಾಮ ದೇವ್, ಧೀರೇಂದ್ರ ಬ್ರಹ್ಮಾಚಾರಿ, ನಿತ್ಯಾನಂದ, ಸಗಣಿವೀರ ಇವರನ್ನೆಲ್ಲ ಗಮನಿಸಿದರೇ ಗೊತ್ತಾಗುತ್ತದೆ. ತನ್ನಂತೆ ಹಲವಾರು ವಿದೇಶಿ ಭಕ್ತರನ್ನು ಹೊಂದಿ ಬೆಂಗಳೂರಲ್ಲಿ ತನ್ನ ಪ್ರತಿಸ್ಪರ್ಧಿ ಈತ ಎಂಬ ಕಾರಣಕ್ಕೆ ನಿತ್ಯಾನಂದ ಸ್ವಾಮಿಯ ವಿರುದ್ಧ ಒಳಗೊಳಗೇ ಜನರನ್ನು ಎತ್ತಿಕಟ್ಟಿದ ಆರ್ಟ್ ಆಫ್ ಲಿವಿಂಗ್‌ನ ಈತ ಮೂಲತಃ ಆತನಿಗಿಂತಲೂ ಕಡೆ. ಈತ ಎಂತ ಹುಂಬನೆಂದರೆ "ನೂರೈವತ್ತಕ್ಕೂ ಹೆಚ್ಚು ದೇಶಗಳ ಜನರು ಭಾಗವಹಿಸುವ ಈ ಸಂಸ್ಕೃತಿ ಉತ್ಸವದಿಂದ ನಮ್ಮ ದೇಶದ ಸಂಸ್ಕೃತಿ ವಿಶ್ವದೆಲ್ಲೆಡೆ ಪಸರಿಸುತ್ತದೆ" ಎನ್ನುತ್ತಲೇ ತನ್ನ ವಿವಾದದ ಬಗ್ಗೆ ಮಾತನಾಡುತ್ತಾ ಜೈಲಿಗೆ ಹೋಗಲೂ ಸಿದ್ಧ ಆದರೆ ದಂಡವನ್ನು ಮಾತ್ರ ಬಿಲ್‌ಕುಲ್ ಕಟ್ಟಲಾರೆ ಎಂದು ತನ್ನ ಸಂಸ್ಕೃತಿ ಏನೆಂಬುದನ್ನು ಎಲ್ಲರೆದುರು ಬಹಿರಂಗಪಡಿಸಿ ಬಿಟ್ಟಂತವನು.

ಮೋದಿ ಹಾಗು ಮೋದಿ ಸರಕಾರದ ಬೆಂಬಲದ ಹಿನ್ನೆಲೆಯಲ್ಲಿ ತನ್ನನ್ನು ಯಾರೂ ಜೈಲಿಗೆ ತಳ್ಳಲಾರರು ಎಂಬ ಧೈರ್ಯದಲ್ಲೇ ಇಂತಹ ಮಾತನ್ನಾಡಿರುವ ಈತ ಈ ಪ್ರಜಾಪ್ರಭುತ್ವ ಸಂವಿಧಾನದಲ್ಲಿ ಎಲ್ಲರೂ ಸಮಾನರು, ಕಾನೂನಾತ್ಮಕವಾಗಿ ಪರಿಸರ ಸಂಬಂಧಿ ವಿಚಾರಣೆಗನುಗುಣವಾಗಿ ದಂಡ ಕಟ್ಟಬೇಕಾಗಿ ಬಂದಲ್ಲಿ ತಾನೂ ಅದಕ್ಕೆ ಬದ್ಧತೆ ತೋರಬೇಕೆಂಬ ಕಾಮನ್‌ಸೆನ್ಸನ್ನೂ ತೋರದೇ ಇಡೀ ವಿಶ್ವದೆದುರು ದೇಶದ ಸಂಸ್ಕೃತಿಯ ರಾಯಭಾರತನ ತೋರುತ್ತಾನೆಂದರೆ ಎಂತಹ ವಿಪರ್ಯಾಸ.

ಆರಂಭದಲ್ಲಿ ತನ್ನಲ್ಲಿ ಕಾಸೇ ಇಲ್ಲವೆಂದ ಈತ ಕೇವಲ ಸಮಾರಂಭದ ಅಲಂಕಾರಕ್ಕೇ ಕೋಟಿಗಟ್ಟಲೆ ಹಣವನ್ನು ವ್ಯಯಿಸಿದ್ದಾನೆ. ಬಳಿಕ ಕೇಂದ್ರ ಮಂತ್ರಿಗಳ ಬೆಂಬಲ ಇದ್ದೇ ಇದೆ ಎಂಬ ಸುಳಿವು ದೊರೆತ ಮೇಲೆ "ನಾನು ದಂಡ ಕಟ್ಟಲಾರೆ. ನೀವೇನ್ ಮಾಡ್ತೀರೋ ಮಾಡ್ಕೊಳ್ಳಿ" ಎಂಬಂತಹ ಉಡಾಫೆಗಿಳಿದುಬಿಟ್ಟ. ಹೇಗೂ ಸರಕಾರ ದಿಂದಲೇ ಕೋಟಿಗಟ್ಟಲೆ ಹಣ ಮಂಜೂರಾಗಿದೆ. ಸಿಯಾಚಿನ್‌ನಲ್ಲಿ ಮಂಜಿನಲ್ಲಿ ಹೂತು ಸಂಕಟಪಡುವಂತಹ ಸೈನಿಕರನ್ನು ವಿಶ್ವಮಟ್ಟದಲ್ಲಿ ತನ್ನ ಪ್ರಭಾವ ತೋರಿಸಿಕೊಳ್ಳೋ ಕಾರ್ಯಕ್ರಮದಲ್ಲಿ ಬಿಟ್ಟಿ ದುಡಿಸಿಕೊಂಡು ತನ್ನ ದಾರ್ಷ್ಟ್ಯತನವನ್ನು ತೋರಿದ್ದಷ್ಟೇ ಅಲ್ಲದೇ ಬಹಿರಂಗವಾಗಿ ಪಾಕಿಸ್ತಾನಕ್ಕೆ ಜಿಂದಾಬಾದ್ ಎಂದು ಕೂಗಿದ ಈತನ ದೇಶದ್ರೋಹದ ಬಗ್ಗೆ ಈವರೆಗೆ ಚೀರಾಡುತ್ತಿದ್ದ ಕಳ್ಳ ದೇಶಪ್ರೇಮಿಗಳು ಯಾರೂ ಸೊಲ್ಲೆತ್ತಲೇ ಇಲ್ಲ.


ಈ ದೇವಮಾನವರು ಸ್ವಾಮೀಜಿಗಳದ್ದು ತಾವು ಏನೂ ಮಾಡಬಹುದು, ನಮ್ಮನ್ಯಾರೂ ಮುಟ್ಟಲಾರರು, ನಾವು ಎಲ್ಲದ್ದಕ್ಕೂ ಅತೀತರು ಎಂಬ ಅಹಂಭಾವ ಜೊತೆಗೆ ಅವಿವೇಕ ಬೇರೆ. ಇಂತಹವರನ್ನು ಇನ್ನಿಲ್ಲದಂತೆ ಪೋಷಿಸುವ ಸರಕಾರಗಳು ಬೇರೆ. ಕರ್ನಾಟಕದ ಜಗತ್ಪ್ರಸಿದ್ಧ (ಪ್ರೈಯ್ಯಾರಿಯೂ ಇಲ್ಲಿನವನೇ) ಆನಂದ ಗುರೂಜಿ ಗೊರವರ ಹಳ್ಳಿಯಲ್ಲಿ ನಾಣ್ಯ ಕೊಡುತ್ತೇನೆಂದು ಡಂಗುರ ಸಾರಿ ಜನರನ್ನು ಅದರಲ್ಲೂ ಮಕ್ಕಳು ಮಹಿಳೆಯರನ್ನು ಹಿಂಸಿಸಿದ್ದಕ್ಕೆ ಯಾವ ಶಿಕ್ಷೆಯೂ ಸಿಗಲಿಲ್ಲ, ಸಗಣಿಸ್ವಾಮಿಯಿಂದ ಸಂತ್ರಸ್ತರಾದ ಮಹಿಳೆಯ ಪಾಡು ಬರಿಯ ಹೋರಾಟವಷ್ಟೇ ಆಗಿಬಿಟ್ಟಿದೆ. ಮೊನ್ನೆ ಮೊನ್ನೆ ಕರಾವಳಿಯ ಕುಂಬಾರ ಜಾತಿಯ ಮೋಹನದಾಸ ಸ್ವಾಮಿ ಎಂಬಾತ ಬೆಂಗಳೂರಿನಿಂದ ಕಾರಲ್ಲಿ ಬರುವಾಗ ಯಾರಿಗೋ ಗುದ್ದಿ ಅವರ ಸಾವಿಗೆ ಕಾರಣನಾಗಿದ್ದಲ್ಲದ್ದೇ ಮಾನವೀಯತೆಯಿಂದ ನೆರವಿಗೂ ಧಾವಿಸದೇ ಪರಾರಿಯಾಗಿದ್ದ, ಬಳಿಕ ಸ್ಥಳದಲ್ಲಿ ದೊರೆತ ಸುಳಿವುಗಳ ಆಧಾರದಲ್ಲಿ ಈತನನ್ನು ಸಂಪರ್ಕಿಸಲಾಯಿತಾದರೂ ಸ್ವಾಮಿ ಮಾತ್ರ ಸೇಫ್.

ಹೆಣ್ಣನ್ನು ಅವಮಾನಿಸುವ ಕುಖ್ಯಾತ ಪುತ್ರಜೀವಕ ಔಷಧದ ರಾಮ ದೇವನಂತೂ ಐಲ್ಯಾಂಡ್ ಖರೀದಿಸುತ್ತಿದ್ದಾನೆ, ದೇಶದೆಲ್ಲೆಡೆ ರೈತರ ಬಿಟ್ಟಿ ಜಾಗವನ್ನು ಪಡೆದುಕೊಳ್ಳುತ್ತಾನೆ, ತನ್ನ ಪ್ರಾಡಕ್ಟ್‌ಗಳನ್ನು ಸರಕಾರದ ಕೃಪಾಧಿಕಾರಿಗಳ ಮೂಲಕ ಮಾರಾಟ ಮಾಡಿ ಕುಬೇರನಾಗುತ್ತಿದ್ದಾನೆ. ಮೋದಿ ಚೇಲಾಗಿರಿಯಿಂದ ಯೋಗದ ಅಂಬಾಸಿಡರ್ ಆದ ಈತನಿಗಾಗಿ "ಯೋಗದಿನ" ಎಂಬ ಹೊಸ ಆಚರಣೆಯನ್ನೇ ಮೋದಿ ಆರಂಭಿಸಿದ. ದಲೈ ಲಾಮಾರಿಗೆ ನೊಬೆಲ್ ಸಿಕ್ಕಿದ್ದಕ್ಕೆ ಕುರುಬಿದ ರವಿಶಂಕರ್ ರಾಮದೇವ ಮೋದಿಯಿಂದ ಈ ರೀತಿಯಾಗಿ ಬೆಳೆಯುತ್ತಿರುವುದನ್ನು ಸಹಿಸಲಾರದೇ ಯಮುನೆಯ ತಟದಲ್ಲಿ ಸಂಸ್ಕೃತಿ ಉತ್ಸವವನ್ನು ಕೈಗೊಂಡು, ಮೋದಿಯನ್ನೇ ಆಹ್ವಾನಿಸಿ ಪ್ರಧಾನಿಯೊಂದಿಗೆ ಆಸನವನ್ನು ಹಂಚಿಕೊಂಡು ತನ್ನ ಪ್ರಭಾವವನ್ನು ತೋರಿಸಿಕೊಂಡು ತನ್ನ ಕಾರ್ಯಸಾಧನೆ ಮಾಡಿಕೊಂಡ. ಗಮನಿಸಿ ಯೋಗ, ಆಯುರ್ವೇದ, ಆಧ್ಯಾತ್ಮಕ್ಕೆ ವಿದೇಶದಲ್ಲಿ ಒಳ್ಳೆಯ ಮಾರುಕಟ್ಟೆಯಿದೆ. ಬೆಂಗಳೂರಿನ ರವಿಶಂಕರ ಡೆಲ್ಲಿಯಲ್ಲಿ ಅಂತಾರಾಷ್ಟ್ರೀಯ ಮಟ್ಟದ ಸಂಸ್ಕೃತಿ ಸಮ್ಮೇಳನ ನಡೆಸುವುದರ ಹಿಂದಿನ ಮಸಲತ್ತಿಗೂ ಇಲ್ಲಿನ ಮೂಲ ಸಂಸ್ಕೃತಿ ಮೇಲಿನ ಕಾಳಜಿಗೂ ಸಂಬಂಧವೇ ಇಲ್ಲ. ಆತನ ಸಂಸ್ಥೆಯ ಧ್ಯೇಯವಾಕ್ಯವೇ ಹೇಳುವಂತೆ ಇದೊಂದು "ಬದುಕುವ ಕಲೆ" **(Art of living)** ಯೇ ಹೊರತು ಬೇರೇನಲ್ಲ. ಮೋದಿಯಂತಹ ಮೂರ್ಖ ಅಧಿಕಾರದಲ್ಲಿರುವಾಗಲೇ ಸಮಯವನ್ನು ಬಳಸಿಕೊಳ್ಳಬೇಕು; ಇಂತಹ ಸಂದರ್ಭ ಮತ್ತೊಮ್ಮೆ ಸಿಗಲಾರದು ಎಂಬ ತತ್ವ ಇದರ ಹಿಂದಿದೆ.

ಅಂತೂ ಮೋದಿಯ ಸರಕಾರ ಬೆವರು ಸುರಿಸದೇ ಉಣ್ಣುವ ಖಾವಿಗಳನ್ನು, ಉದ್ಯಮಪತಿಗಳನ್ನು ಇನ್ನಿಲ್ಲದಂತೆ ಪೋಷಿಸಿ ಸಾಕುತ್ತಿದೆಯೇ ಹೊರತು ಜನ ಸಾಮಾನ್ಯನಿಗೆ ಬರೀ ಹುಸಿ ಆಶ್ವಾಸನೆಗಳಷ್ಟೆ ಗತಿ. ಇದೇನಾ ಅಚ್ಛೇ ದಿನ್?

- ಅವಿನಾಶ್ ಎಮ್.ಎಸ್. ನೆಲ್ಲಿಕಾರ್

ವಿ.ಸೂ. : ನಿಮ್ಮ ಅನಿಸಿಕೆಗಳನ್ನು
lankesh70@rediffmail.com ಗೆ ಮಿಡಿ
ಅಥವಾ ಬರಹ ತಂತ್ರಾಂಶದಲ್ಲಿ ಕಳುಹಿಸಬಹುದು.ನಿಮ್ಮ
ಪ್ರತಿಕ್ರಿಯೆಗಳನ್ನು **9980331427** ನಂಬರ್‌ಗೂ
ಚಿಕ್ಕದಾಗಿ ಮತ್ತು ಚೊಕ್ಕದಾಗಿ **SMS** ಕಳುಹಿಸಬಹುದು.



ಕಮರ್ಷಿಯಲ್ ಸಿನಿಮಾಗಳ ಜತೆಜತೆಗೆ ಪ್ರಯೋಗಾತ್ಮಕ ಚಿತ್ರಗಳಲ್ಲೂ ಹರಿಪ್ರಿಯಾ ಕಾಣಿಸಿಕೊಳ್ಳುತ್ತಿದ್ದಾರೆ. ಅದಕ್ಕೆ ಸಾಕ್ಷಿ ಅನ್ನುವಂತೆ ಮೊನ್ನೆಯಷ್ಟೇ 'ರಿಕ್ಕಿ' ಸಿನಿಮಾ ರಿಲೀಸ್ ಆಗಿದೆ. ಇನ್ನಷ್ಟೇ 'ನೀರ್‌ದೋಸೆ' ಚಿತ್ರ ಬಿಡುಗಡೆ ಆಗಬೇಕಿದೆ. ಈ ಕುರಿತಾದ ಅವರ ಜತೆಗಿನ ಮಾತುಕತೆ ಇಲ್ಲಿದೆ.

ಬೋಲ್ಡ್ ಪದದ ಅರ್ಥ ನನಗೆ ತಿಳಿದಿಲ್ಲ: ಹರಿಪ್ರಿಯಾ

ಮೂರು ಭಾಷೆಗಳ ಸಿನಿಮಾಗಳಲ್ಲಿ ಏಕಕಾಲಕ್ಕೆ ನಟಿಸಿದ ಕೀರ್ತಿ ಹರಿಪ್ರಿಯಾಗೆ ಸಲ್ಲಬೇಕು. ಗಾಸಿಪ್‌ಗಳ ಜತೆಜತೆಗೇ ತಮ್ಮ ಕೆರಿಯರ್ ಅನ್ನು ಗಟ್ಟಿಯಾಗಿ ಕಟ್ಟಿಕೊಂಡವರು ಹರಿಪ್ರಿಯಾ. ಕನ್ನಡದ ಬಹುತೇಕ ಸ್ಟಾರ್ ನಟರ ಜತೆ ತೆರೆ ಹಂಚಿಕೊಂಡ ಇವರು, ತಮಿಳು ಮತ್ತು ತೆಲುಗಿನಲ್ಲೂ ಹೆಸರಾಂತ ನಟರ ಚಿತ್ರಕ್ಕೆ ನಾಯಕಿಯಾಗಿದ್ದಾರೆ. ಸದ್ಯ ಕಮರ್ಷಿಯಲ್ ಚಿತ್ರಗಳ ಜತೆಗೆ ಪ್ರಯೋಗಾತ್ಮಕ ಸಿನಿಮಾಗಳಲ್ಲೂ ತಮ್ಮನ್ನು ತಾವು ತೊಡಗಿಸಿಕೊಂಡು ಗೆಲುವು ಸಾಧಿಸುತ್ತಿದ್ದಾರೆ.


** ಇತ್ತೀಚಿನ ದಿನಗಳಲ್ಲಿ ನೀವು ಸಖತ್ ಬದಲಾಗಿದ್ದೀರಿ ಅನ್ನುವ ಮಾತಿದೆ. ನೀವು ಈ ಮಾತನ್ನು ಒಪ್ಪಿಕೊಳ್ಳುತ್ತೀರಾ?*

ಸಕಾರಾತ್ಮಕವಾಗಿ ನಾನು ಬದಲಾಗಿದ್ದೇನೆ. ಇದನ್ನು ಒಪ್ಪಿಕೊಳ್ಳುತ್ತೇನೆ. ನಿರೀಕ್ಷೆ ಮಾಡದೇ ಇರುವ ಪಾತ್ರವೊಂದು ನಮ್ಮನ್ನೇ ಹುಡುಕಿಕೊಂಡು ಬಂದಾಗ, ಸಹಜವಾಗಿಯೇ ಎಲ್ಲರಿಗೂ ಖುಷಿ ಆಗುತ್ತದೆ. ಅಂತಹ ಸಂಭ್ರಮ ನನಗೆ ದಕ್ಕಿದೆ. ಹೀರೋಯಿನ್ ಅಂದರೆ ಗ್ಲಾಮರ್‌ಗೆ ಮಾತ್ರ ಸೀಮಿತ ಅನ್ನುವ ಮಾತಿತ್ತು, ಅದನ್ನು ನನ್ನಂತೆ ಅನೇಕ ನಾಯಕಿಯರು ಮುರಿಯುತ್ತಿದ್ದಾರೆ. ನಮಗೂ ಎಲ್ಲಾ ರೀತಿಯ ಪಾತ್ರವನ್ನು ನಿರ್ವಹಿಸಲು ಬರುತ್ತದೆ ಅನ್ನುವುದನ್ನು ತೋರಿಸಿದ್ದಾರೆ.

** 'ರಿಕ್ಕಿ'ಯಲ್ಲಿ ನೀವು ನಕ್ಸಲೈಟ್ ಹುಡುಗಿಯ ಪಾತ್ರ ಮಾಡಿದ್ದೀರಿ. ಅಭಿಮಾನಿಗಳ ಪ್ರತಿಕ್ರಿಯೆ ಹೇಗಿತ್ತು?*

ಅತ್ಯಂತ ಖುಷಿ ಕೊಟ್ಟ ಚಿತ್ರಗಳಲ್ಲಿ 'ರಿಕ್ಕಿ' ಕೂಡ ಒಂದು. ಈ ಸಿನಿಮಾದಲ್ಲಿ ನನಗೆ ಭಿನ್ನವಾದ ಎರಡು ಪಾತ್ರಗಳನ್ನು ನಿರ್ವಹಿಸಲು ಅವಕಾಶ ಸಿಕ್ಕಿತ್ತು. ಆ ಪಾತ್ರಗಳನ್ನು ಮಾಡುವುದು ಸವಾಲಾಗಿತ್ತು. ತುಂಬಾ ಎಫರ್ಟ್ ಹಾಕಿದೆ. ಪಾತ್ರಕ್ಕಾಗಿಯೇ ಒಂದಿಷ್ಟು ಸ್ಟಡಿ ಮಾಡಿದೆ. ನನ್ನ ಶ್ರಮಕ್ಕೆ ಒಳ್ಳೆಯ ಪ್ರತಿಕ್ರಿಯೆ ಸಿಕ್ಕಿದೆ. ನಿರೀಕ್ಷೆಗೂ ಮೀರಿ ಜನರು ನನ್ನ ನಟನೆ ಮೆಚ್ಚಿದ್ದಾರೆ.

** ಕನ್ನಡದಲ್ಲಿ ಅವಕಾಶ ಸಿಗಲಿಲ್ಲ ಅನ್ನುವ ಕಾರಣಕ್ಕೆ ಬೇರೆ ಸಿನಿಮಾರಂಗದತ್ತ ಮುಖ ಮಾಡಿದವರು ನೀವು. ಈಗ ಸ್ಯಾಂಡಲ್‌ವುಡ್ ನಿಮ್ಮನ್ನು ಹೇಗೆ ಸ್ವೀಕರಿಸಿದೆ?*



ನಾನು ಈ ವೃತ್ತಿಯನ್ನು ತುಂಬಾನೇ ಸೀರಿಯಸ್ ಆಗಿ ತಗೆದುಕೊಂಡವಳು. ಮೊದಮೊದಲು ಈ ರಂಗವನ್ನು ಕ್ಯಾಸುವಲ್ ಆಗಿ ಟ್ರೀಟ್ ಮಾಡಿದ್ದೆ ಈಗ ಹಾಗೆ ಮಾಡೋಕೆ ಸಾಧ್ಯವೇ ಇಲ್ಲ. ಒಂದು ಪಾತ್ರ ನಿರ್ವಹಿಸಿದ ನಂತರ, ಮತ್ತೊಂದು ಹೊಸತನ್ನು ಹುಡುಕುತ್ತೇನೆ. ಹೀಗಾಗಿಯೇ ಕನ್ನಡದಲ್ಲಿ ಹೆಚ್ಚೆಚ್ಚು ಅವಕಾಶಗಳು ಸಿಗುತ್ತಿವೆ. ಸಿನಿಮಾ ರಂಗಕ್ಕೆ ಕಾಲಿಟ್ಟಾಗ ನನಗೆ ಕನ್ನಡದಲ್ಲಿ ಅವಕಾಶಗಳು ಕಡಿಮೆ ಇದ್ದದ್ದು ನಿಜ. ಆಗ ನಾನು ಪರ ಭಾಷೆಗಳತ್ತ ಮುಖ ಮಾಡಿದ್ದು ನಿಜ. ಈಗ ಉತ್ತಮ ಅವಕಾಶಗಳು ಸಿಗುತ್ತಿವೆ.

** ಸ್ಯಾಂಡಲ್‌ವುಡ್ ಹೀರೋಯಿನ್ ಬೋಲ್ಡ್ ಪಾತ್ರಗಳನ್ನು ಮಾಡುವುದಿಲ್ಲ ಅನ್ನುವ ಆರೋಪವಿದೆ. ಇದಕ್ಕೆ ನಿಮ್ಮ ಉತ್ತರವೇನು?*

ಕೆಲವು ನಾಯಕಿಯರು ಹಾಗೆ ಇರಬಹುದು. ಆದರೆ, ಎಲ್ಲರೂ ಹಾಗೆ ಅನ್ನುವುದು ಸರಿಯಲ್ಲ. ಬೋಲ್ಡ್ ಪಾತ್ರ ಅಂದರೆ ಏನು ಅನ್ನುವುದು ನನಗೆ ಅರ್ಥವಾಗುತ್ತಿಲ್ಲ. 'ನೀರ್‌ದೋಸೆ'ಯ ಫೋಟೋ ಶೂಟ್ ನೋಡಿದವರು ಅದನ್ನು ಬೋಲ್ಡ್ ಅಂದರು. ನನಗೆ ಅದು ಕೇವಲ ಪಾತ್ರ. ಆ ಪಾತ್ರಕ್ಕಿರುವ ಹಿನ್ನೆಲೆಯೇ ಹಾಗಿದೆ. ಕಲಾವಿದೆಯಾಗಿ ನಾನು ಅದನ್ನು ಪಾಲಿಸಬೇಕು. ಇದನ್ನೇ ಬೋಲ್ಡ್ ಅನ್ನುವುದಾದರೆ, ಬಾಲಿವುಡ್ ನಟಿಯರ ಬಗ್ಗೆ ಏನು ಹೇಳಬಹುದು?

** 'ನೀರ್‌ದೋಸೆ'ಯ ಪಾತ್ರವನ್ನು ನೀವು ಒಪ್ಪಿಕೊಂಡಿದ್ದು ಯಾಕೆ? ರಮ್ಯಾ ದೂರ ಸರಿದ ವಿಷಯ ನಿಮಗೆ ಗೊತ್ತಿತ್ತಾ?*

ನಿರ್ದೇಶಕರು ಎಲ್ಲವನ್ನೂ ನನಗೆ ಹೇಳಿದ್ದರು. ನಿರ್ದೇಶಕರು ನನ್ನ ಜತೆ ಮಾತಾಡಿದಾಗ, ಅಂತಹ ಪಾತ್ರವನ್ನು ಮಾಡಬೇಕು ಎಂದು ಹೇಳಿದಾಗ ಸ್ವಲ್ಪ ಹಿಂಜರಿದೆ. ಸಮಾಜ ಈ ಪಾತ್ರವನ್ನು ಹೇಗೆ ಸ್ವೀಕರಿಸುತ್ತದೆ ಅನ್ನುವ ಭಯವಿತ್ತು. ನನ್ನ ಮನೆಯವರು, ಸ್ನೇಹಿತರು ಹುರಿದುಂಬಿಸಿದರು. ನನ್ನ ಕಲ್ಪನೆಗೂ ನಿಲುಕದ ಪಾತ್ರವನ್ನು ಒಪ್ಪಿಕೊಂಡಾಗ ನಿಜಕ್ಕೂ ಥ್ರಿಲ್ ಆಗುತ್ತದೆ. ಅದನ್ನು ನಾನು ಎಂಜಾಯ್ ಮಾಡುತ್ತೇನೆ.

** ನಟನೆಯ ಜತೆಗೆ ನಿರ್ದೇಶನ ಮಾಡುವ ಆಸೆ ಇದೆಯಾ?*

ನಿರ್ದೇಶಕಿ ಆಗುವ ಯಾವ ಆಸೆಯೂ ನನಗಿಲ್ಲ. ಆದರೆ, ಓದುವ ಆಸಕ್ತಿ ಬೆಳೆಸಿಕೊಂಡಿದ್ದೇನೆ. ಎಲ್ಲಾ ಚಿಂತನೆಯ ಪ್ರೇಕ್ಷಕರು ನಮ್ಮ ಚಿತ್ರಗಳನ್ನು ನೋಡುವುದರಿಂದ, ನಾನು ಅವರನ್ನು ಅರ್ಥ ಮಾಡಿಕೊಳ್ಳಬೇಕು. ಅವರನ್ನು ಅರ್ಥಮಾಡಿಕೊಳ್ಳಲು ಬೇರೆ ಬೇರೆ ಬರವಣಿಗೆ ಓದಬೇಕು. ಹೀಗಾಗಿ ಪ್ರತಿ ದಿನವೂ ಒಂದಿಲ್ಲೊಂದು ವಿಷಯದತ್ತ ಕಣ್ಣು ಹಾಯಿಸುತ್ತೇನೆ. ಅದನ್ನು ಸಾಧ್ಯವಾದಷ್ಟು ತಿಳಿದುಕೊಳ್ಳಲು ಪ್ರಯತ್ನಿಸುತ್ತೇನೆ. ಅಲ್ಲದೇ ಅನಿಸಿದ್ದನ್ನೂ ಬರೆವಿದುತ್ತಿದ್ದೇನೆ. ■

ಕನ್ನಡಕ್ಕೆ ಜೂಹಿ ಚಾವ್ಲಾ

ಬಾಲಿವುಡ್ ತಾರೆ ಜೂಹಿ ಚಾವ್ಲಾ ಮತ್ತೆ ಕನ್ನಡ ಸಿನಿಮಾದಲ್ಲಿ ನಟಿಸಲಿದ್ದಾರೆ. ಅವರು ರಮೇಶ್ ಅರವಿಂದ್ ಜತೆ ನಟಿಸಲಿದ್ದಾರೆ ಅನ್ನುವ ಮಾತು ಕೇಳಿಬಂದಿತ್ತು. ಅಲ್ಲದೇ ರವಿಚಂದ್ರನ್ ಪುತ್ರ ಮನೋರಂಜನ್ ಚಿತ್ರದಲ್ಲಿ ಜೂಹಿ ನಾಯಕನ ತಾಯಿಯಾಗಿ ಕಾಣಿಸಿಕೊಳ್ಳಲಿದ್ದಾರೆ ಎಂಬ ಸುದ್ದಿಯೂ ಹರಿದಾಡಿತ್ತು. ಇದರಲ್ಲಿ ಒಂದು ಪಕ್ಕಾ ಆಗಿದೆ. ರಮೇಶ್ ಅರವಿಂದ್ ನಟನೆಯ 'ಪುಷ್ಪಕ ವಿಮಾನ'ದಲ್ಲಿ- ಜೂಹಿ ನಟಿಸಲು ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ. ಮುಂದಿನ ತಿಂಗಳು ಮೊದಲ ವಾರದಲ್ಲೇ ಶೂಟಿಂಗ್‌ನಲ್ಲಿ ಪಾಲ್ಗೊಳ್ಳುವುದಾಗಿ ಹೇಳಿದ್ದಾರೆ.

ಕನ್ನಡ ಸಿನಿಮಾ ರಂಗ ಇವರಿಗೆ ಹೊಸದೇನೂ ಅಲ್ಲ. ರವಿಚಂದ್ರನ್ ಜತೆ ಈಗಾಗಲೇ ಜೂಹಿ ತೆರೆ ಹಂಚಿಕೊಂಡಿದ್ದಾರೆ. ತುಂಬಾ ವರ್ಷಗಳ ನಂತರ ಮತ್ತೆ ಕನ್ನಡ ಚಿತ್ರದಲ್ಲಿ ನಟಿಸುತ್ತಿದ್ದಾರೆ.

ಅಂದಹಾಗೆ 'ಪುಷ್ಪಕ ವಿಮಾನ' ಮೂಕಿ ಸಿನಿಮಾವಲ್ಲ. ತಂದೆ ಮತ್ತು ಮಗಳ ಬಾಂಧವ್ಯದ ಕತೆಯನ್ನು ಹೊತ್ತು ತಂದ ಟಾಕಿಚಿತ್ರ. ಈಗಾಗಲೇ ರಿಲೀಸ್ ಆಗಿರುವ ಈ ಸಿನಿಮಾದ ಟೀಸರ್ ಸಖತ್ ಸೌಂಡ್ ಮಾಡಿದೆ. ಅದರಲ್ಲೂ ರಮೇಶ್ ಪಾತ್ರದ ಬಗ್ಗೆ ಮೆಚ್ಚುಗೆಯ ಮಾತೂ ಕೇಳಿಬಂದಿದೆ.



ರಮೇಶ್ ಅರವಿಂದ್
ಜೂಹಿ ಚಾವ್ಲಾ



ಪಾರೂಲ್ ಮೇಲೆ ಪವನ್ ಪ್ರೀತಿ

ಪಾರೂಲ್ ಯಾದವ್ ಮತ್ತು ನಿರ್ದೇಶಕ ಪವನ್ ಒಡೆಯರ್ ಇಬ್ಬರೂ ಪ್ರೀತಿಸುತ್ತಿದ್ದಾರೆ ಅನ್ನುವ ಸುದ್ದಿ ಗುಟ್ಟಾಗಿ ಉಳಿದಿಲ್ಲ. ನಮ್ಮಿಬ್ಬರ ಮಧ್ಯೆ ಅಂಥದ್ದು ಏನೂ ಇಲ್ಲ ಅಂತ ಈ ಜೋಡಿ ಹೇಳಿಕೊಂಡರೂ, ಇದೇ ವಿಷಯಕ್ಕಾಗಿ ಆಗಾಗ್ಗೆ ಇವರು ಸದ್ದು ಮಾಡುತ್ತಾರೆ. ಈ ಬಾರಿಯೂ ಇದೇ ಕಾರಣಕ್ಕೆ ಸುದ್ದಿಯಾಗಿದ್ದಾರೆ. ಪವನ್ ಒಡೆಯರ್ ನಿರ್ದೇಶನದ 'ಜೆಸ್ಸಿ' ಸಿನಿಮಾದಲ್ಲಿ ಪಾರೂಲ್ ನಾಯಕಿ. ಇವರಿಗಾಗಿಯೇ ನಿರ್ದೇಶಕರು ಈ ಪಾತ್ರವನ್ನು ಸೃಷ್ಟಿ ಮಾಡಿದ್ದರಂತೆ. ಮೂರು ವರ್ಷಗಳ ಹಿಂದೆಯೇ ಪಾರೂಲ್‌ರನ್ನು ಈ ಪಾತ್ರಕ್ಕಾಗಿ ಬುಕ್ ಮಾಡಿದ್ದರಂತೆ. ಹೀಗಾಗಿ ಇವರಿಬ್ಬರೂ ಪ್ರೇಮಿಗಳು ಎನ್ನುತ್ತಿದೆ ಗಾಂಧಿನಗರ. ಆದರೆ, ಮತ್ತೆ ಈ ವಿಷಯವನ್ನು ಅಲ್ಲಗಳೆಯುತ್ತಾರೆ ಪಾರೂಲ್. "ನಾವಿಬ್ಬರೂ ಕ್ಲೋಸ್ ಫ್ರೆಂಡ್ಸ್. ಕನ್ನಡ ಸಿನಿಮಾ ರಂಗಕ್ಕೆ ನನ್ನನ್ನು ಪರಿಚಯಿಸಿದ್ದು ಪವನ್. ಹೀಗಾಗಿ ನಮ್ಮಿಬ್ಬರ ಬಗ್ಗೆ ಇಂತಹ ಮಾತುಗಳು ಕೇಳಿ ಬರುತ್ತಿರಬಹುದು. ಗೆಳೆತನಕ್ಕೆ ಪ್ರೇಮದ ಕಳಸ ಇಡಬೇಡಿ" ಅಂದಿದ್ದಾರೆ. ಆದರೆ ಪವನ್ ಮಾತ್ರ ಈ ಕುರಿತು ಏನೂ ಹೇಳುತ್ತಿಲ್ಲ. ಪ್ರಶ್ನೆ ಕೇಳಿದರೆ ನಕ್ಕು ಸುಮ್ಮನಾಗುತ್ತಾರೆ.

ಕೃಷಿಯತ್ತ ರಮ್ಯಾ ಚಿ

ಸಿನಿಮಾ ರಂಗದಿಂದ ಬಹುದೂರ ಸಾಗಿರುವ ರಮ್ಯಾಗೆ ಕೃಷಿ ಪ... ಆಸಕ್ತಿ ಮೂಡಿದೆ. ಅದರಲ್ಲೂ ಅವರು ಸಾವಯವ ಕೃಷಿ ಬಗ್ಗೆ ಅಂ... ಸ್ಟಡಿ ಕೂಡ ಮಾಡಿದ್ದಾರೆ. ಅಲ್ಲಿ ಪಡೆದಿರುವ ಜ್ಞಾನವನ್ನು ಮಂಡ್ಯದ ... ಹಂಚುವ ಉತ್ಸುಕತೆ ಅವರಲ್ಲಿದೆ. ಅಲ್ಲದೇ ಮಂಡ್ಯದ ಸಮೀಪವೇ ಗ... ಖರೀದಿಸಿ, ಅಲ್ಲಿ ಕೃಷಿ ಚಟುವಟಿಕೆ ಕೈಗೊಳ್ಳಲಿದ್ದಾರಂತೆ. ಇದ... ರೈತರಿಗಾಗಿಯೇ ಆಪ್ ಕೂಡ ಮಾಡಿದ್ದಾರೆ. ಈ ಮೂಲಕ ... ಮಾರುಕಟ್ಟೆಯನ್ನು ಸೃಷ್ಟಿಸುವ ಯೋಚನೆಯೂ ಅವರಿಗಿದೆ. ಮ... ಬೆಳೆದ ಬೆಳೆಯ ಬಗ್ಗೆ ಈ ಆಪ್‌ನಲ್ಲಿ ಅಪ್‌ಲೋಡ್ ಮಾಡಲ... ಇಲ್ಲಿಂದಲೇ ಕೃಷಿಯ ಉತ್ಪನ್ನಗಳನ್ನು ಖರೀದಿಸಬಹುದಂತೆ.

ಚುನಾವಣೆಯಲ್ಲಿ ಸೋತರೂ, ರಮ್ಯಾ ರಾಜಕಾರಣದಲ್ಲೇ ಬಿಜಿ ... ಹೀಗಾಗಿ ಸಿನಿಮಾ ರಂಗದತ್ತ ಅವರು ಯೋಚನೆಯನ್ನೂ ಮಾಡು... ಮುಂದಿನ ದಿನಗಳಲ್ಲೂ ಅವರು ನಟಿಸುವುದಿಲ್ಲವೆಂದು ಸ್ಪಷ್ಟಪ... ಅರ್ಧಕ್ಕೆ ನಿಂತಿರುವ ಇವರ ನಟನೆಯ 'ದಿಲ್ ಕಾ ರಾಜಾ' ಸಿನಿ... ರೀಶೂಟ್ ಮಾಡುವುದಾಗಿ ನಿರ್ದೇಶಕರು ಹೇಳಿದ್ದಾರೆ. ಹೀಗಾಗಿ ... ಬಹುತೇಕವಾಗಿ ಸಿನಿಮಾ ರಂಗ ಬಿಟ್ಟಂತಾಯಿತು. ಆದರೂ, ಸಿನಿಮಾ ರಂಗದ ಚಟುವಟಿಕೆಗಳಲ್ಲಿ ಭಾಗವಹಿಸುವುದಾಗಿ ಹೇಳಿದ್ದಾರೆ. ಅದರಲ್ಲೂ ನಾಯಕಿಯರ ಸಮಸ್ಯೆ ಬಗ್ಗೆ ಮುಂಚೂಣಿಯಲ್ಲಿ ನಿಂತು ಹೋರಾಟ ಮಾಡುತ್ತೇನೆ ಎಂದೂ ಹೇಳಿದ್ದಾರೆ.



ಪಬ್ಲಿಸಿಟಿಗಾಗಿ ಕಿತ್ತಾಡಿಕೊಂಡ ಸ್ಟೈಲ್‌ಕಿಂಗ್

ಗೋಲ್ಡನ್ ಸ್ಟಾರ್ ಗಣೇಶ್ ಮತ್ತು ನಿರ್ದೇಶಕ ಪಿ.ಸಿ.ಶೇಖರ್ ಕಿತ್ತಾಡಿಕೊಂಡಿರುವ ಸುದ್ದಿಗೆ ಹೊಸ ತಿರುವು ಸಿಕ್ಕಿದೆ. ಈ ಜೋಡಿಯ 'ಸ್ಟೈಲ್‌ಕಿಂಗ್' ಸಿನಿಮಾ ಇನ್ನಷ್ಟೇ ಬಿಡುಗಡೆ ಆಗಬೇಕಿದೆ. ಹೀಗಾಗಿ ಶೇಖರ್ ಪಬ್ಲಿಸಿಟಿ ಪ್ಲಾನ್ ಮಾಡಿದ್ದಾರೆ. ಇದರಲ್ಲಿ ಗಲಾಟೆ ಕೂಡ ಒಂದಾಗಿದೆ.

ನಿರ್ದೇಶಕರು ನೆಗೆಟಿವ್ ಪಬ್ಲಿಸಿಟಿ ಮಾಡುವುದರಲ್ಲಿ ಫೇಮಸ್. ಈ ಹಿಂದೆ ಕೂಡ ಸುಖಾಸುಮ್ಮನೆ ಸೆನ್ಸಾರ್ ಆಫೀಸರ್ ಜತೆ ಕಿರಿಕ್ ಮಾಡಿಕೊಂಡಿದ್ದರು. ಭರ್ಜರಿ ಪ್ರಚಾರವನ್ನೂ ಪಡೆದಿದ್ದರು. ಈಗ ಗಣೇಶ್ ಜತೆ ಗಲಾಟೆ ಮಾಡಿಕೊಂಡು, ಇವರೇ ಮಾಧ್ಯಮದವರಿಗೆ ಈ ವಿಷಯವನ್ನು ಮುಟ್ಟಿಸುತ್ತಿದ್ದಾರೆ. ಈ ಸುದ್ದಿ ತಿಳಿಯುತ್ತಿದ್ದಂತೆಯೇ ಗಣೇಶ್ ಕೂಡ ಗರಂ ಆಗಿದ್ದಾರೆ. ಈ ಅಸಮಾಧಾನದ ಬಗ್ಗೆ ಗಣೇಶ್ ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ. ಹೀಗಾಗಿ ಗಣೇಶ್ ಅಭಿಮಾನಿಗಳು ತಮ್ಮ ನೆಚ್ಚಿನ ನಟನ ಬೆನ್ನಿಗೆ ನಿಂತಿದ್ದಾರೆ. ಶೇಖರ್ ವಿರುದ್ಧ ತಮ್ಮ ಆಕ್ರೋಶವನ್ನೂ ಅಭಿಮಾನಿಗಳು ಹೊರ ಹಾಕಿದ್ದಾರೆ. ಇದು ಕೂಡ ಗಿಮಿಕ್ ಅನ್ನಲಾಗುತ್ತಿದೆ. ಹೀಗಾಗಿ ಸತ್ಯ ಏನು ಅಂತ ಅವರ ಸಿನಿಮಾನೇ ಹೇಳಬೇಕಿದೆ.

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com